
70

ಕೊಡವ ಜನಪದ ನೃತ್ಯಗಳು ಒಂದು ಅಧ್ಯಯನ

(ಸಂಶೋಧನಾ ಪ್ರಬಂಧ)



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಮಡಿಕೇರಿ

ಕೊಡವ ಜನಪದ ನೃತ್ಯಗಳು

ಒಂದು ಅಧ್ಯಯನ

(ಸಂಶೋಧನಾ ಪ್ರಬಂಧ)

ಶ್ರೀಮತಿ ಮುಲ್ಲೇಂಗಡ ರೇವತಿ ಪೂವಯ್ಯ
ತೂಕ್‌ಬೊಳಕ್
ವಿರಾಜಪೇಟೆ

KODAVA JANAPADA NRITHYAGALU- A Study of Kodava Folk Dances written by Mullengada Revathi Poovaiah.

Published by Karnataka Kodava Sahithya Academy in the Year 2014.

First Print : 2014
ಆದ್ಯ ಮುದ್ರಣ : 2014

Price : Rs. 70/-
ಕ್ರಯ : ರೂ. 70/-

ಬೊಳಿ ಪಡ್‌ತ್‌ನವು :
ರಿಜಿಸ್ಟ್ರಾರ್
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಸ್ಕೌಟ್ ಭವನ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ - 571 201

ಅಚ್ಚ್‌ಕಾರ:
ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ, ಮಡಿಕೇರಿ

ಅರಿಕೆ

ಫೆಲೋಶಿಪ್ ನೀಡಿ ಅಧ್ಯಯನಕ್ಕೆ ಹಾಗೂ ಸಂಶೋಧನಾ ಪ್ರಬಂಧ ರಚನೆಗೆ ಅವಕಾಶ ಒದಗಿಸಿದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಗೆ ಕೃತಜ್ಞತೆಗಳು.

ಸಂಶೋಧನಾ ಕಾರ್ಯದಲ್ಲಿ ಸಹಕರಿಸಿದ ಹಿರಿಯ ಜಾನಪದ ತಜ್ಞರನ್ನು, ಕಲಾವಿದರನ್ನು ಹಾಗೂ ಸರ್ವರನ್ನೂ ಗೌರವ ಪೂರ್ವಕವಾಗಿ ಸ್ಮರಿಸುತ್ತೇನೆ.

ಕಾವೇರಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಸಹೋದ್ಯೋಗಿ ಮಿತ್ರರು ಹಾಗೂ ವಿದ್ಯಾರ್ಥಿ ವೃಂದಕ್ಕೆ ನಾನು ಆಭಾರಿ. ನನ್ನನ್ನು ತಿದ್ದಿತೀಡಿ ಬೆಳೆಸಿದ ನನ್ನ ಹೆತ್ತವರು, ಸದಾ ಪ್ರೋತ್ಸಾಹಿಸುವ ಅತ್ತೆ ಮಾವ, ನನ್ನ ಹವ್ಯಾಸಕ್ಕೆ ಪ್ರೇರಕ ಪೋಷಕ ಶಕ್ತಿಯಾದ ನನ್ನ ಬಾಳ ಸಂಗಾತಿ ಹಾಗೂ ನನ್ನ ಮುದ್ದು ಮಕ್ಕಳಿಗೆ ಪ್ರೀತಿಪೂರ್ವಕ ಧನ್ಯವಾದಗಳು. ನನ್ನ ಸಹೋದರಿಯರು ಹಾಗೂ ನನ್ನೆಲ್ಲ ಬಂಧು ಮಿತ್ರರಿಗೂ ಹೃತ್ಪೂರ್ವಕ ವಂದನೆಗಳು.

ಮುಲ್ಲೇಂಗಡ ರೇವತಿ ಪೂವಯ್ಯ

ವಿರಾಜಪೇಟೆ

ಆದ್ಯಮೊಳಿ ತಕ್ಕ್

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಕೊಡವ ಭಾಷೆ, ಸಂಸ್ಕೃತಿ, ಜಾನಪದತ್‌ರ ಉಳಿಕೆ-ಬೊಳಚೆರ ಬಟ್ಟೆಲ್ ತಾಂಡ ಕೈಲಾಪ ಕಾರ್‌ಬಾರ್‌ನ ಮಾಡಿಯಂಡೇ ಬಂದೇಡುಂಡ್. ಇಂದೇತ ಜಾಗತಿಕ ಸನ್ನಿವೇಶತ್‌ಲ್ ಸಂಶೋಧನೆ ದುಂಬಾ ಬೋಂಡಿಯಾನಂತ ವಿಚಾರ. ಈ ನ್ ಟ್ಟ್‌ಲ್ ಕನ್ನಡ ಸಂಸ್ಕೃತಿ ಇಲಾಖೆ ಈ ವಿಷಯತ್ ಒತ್ತಾಸೆ ತಂದಿತ್ ಸಂಶೋಧನಾ ಯೋಜನೆಕ್ ಪಣಕಾಸ್‌ರ ಸಹಾಯ ಮಾಡಿತ್.

ಶ್ರೀಮತಿ ಮುಲ್ಲೇಂಗಡ ರೇವತಿ ಪೂವಯ್ಯ 'ಕೊಡವ ಜನಪದ ನೃತ್ಯಗಳು ಒಂದು ಅಧ್ಯಯನ' ಎಣ್ಣುವ ವಿಷಯತ್ ಸಮಗ್ರ ಅಧ್ಯಯನ, ಸಂಶೋಧನೆ ಮಾಡಿತುಳ್ಳಾನ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಬೊಳಿಪಡ್‌ತಿಯಂಡುಂಡ್. ಇದ್‌ಲ್ ಕೊಡವ ಜನಪದ ನೃತ್ಯತ್‌ರ ಮೀದ ಇಕ್ಕಾಕಣಕ್ ಇಂಗ್ಲೀಷ್, ಕನ್ನಡ, ಕೊಡವ ಭಾಷೆಲ್ ಆನಂತ ಅಧ್ಯಯನತ್‌ರ ವಿವರ, ತರಾವರಿ ನೃತ್ಯಪ್ರಕಾರ, ವಾದ್ಯ ಪಿಂ ಗೀತ ಪ್ರಧಾನ ಆಯಿತುಳ್ಳ ನೃತ್ಯತ್‌ರ ವಿವರತ್‌ರ ಕೂಟ್‌ಕ್ ಕೊಡವೇತರ ಜನಪದ ನೃತ್ಯ ಪ್ರಕಾರತ್‌ರ ಕೂಡೆ ಕೊಡವ ಜನಪದ ನೃತ್ಯತ್‌ನ ತೌಲನಿಕವಾಯಿತ್ ನೋಟುವಂಜಿ ಕೊಡವ ಜನಪದ ನೃತ್ಯ ವಿಶೇಷತೆಲುಳ್ಳ ಸಾಂಸ್ಕೃತಿಕ ಅಂಶತ್‌ನೋ ಅರಿವನ್ನತ ಪ್ರಯತ್ನ ಮಾಡಿತ್, ಈ ಕ್ಷೇತ್ರತ್‌ಲ್ ಮಿಂಙಕ್ ಇಂಙಚ್ಚಕ್ ವಿಶೇಷ ಸಂಶೋಧನೆಕ್ ಉಳ್ಳ ಬಟ್ಟೆ-ಬೊಳಿನ ಕಾಟಿತ್. ಇನ್ನತ ನಲ್ಲ ಕಾರ್ಬಾರ್‌ನ ಮಾಡ್‌ನ ಇಯಂಗಕ್ ಅಕಾಡೆಮಿರ ಪರವಾಯಿತ್ ಅಭಿನಂದನೆ ಪಿಂ ಶುಭಾಶಯತ್‌ನ ಬಯಂದವಿ. ಈ ಸಂಶೋಧನೆರ ವಿಷಯತ್‌ರ ಆಯ್ಕೆ, ಕರಡ್ ತಿದ್ದುವೊ (ಪ್ರೂಫ್ ರೀಡಿಂಗ್) ಎಲ್ಲಾ ಕಾರ್ಬಾರ್‌ನೋಪಳೆಯ ಸಮಿತಿಯೇ ವಯಿಸಿಯಂಡಿತಿಂಜತ್. ಇದ್‌ನ ಪ್ರಕಟಮಾಡ್‌ವನ್ನತ ಜವಾಬ್ದಾರಿನ ಮಾತ್ರ ಪುದಿಯ ಸಮಿತಿ ಮಾಡಿತ್‌ಂದೆಣ್ಣ್‌ವಕ್ ಇಷ್ಟಪಡುವಿ.

ಈ ನ್ ಟ್ಟ್‌ಲ್ ಈ ಸಂಶೋಧನಾಕೃತಿ ಪೊರಬೂವಕ್ ಮೊಳಿಯಾನ ಪಳೆಯ ಸಮಿತಿರ ಅಧ್ಯಕ್ಷ, ಸದಸ್ಯಂಗ, ಪುದಿಯ ಸಮಿತಿರ ಸದಸ್ಯಂಗ, ಪುಸ್ತಕ ಎಳ್‌ದ್‌ನ ಶ್ರೀಮತಿ ರೇವತಿ ಪೂವಯ್ಯ, ಚಾಯೋಡೆ ಅಚ್ಚ್ ಮಾಡಿತಂದ ಶಕ್ತಿ ಪ್ರಿಂಟರ್ಸ್, ರಿಜಿಸ್ಟ್ರಾರ್ ಆಯಿತಿಂಜ ಶ್ರೀ ವಿನೋಬ್‌ಚಂದ್ರ, ಶ್ರೀಮತಿ ಎನ್. ಶಾಂತಮ್ಮ, ಇಕ್ಕತ್‌ರ ರಿಜಿಸ್ಟ್ರಾರ್ ಶ್ರೀಮತಿ ಮಂಗಲಾ ಎಂ. ನಾಯಕ್ ಇಯಂಗಕೆಲ್ಲಾರ್‌ಕೂ, ಈ ಸಂಶೋಧನಾ ಯೋಜನೆರ ಅವ್ವೊ ಬೇರ್ ಆಯಿತ್ ನಿಂದ ಕನ್ನಡ ಪಿಂ ಸಂಸ್ಕೃತಿ ಇಲಾಖೆಕ್ ವಂದನೆ. ಕೊಡವ ಭಾಷೆ, ಸಾಹಿತ್ಯ, ಸಂಸ್ಕೃತಿರ ಮೀದ ಪಿರ ಕೊದಿ, ಪುರ್‌ಡುಳ್ಳ ಎಲ್ಲಾ ಸಾಹಿತ್ಯಾಸಕ್ತಂಗ ಈ ಪುಸ್ತಕತ್‌ನ ಎಡ್‌ತಿತ್ ಓದಡ್. ಅನ್ನನೆ ಕೊಡವ ಸಂಸ್ಕೃತಿ ಉಳ್‌ಂಜಿ-ಎಲಂಗಡ್‌ಂದ್ ಬಯಂದವಿ.

ಬಿದ್ದಾಟಂಡ ಎಸ್. ತಮ್ಮಯ್ಯ

ಅಧ್ಯಕ್ಷ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಪಿಂ

ಪ್ರಕಟಣಾ ಸಮಿತಿರ ಸದಸ್ಯಂಗ

ಪರಿವಿಡಿ

ಪೀಠಿಕೆ

ಅ. ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ –೧ ಕೊಡವ ಜನಪದ ನೃತ್ಯಗಳ ಅಧ್ಯಯನದ ಸಮೀಕ್ಷೆ

ಅ. ಕೊಡವ ಜನಪದ ನೃತ್ಯಗಳನ್ನು ಕುರಿತಂತೆ ಇರುವ ಇಂಗ್ಲಿಷ್ ಕೃತಿಗಳು ಮತ್ತು ಲೇಖನಗಳು

ಆ. ಕೊಡವ ಜನಪದ ನೃತ್ಯಗಳ ಬಗ್ಗೆ ಚರ್ಚಿಸುವ ಕನ್ನಡ ಭಾಷಾ ಕೃತಿಗಳು ಮತ್ತು ಲೇಖನಗಳು

ಇ. ಕೊಡವ ಜನಪದ ನೃತ್ಯಗಳನ್ನು ಕುರಿತ ಕೊಡವ ಭಾಷಾ ಕೃತಿಗಳು ಮತ್ತು ಲೇಖನಗಳು

ಅಧ್ಯಾಯ –೨ ಕೊಡವ ಜನಪದ ನೃತ್ಯ ಪ್ರಕಾರಗಳು

೧. ವಾದ್ಯ ಪ್ರಧಾನ ನೃತ್ಯಗಳು

ಅ. ಕೋಲಾಟ್

ಆ. ಕೊಂಬಾಟ್

ಇ. ಬಿಲ್ಲಾಟ್

ಈ. ಪೀಲಿಯಾಟ್

ಉ. ಕೊಡಿಯಾಟ್

ಊ. ಪರೆಯಕಳಿ

ಋ. ಕಪ್ಪೆಯಾಟ್

ಎ. ವಾಲಗತ್ತಾಟ್

ಏ. ಅಂಗಕಳಿ

ಐ. ಸಿದ್ಧಿಯಾಟ್

ಪೀಠಿಕೆ

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ:-

ಕರ್ನಾಟಕದಲ್ಲಿ ತನ್ನದೇ ಆದ ಸಾಂಸ್ಕೃತಿಕ ವಿಶಿಷ್ಟತೆಗೆ ಹೆಸರಾದುದು ಕೊಡಗು. ಪ್ರಾಕೃತಿಕ ಸೌಂದರ್ಯ ಮತ್ತು ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಈ ಜಿಲ್ಲೆ ಜನಾಂಗಿಕ, ಭಾಷಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯಿಂದ ಎಲ್ಲರ ಗಮನ ಸೆಳೆಯುತ್ತಿದೆ. ಕೊಡವರು ಇಲ್ಲಿನ ಪ್ರಮುಖ ಮೂಲನಿವಾಸಿಗಳು. ಇವರೊಂದಿಗೆ ಕೊಡವ ಭಾಷೆಯನ್ನಾಡುವ, ಕೊಡವ ಸಂಸ್ಕೃತಿಯಲ್ಲಿ ಬದುಕುತ್ತಿರುವ ಸುಮಾರು ೨೫ ಕೊಡವ ಭಾಷಿಕ ಮೂಲನಿವಾಸಿಗಳು ಕೊಡಗಿನಲ್ಲಿ ನೆಲೆಸಿದ್ದಾರೆ.

ಇತಿಹಾಸವನ್ನು ಅವಲೋಕಿಸಿದಾಗ ಹಲವು ಭಾಷಿಕ ಪ್ರಭಾವಗಳಿಗೆ ಒಳಗಾಗಿದ್ದರೂ ಕೊಡವ ಸಂಸ್ಕೃತಿ ಇಂದಿಗೂ ತನ್ನ ಮೂಲ ಸ್ವರೂಪ ಹಾಗೂ ಸೊಗಡನ್ನು ಉಳಿಸಿಕೊಂಡಿದೆ. ಇಂತಹ ಅನನ್ಯ ಮತ್ತು ವಿಶಿಷ್ಟ ಸಂಸ್ಕೃತಿಯನ್ನು ಜಾನಪದ ನೆಲೆಯಿಂದ ಅರಿಯುವ ಅಗತ್ಯವಿದೆ.

ಜಾನಪದ ಬದುಕಿನ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. ಸಾಹಿತ್ಯ, ಆಟ, ಉಡುಗೆ-ತೊಡುಗೆ, ನಂಬಿಕೆ, ಊಟೋಪಚಾರ, ನೃತ್ಯ, ಸಂಪ್ರದಾಯ ಇವೆಲ್ಲವೂ ಜಾನಪದದ ವ್ಯಾಪ್ತಿಗೆ ಬರುತ್ತವೆ. ಹೀಗಾಗಿ ಜಾನಪದ ಅಧ್ಯಯನವೆಂದರೆ ಜನಪದ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಜನಪದ ಸಂಸ್ಕೃತಿಯನ್ನು ಅರಿಯಲು ಜಾನಪದ ಪ್ರಕಾರಗಳಾದ ಗೀತೆ, ಕಥೆ, ಗಾದೆ, ಒಗಟು, ಒಡಪು, ನಂಬಿಕೆ, ಆಚರಣೆಗಳು ಹೇಗೆ ಮುಖ್ಯವೋ ಹಾಗೆಯೇ ಜನಪದ ನೃತ್ಯಗಳೂ ಕೂಡ ಜನಪದರ ಮೂಲ ಸಂಸ್ಕೃತಿ ಹಾಗೂ ಜೀವನ ವಿಧಾನವನ್ನು ಅರಿಯಲು ಸೋಪಾನದ ರೀತಿ ಕಾರ್ಯ ನಿರ್ವಹಿಸುವುವು. ಅಂದರೆ ಕೊಡವ ಜನಪದ ನೃತ್ಯಗಳ ಮೂಲಕ ಜನಪದ ಸಂಸ್ಕೃತಿಯ ನೆಲೆಯನ್ನು ಗುರುತಿಸಲು ಸಾಧ್ಯ.

ಆರಂಭದಲ್ಲಿ ಕೊಡವ ಜಾನಪದ ಕ್ಷೇತ್ರಕ್ಕೆ ಗ್ರೇಯಟರ್, ,ಜಾರ್ಜ್ ರಿಕ್ಟರ್, ಕಿಟೆಲ್‌ರಂತಹ ಪಾಶ್ಚಾತ್ಯ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಕಾಣಿಕೆಯನ್ನು ನೀಡಿದ್ದಾರೆ. ಆನಂತರದ ದಿನಗಳಲ್ಲಿ ನಡಿಕೇರಿಯಂಡ ಚಿಣ್ಣಪ್ಪ, ಐ.ಮಾ.ಮುತ್ತಣ್ಣ, ಪೇರಿಯಂಡ ಚಂಗಪ್ಪ, ಬಿ.ಡಿ. ಗಣಪತಿ ಮುಂತಾದವರು ಈ ಕ್ಷೇತ್ರದಲ್ಲಿ ದುಡಿದಿದ್ದಾರೆ.

ಇವರೆಲ್ಲರ ಆಸಕ್ತಿ ಜನಪದ ಗೀತೆಗಳ ಬಗ್ಗೆ ಹೆಚ್ಚು ಕೇಂದ್ರೀಕೃತವಾಗಿತ್ತೇ ಹೊರತು ಜಾನಪದದ ಪ್ರಮುಖ ಪ್ರಕಾರವಾದ ಜನಪದ ನೃತ್ಯಗಳ ಬಗ್ಗೆ ಅಷ್ಟಾಗಿ ಗಮನಹರಿಸಿರಲಿಲ್ಲ. ಹೀಗಾಗಿ ಕೊಡವ ಜನಪದ ನೃತ್ಯಗಳ ಬಗ್ಗೆ ಸಮಗ್ರ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಈ ಹಿನ್ನಲೆಯಲ್ಲಿ ಲಭ್ಯವಿರುವ ಎಲ್ಲಾ ಆಕರಗಳನ್ನು ಬಳಸಿಕೊಂಡು, ಕ್ಷೇತ್ರಕಾರ್ಯದ ಮೂಲಕ ಕೊಡವ ಜನಪದ ನೃತ್ಯಗಳನ್ನು ದಾಖಲಿಸಿ ವಿವಿಧ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡಿ ಪರಿಚಯಿಸುವ ಪ್ರಯತ್ನ ಪ್ರಸ್ತುತ ಅಧ್ಯಯನದ ಮೂಲ ಉದ್ದೇಶವಾಗಿದೆ.

ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಸಂಶೋಧನಾ ಪ್ರಬಂಧವನ್ನು ಐದು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಆಯಾ ಅಧ್ಯಾಯಗಳಲ್ಲಿ ಉಪಶೀರ್ಷಿಕೆಗಳನ್ನು ಕೊಟ್ಟು ಸಮಗ್ರವಾಗಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ–೧ ಕೊಡವ ಜನಪದ ನೃತ್ಯಗಳ ಅಧ್ಯಯನ ನಡೆದು ಬಂದ ದಾರಿ.

ಅಧ್ಯಾಯ–೨ ಕೊಡವ ಜನಪದ ನೃತ್ಯ ಪ್ರಕಾರಗಳು

ಅಧ್ಯಾಯ–೩ ಕೊಡವ ಮತ್ತು ಕೊಡವೇತರ ಜನಪದ ನೃತ್ಯಗಳ ತೌಲನಿಕ ನೋಟ

ಅಧ್ಯಾಯ–೪ ಕೊಡವ ಜನಪದ ನೃತ್ಯಗಳಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಅಂಶಗಳು.

ಮೊದಲನೆಯ ಅಧ್ಯಾಯದಲ್ಲಿ ಕೊಡವ ಜನಪದ ನೃತ್ಯಗಳ ಅಧ್ಯಯನದ ಸಮೀಕ್ಷೆಯನ್ನು ಮಾಡಲಾಗಿದೆ. ಕೊಡವ ಜನಪದ ನೃತ್ಯಗಳು ನಿನ್ನೆ ಮೊನ್ನೆಯದಲ್ಲ. ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕೊಡವ ಜನಾಂಗ ಭೂಮಿಯ ಮೇಲೆ ಬಂದಾಗಲೇ ಕೊಡವ ಜನಪದ ನೃತ್ಯಗಳು ಸೃಷ್ಟಿಯಾದವು ಎಂಬುದರಲ್ಲಿ ಸಂಶಯವಿಲ್ಲ. ಕೊಡವ ಜನಾಂಗ ಸಾಗಿಬಂದ ಸಾವಿರಾರು ವರ್ಷಗಳ ಹಾದಿಯಲ್ಲಿ ಅವರೊಂದಿಗೆ ಬೆಳೆದು ಬಂದ ನೃತ್ಯಗಳಿವೆ. ಇವುಗಳನ್ನು ಕೆಲವು ವಿದ್ವಾಂಸರು ತಮ್ಮ ಕೃತಿಗಳು ಹಾಗೂ ಲೇಖನಗಳಲ್ಲಿ ಸಂಕ್ಷಿಪ್ತವಾಗಿ ಸಂಗ್ರಹಿಸಿ ಪರಿಚಯಿಸಿದ್ದಾರೆ. ಪ್ರಕೃತ ಅಧ್ಯಯನದಲ್ಲಿ ಕೊಡವ ಜನಪದ ನೃತ್ಯಗಳ ಅಧ್ಯಯನ ನಡೆದು ಬಂದ ದಾರಿಯ ಸಮೀಕ್ಷೆಯನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡು ನಡೆಸಲಾಗಿದೆ.

೧. ಕೊಡವ ಜನಪದ ನೃತ್ಯಗಳನ್ನು ಕುರಿತಂತೆ ಇರುವ ಇಂಗ್ಲೀಷ್ ಕೃತಿಗಳು ಮತ್ತು ಲೇಖನಗಳು.

೨. ಕೊಡವ ಜನಪದ ನೃತ್ಯಗಳ ಬಗ್ಗೆ ಚರ್ಚಿಸುವ ಕನ್ನಡ ಭಾಷಾ ಕೃತಿಗಳು ಮತ್ತು ಲೇಖನಗಳು.

೩. ಕೊಡವ ಜನಪದ ನೃತ್ಯಗಳನ್ನು ಕುರಿತ ಕೊಡವ ಭಾಷಾ ಕೃತಿಗಳು ಮತ್ತು ಲೇಖನಗಳು.

ಪ್ರತಿಯೊಂದು ವಿಭಾಗದಲ್ಲಿ ಪ್ರಕಟವಾದ ಲೇಖನ ಮತ್ತು ಕೃತಿಗಳನ್ನು ಕಾಲಾನುಕ್ರಮಕ್ಕೆ ಅನುಗುಣವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎರಡರಲ್ಲಿ ಕೊಡವ ಜನಪದನೃತ್ಯ ಪ್ರಕಾರಗಳನ್ನು ವಿವೇಚಿಸಲಾಗಿದೆ. ಕೊಡವ ಜನಪದರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳನ್ನು ಗಮನಿಸಿದಾಗ ಅವರಲ್ಲಿ ವಿಶಿಷ್ಟ ಹಾಗೂ ವೈವಿಧ್ಯಪೂರ್ಣ ಜನಪದ ನೃತ್ಯಗಳ ಸಂಖ್ಯೆ ಸಾಕಷ್ಟಿದೆ. ವಸ್ತು ವೈವಿಧ್ಯದ ದೃಷ್ಟಿಯಿಂದ ಅವುಗಳನ್ನು ಈ ಕೆಳಗಿನಂತೆ ಮೂರು ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ವಾದ್ಯ ಪ್ರಧಾನ ನೃತ್ಯಗಳು. (ಕುಣಿತಗಳು)

೨. ವಾದ್ಯ ಮತ್ತು ಗೀತ ಪ್ರಧಾನ ನೃತ್ಯಗಳು. (ಕುಣಿತಗಳು)

೩. ಗೀತ ಪ್ರಧಾನ ನೃತ್ಯಗಳು. (ಕುಣಿತಗಳು)

ಈ ಮೇಲಿನ ವಿಭಾಗಗಳಲ್ಲಿ ಬರುವ ಮುಖ್ಯ ವಸ್ತು, ವಿಷಯಗಳ ಕಡೆಗೆ ಗಮನ ಹರಿಸಿ ಅವುಗಳ ಸ್ವರೂಪ ಹಾಗೂ ಗುಣಲಕ್ಷಣಗಳನ್ನು ಪರಿಚಯಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕೊಡವ ಮತ್ತು ಕೊಡವೇತರ ಜನಪದ ನೃತ್ಯಗಳ ತೌಲನಿಕ ಅಧ್ಯಯನ ಮಾಡಲಾಗಿದೆ. ಕೊಡವ ಎಂಬುದು ಕೊಡವ ಜನಾಂಗವು ಸೇರಿದಂತೆ ಕೊಡಗಿನ ಸುಮಾರು ೨೩ ಜನಾಂಗಗಳ ಮಾತೃಭಾಷೆ. ಕೊಡವ ಭಾಷೆಯೂ ಕೂಡ ಕನ್ನಡ ಭಾಷೆಯಂತೆ ಒಂದು ಸಮೂಹದ ಗಣಿ. ಇಲ್ಲಿ ಕೊಡವ ಭಾಷಿಕರ ಜೊತೆಗೆ ಕನ್ನಡ, ಮಲೆಯಾಳಂ, ತುಳು, ಅರೆಭಾಷೆ ಇತ್ಯಾದಿ ಭಾಷೆಗಳನ್ನು ಆಡುವವರು ಇದ್ದಾರೆ. ಇವರಲ್ಲೂ ಜನಪದ ನೃತ್ಯ ಸಂಪತ್ತು ಹೇರಳವಾಗಿದೆ. ಒಂದೇ ಭೂಪ್ರದೇಶದ ಒಳಗಡೆ ಈ ಎಲ್ಲಾ ಜನಪದ ನೃತ್ಯಗಳು ಮೂಡಿಬಂದಿದ್ದರೂ; ಆಯಾ ಭಾಷೆ, ಸಂಸ್ಕೃತಿಗೆ ತಕ್ಕಂತೆ ಅವುಗಳಲ್ಲಿ ವೈವಿಧ್ಯತೆಗಳನ್ನು ಕಾಣುತ್ತೇವೆ. ಕೆಲವು ಸಂದರ್ಭಗಳಲ್ಲಿ ಸಾಂಸ್ಕೃತಿಕ ಸಾಮ್ಯತೆಯೂ ಗೋಚರಿಸುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಕೊಡವ ಮತ್ತು ಕೊಡವೇತರ ಜನಪದ ನೃತ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕೊಡವ ಜನಪದ ನೃತ್ಯಗಳಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಲಾಗಿದೆ. ಕೊಡಗಿನ ಪ್ರಮುಖ ಜನಾಂಗವಾದ ಕೊಡವರದು ವಿಶ್ವದಲ್ಲಿಯೇ ವಿಶಿಷ್ಟವಾದ ಸಂಸ್ಕೃತಿ. ಇವರ ಆಚಾರ-ವಿಚಾರ, ರೂಢಿ ಸಂಪ್ರದಾಯಗಳನ್ನು ಬೇರೆ ಜನಾಂಗಗಳಲ್ಲಿ ಕಾಣಲು ಸಾಧ್ಯವಿಲ್ಲ. ಜನಪದ ಸಂಸ್ಕೃತಿಯನ್ನು ಅರಿಯುವಲ್ಲಿ ಜನಪದ ಪ್ರಕಾರಗಳಲ್ಲಿ ಒಂದಾದ ಜನಪದ ನೃತ್ಯಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇವು ಜನಪದರ ಜೀವನದ ಸುಖದುಃಖಗಳನ್ನು ಸರಳ ಮತ್ತು ನೇರ ರೀತಿಯಲ್ಲಿ ಅಭಿವ್ಯಕ್ತಿಸುತ್ತವೆ. ಶಿಷ್ಟ ನೃತ್ಯಗಳಲ್ಲಿ ಪ್ರಕಟವಾಗುವ ಕಲಾತ್ಮಕತೆಯ ಗೀಳು ಇವುಗಳಲ್ಲಿ ಕಂಡುಬರುವುದಿಲ್ಲ. ಈ ಹಿನ್ನಲೆಯಲ್ಲಿ ಕೊಡವ ಜನಪದ ನೃತ್ಯಗಳಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಅಂಶಗಳು ಪ್ರಸ್ತುತ ಭಾಗದ ಅಧ್ಯಯನದ ವಸ್ತು.

ಉಪಸಂಹಾರ ಶೀರ್ಷಿಕೆಯಡಿಯಲ್ಲಿ, ಕೊಡವ ಜನಪದ ನೃತ್ಯಗಳ ಸ್ವರೂಪ ಹಾಗೂ ವಿಶೇಷತೆಗಳನ್ನು ಕ್ರೋಢೀಕರಿಸಿ ನೀಡಲಾಗಿದೆ. ಅಧ್ಯಯನದಿಂದ ಕಂಡುಕೊಂಡ ಫಲಿತವನ್ನು ಸಂಗ್ರಹವಾಗಿ ನಿರೂಪಿಸಲಾಗಿದೆ. ವಿಷಯ ಪ್ರತಿಪಾದನೆಗೆ ಅವಶ್ಯವೆನಿಸಿದ ಛಾಯಾ ಚಿತ್ರಗಳನ್ನು ಒದಗಿಸಲಾಗಿದೆ.

****

ಅಧ್ಯಾಯ –೧

ಕೊಡವ ಜನಪದ ನೃತ್ಯಗಳ ಅಧ್ಯಯನದ ಸಮೀಕ್ಷೆ

ಕೊಡವ ಜನಪದ ನೃತ್ಯಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಉಪಲಬ್ಧ ಆಧಾರಗಳ ಪ್ರಕಾರ ಕ್ರಿ.ಶ. 2ನೇಯ ಶತಮಾನದಲ್ಲಿ (ತಮಿಳಿನ ಸಂಗಂ ಸಾಹಿತ್ಯದಲ್ಲಿ) ಕೊಡಗಿನ ಉಲ್ಲೇಖ ಬರುತ್ತದೆ. ಹಾಗಾಗಿ ಕೊಡವರ ಅಸ್ತಿತ್ವವನ್ನು ನಾವು ಅಲ್ಲಿಂದಲೇ ಕಾಣಬಹುದು.

ಕೊಡವ ಜನಾಂಗ ಭೂಮಿಯ ಮೇಲೆ ಬಂದಾಗಲೇ ಕೊಡವ ಜನಪದ ನೃತ್ಯಗಳು ಸೃಷ್ಟಿಯಾದವು ಎಂಬುದರಲ್ಲಿ ಸಂಶಯವಿಲ್ಲ. ಕೊಡವ ಜನಾಂಗ ಸಾಗಿಬಂದ ಸಹಸ್ರಾರು ವರ್ಷಗಳ ಹಾದಿಯಲ್ಲಿ ಅವರೊಂದಿಗೆ ಬೆಳೆದು ಬಂದಂತಹ ಜನಪದ ನೃತ್ಯಗಳಿವೆ. ಇವುಗಳನ್ನು ಕೆಲವು ವಿದ್ವಾಂಸರು ತಮ್ಮ ಕೃತಿಗಳು ಹಾಗೂ ಲೇಖನಗಳಲ್ಲಿ ಸಂಕ್ಷಿಪ್ತವಾಗಿ ಸಂಗ್ರಹಿಸಿ, ಪರಿಚಯಿಸಿ ಅಧ್ಯಯನ ಮಾಡುವ ಪ್ರಯತ್ನ ನಡೆಸಿದ್ದಾರೆ.

ಈ ಹಿನ್ನೆಲೆಯ ದೃಷ್ಟಿಯಿಂದ ಕೊಡವ ಜನಪದ ನೃತ್ಯಗಳ ಅಧ್ಯಯನ ನಡೆದು ಬಂದ ದಾರಿಯ ಸಮೀಕ್ಷೆಯನ್ನು ಈ ಕೆಳಗಿನಂತೆ ವರ್ಗೀಕರಿಸಿಕೊಂಡು ನಡೆಸಲಾಗಿದೆ.

ಅ. ಕೊಡವ ಜನಪದ ನೃತ್ಯಗಳನ್ನು ಕುರಿತಂತೆ ಇರುವ ಇಂಗ್ಲೀಷ್ ಕೃತಿಗಳು ಮತ್ತು ಲೇಖನಗಳು.

ಆ. ಕೊಡವ ಜನಪದ ನೃತ್ಯಗಳ ಬಗ್ಗೆ ಚರ್ಚಿಸುವ ಕನ್ನಡ ಭಾಷಾ ಕೃತಿಗಳು ಮತ್ತು ಲೇಖನಗಳು.

ಇ. ಕೊಡವ ಜನಪದ ನೃತ್ಯಗಳನ್ನು ಕುರಿತ ಕೊಡವ ಭಾಷಾ ಕೃತಿಗಳು ಮತ್ತು ಲೇಖನಗಳು.

ಅ–ಕೊಡವ ಜನಪದ ನೃತ್ಯಗಳನ್ನು ಕುರಿತಂತೆ ಇರುವ ಇಂಗ್ಲೀಷ್ ಕೃತಿಗಳು ಮತ್ತು ಲೇಖನಗಳು:–

ಕೊಡವ ಜಾನಪದ ಕ್ಷೇತ್ರದಲ್ಲಿ ಸಂಗ್ರಹ ಹಾಗೂ ಅಧ್ಯಯನದ ಪ್ರಯತ್ನಗಳು ಪಾಶ್ಚಾತ್ಯ ವಿದ್ವಾಂಸರಿಂದಲೇ ಪ್ರಾರಂಭವಾಯಿತು. 1855ರಲ್ಲಿ ಪ್ರಕಟವಾದ ರೆವರೆಂಡ್ ಡಾ.ಮೋಗ್ಲಿಂಗ್ ಅವರ ಕೂರ್ಗ್ ಮೆಮಾಯರ್ಸ್, 1870ರಲ್ಲಿ ಪ್ರಕಟವಾದ ರೆವರೆಂಡ್ ಜಾರ್ಜ್ ರಿಕ್ಟರ್‌ನ ಕೂರ್ಗ್ ಗೆಜೆಟಿಯರ್, 1871ರಲ್ಲಿ ಚಾರ್ಲ್ಸ್. ಈ ಗೋವರ್ ಸಂಕಲಿಸಿ ಹೊರತಂದ 'ದಿ ಫೋಕ್ ಸಾಂಗ್ಸ್ ಆಫ್ ಸದರ್ನ್ ಇಂಡಿಯಾ', 1873ರಲ್ಲಿ ಪ್ರಕಟವಾದ ಕಿಟೆಲ್‌ನ 'ಕೊಡಗು ಬೈಬಲ್' ಕೃತಿಗಳು ಕೊಡವ ಜನಪದ ಗೀತೆಗಳೊಂದಿಗೆ ಕೊಡವ ಜನಪದ ನೃತ್ಯ ಗೀತೆಗಳ ಬಗ್ಗೆಯೂ ಚರ್ಚಿಸಿವೆ.

ಪಾಂಡಂಡ ಮುತ್ತಣ್ಣ ಅವರ 'ಕೂರ್ಗ್ ಅಂಡ್ ಕೂರ್ಗ್ಸ್', 1948ರಲ್ಲಿ ಪ್ರಕಟವಾದ ಡಾ.ಕೃಷ್ಣ ಅಯ್ಯರ್ ಅವರ 'The Coorg Tribes and castes' ಹಾಗೂ ಬಿಟ್ಟಂಗಾಲದ ಸಿ.ಎಂ. ಕುಶಾಲಪ್ಪ ಅವರ `Origin of Coorgs' ಈ ಹಿನ್ನಲೆಯಲ್ಲಿ ಗಮನಿಸಬೇಕಾದ ಕೃತಿಗಳಾಗಿವೆ.

1953ರಲ್ಲಿ ಪ್ರಕಟವಾದ 'A Tiny Model state of South India' ಕೃತಿಯ ಲೇಖಕರು ಡಾ. ಐ.ಎಂ. ಮುತ್ತಣ್ಣನವರು. ಖ್ಯಾತ ಕವಿಗಳು, ಸಂಶೋಧಕರೂ ಆದ ಇವರು ಪ್ರಸ್ತುತ ಕೃತಿಯಲ್ಲಿ ಪುತ್ತರಿ ಕೋಲಾಟ್, ಬೊಳಕಾಟ್ ಹಾಗೂ ಉಮ್ಮತ್ತಾಟ್ ನೃತ್ಯ ಗೀತೆಗಳ ಬಗ್ಗೆ ಚರ್ಚಿಸಿದ್ದಾರೆ. 1971ರಲ್ಲಿ ಪ್ರಕಟವಾದ 'Coorg Memoirs' (The story of the kodavas) ಇದೇ ಲೇಖಕರ ಮತ್ತೊಂದು ಪ್ರಮುಖ ಕೃತಿ. ಈ ಕೃತಿಯಲ್ಲೂ ಕೊಡವ ಜನಪದ ನೃತ್ಯಗೀತೆಗಳ ಬಗ್ಗೆ ಚರ್ಚೆ ನಡೆದಿದೆ. 1987ರಲ್ಲಿ ಪ್ರಕಟಗೊಂಡ ಕೃತಿ 'KODAVAS & THEIR GALA "LELA" of KODAGU (COORG).' ಕೊಡವ ಜಾನಪದ ಹಾಗೂ ಜನಪದ ಗೀತೆಗಳ ಸಂಗ್ರಹವೆನಿಸಿದ ಈ ಕೃತಿಯಲ್ಲಿ ಮುತ್ತಣ್ಣನವರು "ಪೊಯಿಲೇ ಪೊಯಿಲೇ" ಎಂಬ

ಶೀರ್ಷಿಕೆಯಡಿಯಲ್ಲಿ ಹುತ್ತರಿ ಕೋಲಾಟದಲ್ಲಿ 'ಬಾಯಿತರ' ಕೊಡುವ ಗೀತೆಯನ್ನು ಸಂಗ್ರಹಿಸಿದ್ದಾರೆ.

ಡಾ॥ ಕೆ.ಕೆ.ಸುಬ್ಬಯ್ಯ ಅವರ 'Archaeology of Coorg' ಈ ಹಿನ್ನಲೆಯಲ್ಲಿ ಗಮನಿಸಬೇಕಾದ ಮತ್ತೊಂದು ಕೃತಿ. ಇದು 1978ರಲ್ಲಿ ಪ್ರಕಟವಾಯಿತು.

ಪತ್ರಕರ್ತರೂ, ಕೊಡವರ ಬಗೆಗೆ ವಿಶೇಷ ಅಧ್ಯಯನ ನಡೆಸಿರುವ ಬಿ.ಡಿ.ಗಣಪತಿ ಅವರ ಕೃತಿ 'Kodavas, A Comprehensive study.' ಪ್ರಸ್ತುತ ಕೃತಿಯಲ್ಲಿ ಕೊಡವ ಜನಪದ ಸಾಹಿತ್ಯ ಮತ್ತು ನೃತ್ಯಗಳನ್ನು ಕುರಿತು ವಿವೇಚಿಸಲಾಗಿದೆ. ಇದು 1980ರಲ್ಲಿ ಪ್ರಕಟವಾಯಿತು.

1981ರಲ್ಲಿ ಪ್ರಕಟವಾದ ಎಂ.ಪಿ. ಕಾರ್ಯಪ್ಪ ಮತ್ತು ಪೊನ್ನಮ್ಮ ಕಾರ್ಯಪ್ಪ ಅವರ 'ಕೂರ್ಗ್ಸ್ ಅಂಡ್ ದೇರ್ ಆರಿಜಿನ್ಸ್' ಗ್ರಂಥದಲ್ಲಿ ಕೊಡವ ಜನಪದ ನೃತ್ಯಗಳ ಕುರಿತು ಚರ್ಚೆ ನಡೆದಿದೆ.

1989ರಲ್ಲಿ ಪ್ರಕಟವಾದ ಎಂ.ಎನ್. ಶ್ರೀನಿವಾಸ್ ಅವರ "Religion and Society Among the Coorgs of South India" ಈ ಹಿನ್ನಲೆಯಲ್ಲಿ ಗಮನಿಸಬೇಕಾದ ಮತ್ತೊಂದು ಕೃತಿ.

1991ರಲ್ಲಿ ಮದರಾಸಿನ ಏಷಿಯಾ ಅಧ್ಯಯನ ಸಂಸ್ಥೆಯವರು ಪ್ರಕಟಿಸಿದ "Encyclopaedia of the Folk culture of Karnataka" ಗ್ರಂಥದ ಸಂಪುಟ – ೧ ರಲ್ಲಿ ಡಾ.ಡಿ.ಬಿ. ರಾಮಚಂದ್ರಾಚಾರ್ ಅವರ ಕೊಡಗಿನ ಜಾನಪದ ಮತ್ತು ಆದಿವಾಸಿ ಜನಾಂಗಗಳ ಸಂಸ್ಕೃತಿ ಕುರಿತ ಸುಧೀರ್ಘ ಪ್ರಬಂಧದಲ್ಲಿ ಜನಪದ ನೃತ್ಯಗಳ ಬಗ್ಗೆ ಚರ್ಚಿಸಲಾಗಿದೆ.

"Regional Resources Centre for Folk performing Arts" ಸಂಸ್ಥೆಯು ಪ್ರಕಟಿಸಿರುವ ಡಾ. ಅಶೋಕ್ ಆಳ್ವ ಅವರ 'Olasari' ಕೃತಿಯು 2001ರಲ್ಲಿ ಪ್ರಕಟವಾಯಿತು. ಇದು ತುಳುನಾಡು ಹಾಗೂ ಕೊಡಗಿನ ಜನಪದ ಪದ್ಧತಿ ಮತ್ತು ನೃತ್ಯಗಳನ್ನು ಕುರಿತ ಪ್ರಬಂಧಗಳನ್ನು ಒಳಗೊಂಡಿದೆ. ಕೊಡಗಿನ ಮಡಿಕೇರಿ ತಾಲೂಕಿನ ಕೋಕೇರಿ ಗ್ರಾಮದಲ್ಲಿ ಜರುಗುವ ಕೊಂಬಾಟ್

ನಮ್ಮೆ(ಉತ್ಸವ) , ಆ ಸಂದರ್ಭದಲ್ಲಿ ನಡೆಯುವ ಕೊಂಬಾಟ್ ನೃತ್ಯ, ಕೊಡವ ಜನಪದ ನೃತ್ಯಗಳಾದ ಜ್ಞೋಯಿಕಳಿ, ಬೋಡ್‌ಕಳಿ, ಅಂಗಕಳಿಯ ಬಗ್ಗೆ ಚರ್ಚಿಸಲಾಗಿದೆ.

ಆ–ಕೊಡವ ಜನಪದ ನೃತ್ಯಗಳ ಬಗ್ಗೆ ಚರ್ಚಿಸುವ ಕನ್ನಡ ಭಾಷಾ ಕೃತಿಗಳು ಮತ್ತು ಲೇಖನಗಳು:-

ಜಾನಪದದ ಪರಿಕಲ್ಪನೆಯ ಯಾವುದೇ ಪ್ರಭಾವಕ್ಕೆ ಒಳಗಾಗದೆ ಕೊಡಗಿನ ಕೊಡವರ ಜೀವನ, ಅವರ ಸಂಸ್ಕೃತಿಗೆ ಸಂಬಂಧಿಸಿದ ಮಾಹಿತಿಯನ್ನು ಆಸಕ್ತಿಯಿಂದ ದಾಖಲಿಸಿದವರು ನಡಿಕೇರಿಯಂಡ ಚಿಣ್ಣಪ್ಪನವರು. ಕೊಡವ ಜನಾಂಗದ ಸಮಗ್ರ ಜಾನಪದವನ್ನು ಪರಿಚಯಿಸುವ ಅವರ ಕೃತಿ 'ಪಟ್ಟೋಲೆ ಪಳಮೆ' 1924ರಲ್ಲಿ ಪ್ರಕಟವಾಯಿತು. ಕೊಡವ ಸಂಸ್ಕೃತಿಯ ಪ್ರಾತಿನಿಧಿಕ ಕೃತಿಯಾದ ಈ ಗ್ರಂಥ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಕೃತಿಗಿಂತ ವಿಷಯ ವ್ಯಾಪ್ತಿಯಲ್ಲಿ ಅಧ್ಯಯನ ಕ್ರಮದಲ್ಲಿ, ಪ್ರಾದೇಶಿಕ ಹಿನ್ನಲೆಯಲ್ಲಿ ಮಿಗಿಲಾದುದು ಎಂದು ಜೀ.ಶಂ ಪರಮಶಿವಯ್ಯ ಅವರು 'ಪಟ್ಟೋಲೆ ಪಳಮೆ' ಕೃತಿಯ ದ್ವಿತೀಯ ಆವೃತ್ತಿಗೆ ಬರೆದಿರುವ ವಿಭಾಗ ಸಂಪಾದಕರ ಮಾತು ಗಮನಾರ್ಹವಾದುದು. ಕೊಡವ ಜನಪದ ನೃತ್ಯಗಳಾದ ಬೊಳಕಾಟ್, ಪುತ್ತರಿ ಕೋಲಾಟ್‌ನ ಬಗ್ಗೆ ಪ್ರಸ್ತುತ ಕೃತಿಯು ಮಾಹಿತಿಯನ್ನು ನೀಡುತ್ತದೆ.

ಕೊಡವರ ಬಗ್ಗೆ ಅಧ್ಯಯನ ನಡೆಸಿದ ಬಿ.ಡಿ.ಗಣಪತಿಯವರು 1962ರಲ್ಲಿ ಪ್ರಕಟಿಸಿದ 'ಕೊಡಗು ಮತ್ತು ಕೊಡವರು', 1967ರಲ್ಲಿ ಪ್ರಕಟಗೊಂಡ 'ಕೊಡವರು' (ಜೀವನ ಮತ್ತು ಪದ್ಧತಿಗಳು) ಕೃತಿಗಳಲ್ಲಿ ಕೊಡವ ಜನಪದ ನೃತ್ಯಗಳಾದ ಉಮ್ಮತ್ತಾಟ್, ಬೊಳಕಾಟ್, ಪುತ್ತರಿ ಕೋಲಾಟ್‌ನ ಬಗ್ಗೆ ಹಾಡಿನ ಸಹಿತ ಮಾಹಿತಿಯನ್ನು ನೀಡಿದ್ದಾರೆ.

ಕೆ.ಸಿ. ಭೀಮಯ್ಯ ಅವರ 'ಕೊಡಗಿನ ಜನಪದ ಗೀತೆಗಳು', ವಿರಾಟ್ ಅವರ "ಕೊಡಗಿನ ಹಾಡುಗಳು, ಚೋಕಂಡ ಅಪ್ಪಯ್ಯನವರ "ಹುತ್ತರಿ ಹಾಡು" ಕೃತಿಗಳು ಬೊಳಕಾಟ್, ಕೋಲಾಟ್‌ನಂತಹ ಜನಪದ ನೃತ್ಯಗೀತೆಗಳನ್ನು ಒಳಗೊಂಡಿವೆ.

1990ರಲ್ಲಿ ಪ್ರಕಟವಾದ "ಶ್ರೀ ಇಗ್ಗುತ್ತಪ್ಪ ದೇವರು" ಕೃತಿಯ ಲೇಖಕರು

ಪರದಂಡ ಚಂಗಪ್ಪನವರು. ಪ್ರಸ್ತುತ ಕೃತಿಯಲ್ಲಿ ಲೇಖಕರು ಪುತ್ತರಿ ನಮ್ಮೆರ (ಹುತ್ತರಿ ಹಬ್ಬದ) ಜೋಯಿಪಾಟ್, ಹುತ್ತರಿ ಕೋಲಾಟದಲ್ಲಿ ಬಾಯಿತ್ತೊರ ಕೊಡುವುದು ಇತ್ಯಾದಿ ಜನಪದ ನೃತ್ಯಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಗೊ.ರು. ಚನ್ನಬಸಪ್ಪ ಸಂಪಾದಕತ್ವದ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ "ಕರ್ನಾಟಕ ಜನಪದ 'ಕಲೆಗಳು' ಗ್ರಂಥವು ಕೊಡಗಿನ ಹದಿನೈದಕ್ಕೂ ಹೆಚ್ಚು ನೃತ್ಯ ಮತ್ತು ಹಾಡುವ ಕಲೆಗಳ ಬಗ್ಗೆ ಸಂಕ್ಷಿಪ್ತ ಪರಿಚಯವನ್ನು ನೀಡಿದೆ. ಇದು 1977ರಲ್ಲಿ ಪ್ರಕಟವಾಯಿತು.

1985ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕನ್ನಡ ಜಾನಪದ ವಿಶ್ವಕೋಶ'. ಗ್ರಂಥವು ಈ ಹಿನ್ನಲೆಯಲ್ಲಿ ಪ್ರಮುಖವಾಗಿದೆ. ಡಾ. ಚಂದ್ರಶೇಖರ ಕಂಬಾರ ಅವರು ಸಂಪಾದಿಸಿರುವ ಈ ಕೃತಿಯು ಎರಡು ಸಂಪುಟಗಳಲ್ಲಿದೆ. ಇದು ಕೊಡಗಿನ ಜನಪದ ಸಾಹಿತ್ಯ, ಕಲೆ, ಕಲಾವಿದರು, ಸಂಗ್ರಹಕಾರರ ಮಾಹಿತಿಗಳನ್ನು ಒಳಗೊಂಡಿದ್ದು ಜನಪದ ನೃತ್ಯಗಳ ಕುರಿತು ಸಂಕ್ಷಿಪ್ತ ಮಾಹಿತಿಗಳಿವೆ.

'ಕರ್ನಾಟಕ ಜನಪದ ಕಲೆಗಳ ಕೋಶ' ಗ್ರಂಥವು ಈ ನಿಟ್ಟಿನಲ್ಲಿ ಮಹತ್ವವಾದುದು. 1996ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ 'ಕೊಡವರ ಕುಣಿತಗಳು' ಎಂಬ ಶೀರ್ಷಿಕೆಯಡಿಯಲ್ಲಿ ಕೊಡವ ಜನಪದ ನೃತ್ಯಗಳಾದ ಬೊಳಕಾಟ್, ಕಪ್ಪೆಯಾಟ್, ಪೀಲಿಯಾಟ್, ವಾಲಗತ್ತಾಟ್, ಹುತ್ತರಿ ಕೋಲಾಟ, ಪರಿಯಕಳಿ, ತಟ್ಟೆ ಪರಿಯಕಳಿ, ಜೋಯಿಪಾಟ್, ಕೈತಲೆ ಆಟ್, ಬಿಲ್ಲಾಟ್, ಚೌರಿಯಾಟ್, ಕೊಡಿಯಾಟ್, ಬೋಡ್‌ನಮ್ಮೆ ಆಟ್‌ಪಾಟ್ ಮುಂತಾದ ಜನಪದ ಕಲೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮೀನಿಕ್ಕರ ಎ. ಮಹಮದ್ ಅವರ 'ಕೊಡಗಿನ ಸಾಹಿತ್ಯ ದರ್ಶನ' ಗಮನಿಸಬೇಕಾದ ಮತ್ತೊಂದು ಕೃತಿ. ಈ ಕೃತಿಯ 'ಕೊಡವ ಸಾಹಿತ್ಯದ ಮೇಲೆ ಪಂಚದ್ರಾವಿಡ ಸಾಹಿತ್ಯದ ಪ್ರಭಾವ' ಅಧ್ಯಾಯದಲ್ಲಿ ಕೊಡವ ಜಾನಪದದ ಮೇಲೆ ಪಂಚದ್ರಾವಿಡ ಭಾಷಾ ಸಂಸ್ಕೃತಿಯ ಪ್ರಭಾವವನ್ನು ಕುರಿತು ಚರ್ಚಿಸಿದ್ದಾರೆ. ಇದು 2005ರಲ್ಲಿ ಪ್ರಕಟವಾಯಿತು.

'ಕೆಂಬಟ್ಟಿ ಹೊಲೆಯರ ಸಂಸ್ಕೃತಿ' 1993ರಲ್ಲಿ ಪ್ರಕಟವಾದ ಸಂಶೋಧನಾ ಕೃತಿ. ಕೊಡಗಿನ ಮೂಲ ನಿವಾಸಿಗಳಲ್ಲಿ ಒಬ್ಬರಾದ ಕೆಂಬಟ್ಟಿ ಹೊಲೆಯರ ಸಂಸ್ಕೃತಿಯ ಬಗ್ಗೆ ಅಧ್ಯಯನ ನಡೆಸಿರುವ ಸಂಶೋಧಕರಾದ ಎಂ.ಜಿ. ನಾಗರಾಜ್ ಅವರು ಜನಪದ ನೃತ್ಯಗಳಾದ ಉಮ್ಮತ್ತಾಟ್,ಅಂಗಕಳಿ ಹಾಗೂ ಉಮ್ಮತ್ತಾಟ್ ನೃತ್ಯಗೀತೆಯ ಬಗ್ಗೆ ವಿವರಗಳನ್ನು ದಾಖಲಿಸಿದ್ದಾರೆ.

ಕನ್ನಡ ಭಾಷಾ ಲೇಖನಗಳು :-

ಕೊಡವ ಜನಪದ ನೃತ್ಯವನ್ನೊಳಗೊಂಡಂತೆ ಕೊಡವ ಜಾನಪದದ ಬಗ್ಗೆ ಹಲವು ಲೇಖಕರು ವಿವಿಧ ಪತ್ರಿಕೆ, ಸ್ಮರಣ ಸಂಚಿಕೆ ಹಾಗೂ ವಾರಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಗೊಳಿಸಿದ್ದಾರೆ. ಅವುಗಳನ್ನು ಈ ವಿಭಾಗದಲ್ಲಿ ಗಮನಿಸಲಾಗಿದೆ.

ಲಕ್ಷ್ಮಣ ತೆಲಗಾವಿ ಅವರು 'ಕೊಡಗಿನಲ್ಲಿ ವಿಶಿಷ್ಟ ಸಂಸ್ಕೃತಿ'[೧] ಲೇಖನದಲ್ಲಿ ಜಾನಪದ ನೆಲೆಯಿಂದ ಕೊಡಗಿನ ಸಂಸ್ಕೃತಿಯನ್ನು ವಿವರಿಸುತ್ತಾ ಕೊಡವ ಜನಪದ ನೃತ್ಯಗಳಾದ ಬೊಳಕಾಟ್, ಕೋಲಾಟ್, ಉಮ್ಮತ್ತಾಟ್ ನೃತ್ಯಗಳ ಬಗ್ಗೆ ಚರ್ಚಿಸಿದ್ದಾರೆ.

ಕೆ. ರಾಮಕೃಷ್ಣ ಉಡುಪ ಅವರ 'ಕೊಡಗಿನ ಸಾಹಿತ್ಯ'[೨], ಎದುರ್ಕಳ ಶಂಕರನಾರಾಯಣ ಭಟ್ ಅವರ 'ಕೊಡಗಿನ ಸಾಂಸ್ಕೃತಿಕ ಪರಂಪರೆ'[೩] ಲೇಖನಗಳು ಇಲ್ಲಿ ಗಮನೀಯವಾದವುಗಳು.

ಅಂಬಳೆ ಸುಬ್ಬರಾವ್ ಅವರು ಬರೆದ 'ಕೊಡಗಿನ ಜಾನಪದ ನೃತ್ಯಗಳು'[೪] ಕೊಡಗಿನ ಜನಪದ ನೃತ್ಯಗಳನ್ನು ಕುರಿತು ಚರ್ಚಿಸುವ ಗಮನಾರ್ಹ ಲೇಖನ.

ಎಂ.ಬಿ. ಗಾಂಧಿಯವರು 'ಕೊಡಗಿನ ಜಾನಪದ ಸಂಪತ್ತು, ಸ್ವರೂಪ ಹಾಗೂ ಸಂಗ್ರಹ ಕಾರ್ಯ'[೫] ಲೇಖನದಲ್ಲಿ ಕೊಡವ ಜಾನಪದವನ್ನು ಭಾಷಿಕ ಮತ್ತು ಸಾಹಿತ್ಯಿಕ, ಕ್ರಿಯಾತ್ಮಕ ಹಾಗೂ ವೈಜ್ಞಾನಿಕ ಜಾನಪದವೆಂದು ವಿಂಗಡಿಸಿ ಜನಪದ ನೃತ್ಯಗಳನ್ನು ವಿವೇಚಿಸಿದ್ದಾರೆ.

ಕೊಡವ ಜನಪದ ನೃತ್ಯ ಕಲೆಗಳು ಹಾಗೂ ಜನಪದ ನೃತ್ಯಗೀತೆಗಳ ಬಗ್ಗೆ ಪುಗ್ಗೇರ ಎಂ ಕರುಂಬಯ್ಯ ಅವರು 'ಕೊಡಗಿನ ಜನಪದ ನೃತ್ಯಕಲೆ'[೬]

ಮತ್ತು 'ಕೊಡಗಿನ ಜನಪದ ಸಾಹಿತ್ಯ'[8] ಲೇಖನಗಳಲ್ಲಿ ಚರ್ಚಿಸಿದ್ದಾರೆ.

ಟಿ.ಪಿ. ರಮೇಶ್ ಅವರ, 'ಕೊಡಗಿನ ಜಾನಪದ'[9] ಲೇಖನವು ಕೊಡಗಿನ ಜನಪದ ಕಲೆಗಳ ಬಗ್ಗೆ ಮಾಹಿತಿ ನೀಡುತ್ತದೆ.

'ಕೊಡಗಿನ ಜಾನಪದ ಕಲೆಗಳು'[9] ಕೆ.ಆರ್. ಕೃಷ್ಣಯ್ಯ ಅವರ ಲೇಖನ. ಕೊಡಗಿನ ಜನಪದ ಕಲೆಗಳಾದ ಉಮ್ಮತ್ತಾಟ್, ಬೊಳಕಾಟ್, ಕೊಂಬಾಟ್, ಪೀಲಿಯಾಟ್, ಕೋಲಾಟ್, ವಾಲಗತ್ತಾಟ್, ಚೂಳೆಯಾಟ್, ಎರವಾಟ್, ದಪ್ಪು ಆಟ್, ಸುಗ್ಗಿಕುಣಿತ, ಸಿದ್ದವೇಷಗಳ ಬಗ್ಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಪೂವಯ್ಯ ಯು.ಎಂ. ಅವರ 'ಕೊಡಗು ಸಂಸ್ಕೃತಿಯ ವೈಶಿಷ್ಟ್ಯಗಳು'[10] ಲೇಖನವು ಕೊಡಗಿನ ಸಂಸ್ಕೃತಿಯು ವೈಶಿಷ್ಟ್ಯತೆಯನ್ನು ವಿವರಿಸುತ್ತದೆ. ಹುತ್ತರಿ ಹಬ್ಬದ ಸಂದರ್ಭದ ಜನಪದ ನೃತ್ಯಗೀತೆಗಳ ಬಗ್ಗೆ ಲೇಖನ ಬೆಳಕು ಚೆಲ್ಲುತ್ತದೆ.

'ದೇವರನ್ನೆ ಬಯ್ಯುವ ಬೋಡು ಹಬ್ಬ'[11] ಅನಿಲ್ ಎಚ್.ಟಿ ಅವರ ಲೇಖನ. ಇದು ಬೋಡ್ ನಮ್ಮೆ ಹಾಗೂ ಆ ಸಂದರ್ಭದಲ್ಲಿ ನಡೆಯುವ ಬೋಡ್‌ಕಳಿಗಳ ಬಗ್ಗೆ ಸಚಿತ್ರ ವಿವರಣೆಯನ್ನು ನೀಡುತ್ತದೆ.

ಇ–ಕೊಡವ ಜನಪದ ನೃತ್ಯಗಳನ್ನು ಕುರಿತ ಕೊಡವ ಭಾಷಾ ಕೃತಿಗಳು ಮತ್ತು ಲೇಖನಗಳು:–

ಕೊಡಗು, ಕೊಡವರು, ಕೊಡಗಿನ ಚರಿತ್ರೆ, ಕೊಡವ ಸಂಸ್ಕೃತಿಯನ್ನು ಕುರಿತಂತೆ ರಚಿಸಿದ ಕೃತಿಗಳು ಮತ್ತು ಲೇಖನಗಳಲ್ಲಿ ಕೆಲವು ಕೊಡವ ಭಾಷಾ ಲೇಖಕರು ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಜನಪದ ನೃತ್ಯಗಳ ಬಗ್ಗೆ ಚರ್ಚಿಸಿದ್ದಾರೆ.

ಪೇರಿಯಂಡ ಚಂಗಪ್ಪನವರ 'ಕೊಡವಡ ಅಂಬೋಳತ್ ಪಾಟ್' 1961ರಲ್ಲಿ ಪ್ರಕಟವಾದ ಕೃತಿ. ಪುತ್ತರಿ ಕೋಲಾಟ್‌ಪಾಟ್, ಬೊಳಕಾಟ್ ಪಾಟ್‌ನಂತಹ ಜನಪದ ನೃತ್ಯಗಳ ಗೀತೆಗಳು ಈ ಕೃತಿಯಲ್ಲಿ ಸಂಗ್ರಹಿಸಲ್ಪಟ್ಟಿದೆ.

ಪುಗ್ಗೇರ ಎಂ. ಕರುಂಬಯ್ಯ ಅವರ 'ಉಮ್ಮತ್ತಾಟ್ ಪಾಟ್ ಪಳಂಜೊಲ್ಲ್' ಕೃತಿ 1975ರಲ್ಲಿ ಪ್ರಕಟವಾಯಿತು. ಇದು ಕೊಡವ ಜನಪದ ನೃತ್ಯವಾದ

ಉಮ್ಮತ್ತಾಟ್‌ನ ಗೀತೆಗಳ ಸಂಗ್ರಹವಾಗಿದೆ.

'ನೆಲ್ಲಕ್ಕಿ ನಡುಬಾಡೆ' ಮೇಜರ್ ಮುಗ್ಗೇರ ಪಿ. ಬಿದ್ದಪ್ಪ ಅವರ ಕೃತಿ. ಕೊಡವ ಪದ್ಧತಿ ಪರಂಪರೆಯನ್ನು ವಿವರಿಸುವ ಈ ಕೃತಿಯಲ್ಲಿ ಕೊಡವ ಜನಪದ ನೃತ್ಯಗೀತೆಗಳ ಸಂಗ್ರಹವನ್ನು ಕಾಣಬಹುದು. ಇದು 1991ರಲ್ಲಿ ಪ್ರಕಟವಾಯಿತು.

ಆಪಾಡಂಡ ಗಣಪತಿ ಅವರ 'ಕೊಡವಡ ಆರಬೇರ ಪುರಾಣ' ಕೃತಿ ಈ ಹಿನ್ನಲೆಯಲ್ಲಿ ಗಮನಿಸಬೇಕಾದುದು. ಪ್ರಸ್ತುತ ಕೃತಿ 1945ರಲ್ಲಿ ಪ್ರಕಟವಾಯಿತು.

ಬಾಚರಣಿಯಂಡ ಅಪ್ಪಣ್ಣ ಮತ್ತು ರಾಣು ಅಪ್ಪಣ್ಣ ಅವರ 'ಕೊಡಗ್‌ರ ಆರಬೇರ' ಕೃತಿಯು 2001ರಲ್ಲಿ ಪ್ರಕಟಗೊಂಡಿತು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಈ ಕೃತಿಯಲ್ಲಿ ಕೊಡವ ಜಾನಪದ ನೃತ್ಯವಾದ ಉಮ್ಮತ್ತಾಟ್‌ನ ಬಗ್ಗೆ ವಿಚಾರಪೂರ್ಣವಾಗಿ ಚರ್ಚಿಸಲಾಗಿದೆ.

'ಕೊಡವ ಪಡಿಮ' ಕೃತಿ 2006ರಲ್ಲಿ ಪ್ರಕಟಗೊಂಡಿತು. ಜಾನಪದ ಕಲಾವಿದರಾದ ಪಾಲಂದಿರ ಪಿ.ದೇವಯ್ಯ ಅವರು ಕೊಡವ ಪದ್ದತಿ ಸಂಪ್ರದಾಯಗಳ ಬಗ್ಗೆ ಚರ್ಚಿಸುತ್ತಾ ಬೊಳಕಾಟ್, ಉಮ್ಮತ್ತಾಟ್ ನೃತ್ಯಗಳ ಬಗ್ಗೆ ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

2008ರಲ್ಲಿ ಪ್ರಕಟವಾದ 'ಇಂದ್ ಕೊಡವ ಪದ್ಧತಿ' ಎಂಬುದು ಪಳಂಗಂಡ ಕೆ.ಚಂಗಪ್ಪ ಅವರ ಕೃತಿ. ಕೊಡವ ಪದ್ದತಿಯ ವಿವರಣೆಯೊಂದಿಗೆ ಲೇಖಕರು 'ಕೊಡವ ಸಾಂಸ್ಕೃತಿಕ ಹಾಡು' ಎಂಬ ವಿಭಾಗದಲ್ಲಿ ಕೊಡವ ಜನಪದ ನೃತ್ಯಗೀತೆಗಳಾದ ಉಮ್ಮತ್ತಾಟ್ ಮತ್ತು ಬೊಳಕಾಟ್ ಹಾಡುಗಳನ್ನು ಸಂಗ್ರಹಿಸಿ ನೀಡಿದ್ದಾರೆ.

'ಕೊಡವ ಪತ್ತಾಯ' (ಕೊಡವ ಪದ್ಧತಿ– ಪರಂಪರೆಯ ಪರಿಚಯ,). ಪಂಜೇರಿರ ಸಿ.ಬೊಳ್ಳಪ್ಪ ಅವರ ಕೃತಿ. 2009ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಲೇಖಕರು ಕೊಡವ ಪದ್ಧತಿ–ಪರಂಪರೆಯನ್ನು ವಿವರಿಸುತ್ತಾ, 'ಕೊಡವಡ

ಬೊಳಕಾಟ್ ಎನ್ನನೆ ಬಾತ್?', 'ಕೊಡವಡ ಉಮ್ಮತ್ತಾಟ್ ಬಂದ ಬಗೆ ಏದ್?' ಶೀರ್ಷಿಕೆಯ ಲೇಖನಗಳಲ್ಲಿ ಜನಪದ ನೃತ್ಯಗಳಾದ ಬೊಳಕಾಟ್ ಮತ್ತು ಉಮ್ಮತ್ತಾಟ್‌ನ ಪೌರಾಣಿಕ ಹಿನ್ನಲೆಯ ಕಥೆಗಳನ್ನು ನಿರೂಪಿಸಿದ್ದಾರೆ.

ಕೊಡವ ಭಾಷಾ ಲೇಖನಗಳು :-

ಕೊಡವ ಜನಪದ ನೃತ್ಯಗಳ ಬಗ್ಗೆ ಚರ್ಚಿಸಿರುವ ವಿವಿಧ ಲೇಖಕರ ಕೊಡವ ಭಾಷಾ ಲೇಖನಗಳನ್ನು ಈ ವಿಭಾಗದಲ್ಲಿ ಗಮನಿಸಲಾಗಿದೆ.

'ಕೊಡಗ್‌ರ ಜಾನಪದ ನೃತ್ಯ –ಉಮ್ಮತ್ತಾಟ್'[೧೨] ಬಾಚರಣಿಯಂಡ ಪಿ.ಅಪ್ಪಣ್ಣ ಅವರ ಲೇಖನ. ಕೊಡವ ಜನಪದ ನೃತ್ಯ ಉಮ್ಮತ್ತಾಟ್‌ನ ಬಗ್ಗೆ ಲೇಖಕರು ಇಲ್ಲಿ ಚರ್ಚಿಸಿದ್ದಾರೆ. 'ಕೊಡಗ್‌ರ ವೀರ ಪರಂಪರೆ'[೧೩] ಇದೇ ಲೇಖಕರ ಮತ್ತೊಂದು ಲೇಖನ. ಕೊಡವ ವೀರ ಪರಂಪರೆಗೆ ಸಾಕ್ಷಿಯಂತಿರುವ ಪರೆಯಕಳಿಯ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

'ಕೊಡವ ಜಾನಪದ ವಿಶೇಷತೆ'[೧೪] ಬಾಚರಣಿಯಂಡ ರಾಣು ಅಪ್ಪಣ್ಣ ಅವರ ಕೊಡವ ಭಾಷಾ ಲೇಖನ. ಪ್ರಸ್ತುತ ಲೇಖನವು ಕೊಡವ ಜನಪದೀಯ ಕುಣಿತಗಳಾದ ಬೊಳಕಾಟ್, ಕೊಂಬಾಟ್, ಪೀಲಿಯಾಟ್, ಕೋಲಾಟ್, ಬೋಡಾಟ್, ಉಮ್ಮತ್ತಾಟ್, ವಾಲಗತ್ತಾಟ್, ಮರಪನಾಟ್. ಅಂಗಕಳಿ– ಇವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತದೆ.

ಮುಗ್ಗೇರ ಎಂ.ಕರುಂಬಯ್ಯ ಅವರ 'ಕೊಡವ ಜಾನಪದ'[೧೫] ಕೊಡವ ಜನಪದ ಕಲೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಜನಪದ ಕಲೆಗಳಾದ ಬೊಳಕಾಟ್, ಕೋಲಾಟ್, ಪರಿಯಕಳಿ, ಬೋಡಾಟ್, ಕುದ್‌ರೆ ಆಟ್, ವಾಲಗತ್ತಾಟ್, ಉಮ್ಮತ್ತಾಟ್ ಇತ್ಯಾದಿ ನೃತ್ಯಗಳ ಸಂಕ್ಷಿಪ್ತ ವಿವರಣೆಯನ್ನು ಈ ಲೇಖನ ನೀಡುತ್ತದೆ.

ಕೊಡವ ಜನಪದ ನೃತ್ಯಗಳ ಅಧ್ಯಯನ ನಡೆದು ಬಂದ ದಾರಿಯ ಮೊದಲ ಹಂತವನ್ನು ಗಮನಿಸಿದಾಗ ಕೊಡವ ಜನಪದ ನೃತ್ಯಗೀತೆಗಳ ಸಂಗ್ರಹ ಮತ್ತು ಅಧ್ಯಯನದ ಪ್ರಯತ್ನಗಳು ಮೊತ್ತ ಮೊದಲಿಗೆ ಪಾಶ್ಚಾತ್ಯ ವಿದ್ವಾಂಸರಿಂದಲೇ ನಡೆದಿವೆ. ಕರ್ನಾಟಕ ಜಾನಪದಕ್ಕೆ ಹೇಗೋ ಹಾಗೆ

ಕೊಡವ ಜಾನಪದ ಅಧ್ಯಯನ ಕ್ಷೇತ್ರಕ್ಕೂ ವಿದೇಶಿ ವಿದ್ವಾಂಸರೇ ಆರಂಭವನ್ನು ಮಾಡಿದ್ದಾರೆ. ಆದರೆ ಈ ವಿದ್ವಾಂಸರ ಕೃತಿಗಳೆಲ್ಲವೂ ನಮಗೆ ಆಂಗ್ಲಭಾಷೆಯಲ್ಲೇ ಲಭ್ಯವಾಗುತ್ತಿದ್ದವು. ಹಾಗೆಯೇ ಈ ಎಲ್ಲಾ ಪ್ರಯತ್ನಗಳು ಜಾನಪದ ಅಧ್ಯಯನವು ಒಂದು ಶಿಸ್ತಾಗಿ ರೂಪುಗೊಂಡಿಲ್ಲದ ಕಾಲಘಟ್ಟದಲ್ಲಿ ನಡೆಯಿತೆನ್ನಬಹುದು.

ಅನಂತರದ ದಿನಗಳಲ್ಲಿ ತಾವೊಬ್ಬ ಜಾನಪದ ವಿದ್ವಾಂಸನಾಗಿ ಈ ಕಾರ್ಯವನ್ನು ಮಾಡುತ್ತಿದ್ದೇನೆ ಎಂಬ ಕಲ್ಪನೆಯೇ ಇಲ್ಲದೆ ಕೊಡವ ಜನಪದ ನೃತ್ಯಗಳನ್ನು ಒಳಗೊಂಡಂತೆ ಕೊಡವ ಜಾನಪದದ ವಿವಿಧ ಪ್ರಕಾರಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಕೆಲಸ ನಡಿಕೇರಿಯಂಡ ಚಿಣ್ಣಪ್ಪ ಅವರಿಂದ ನಡೆಯಿತು. ಕೃತಿಯ ಹೆಸರೇ ಸೂಚಿಸುವಂತೆ ಬಾಯಿಂದ ಬಾಯಿಗೆ ಹರಿದು ಬಂದ ಮಾತುಗಳನ್ನು ಒಳಗೊಂಡ ಈ ಕೃತಿ ಕೊಡವ ಜಾನಪದ ಕ್ಷೇತ್ರ ಮಾತ್ರವಲ್ಲ ಕನ್ನಡ ಜಾನಪದ ಕ್ಷೇತ್ರದಲ್ಲಿ ಮಹತ್ವದ ಹೆಸರನ್ನು ಪಡೆದಿದೆ. ಈ ಹಿನ್ನಲೆಯಲ್ಲಿ 'ಪಟ್ಟೋಲೆ ಪಳಮೆ' ಕೊಡವ ಜಾನಪದ ಅಧ್ಯಯನಕ್ಕೆ ಉತ್ತಮ ಅಡಿಪಾಯ ಹಾಕಿದ ಆಚಾರ್ಯ ಕೃತಿ ಎನ್ನಬಹುದು.

ಇದರ ನಂತರದ ದಿನಗಳಲ್ಲಿ ಐ.ಎಂ. ಮುತ್ತಣ್ಣ, ಬಿ.ಡಿ. ಗಣಪತಿ, ಅಪಾಡಂಡ ಗಣಪತಿ, ಪೇರಿಯಂಡ ಚಂಗಪ್ಪ, ಮುಗ್ಗೇರ ಗಣಪತಿ, ಮುಗ್ಗೇರ ಎಂ. ಕರುಂಬಯ್ಯ ಮುಂತಾದವರು ಕೊಡವ ಜನಪದ ನೃತ್ಯಗೀತೆಗಳ ಸಂಗ್ರಹ ಮತ್ತು ಅಧ್ಯಯನದಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು.

ಕೊಡವರಲ್ಲದಿದ್ದರೂ, ಕೊಡವ ಸಂಸ್ಕೃತಿಯಿಂದ ಪ್ರಭಾವಿತರಾಗಿ, ಅಭಿಮಾನದಿಂದ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡವರೂ ಇದ್ದಾರೆ. ಸಂಶೋಧಕರಾದ ಡಾ.ಎಂ.ಜಿ. ನಾಗರಾಜ್, ಲಕ್ಷ್ಮಣ ತೆಲಗಾವಿ, ಕೆ.ಆರ್. ಕೃಷ್ಣಯ್ಯ, ಡಾ.ಡಿ.ಬಿ. ರಾಮಚಂದ್ರಾಚಾರ್, ರಾಮಕೃಷ್ಣ ಉಡುಪ, ಅನಿಲ್ ಎಚ್.ಟಿ. ಮುಂತಾದವರ ಕೃತಿಗಳು ಹಾಗೂ ಲೇಖನಗಳು ಇಲ್ಲಿ ಗಮನೀಯವಾದುದು.

ಹಿರಿಯ ಜಾನಪದ ತಜ್ಞರಾದ ಬಾಚರಣಿಯಂಡ ಪಿ.ಅಪ್ಪಣ್ಣ, ಜನಪದ

ಕಲಾವಿದರಾದ ಪಾಲಂದಿರ ಪಿ. ದೇವಯ್ಯ, ರಾಣು ಅಪ್ಪಣ್ಣ, ಯು.ಎಂ.ಪೂವಯ್ಯ ಮುಂತಾದ ಸ್ಥಳೀಯ ಲೇಖಕರು ಹಾಗೂ ಕಲಾವಿದರು ತಮ್ಮ ವಿಚಾರಗಳನ್ನು ವಿವಿಧ ಕೃತಿಗಳು ಹಾಗೂ ಲೇಖನಗಳಲ್ಲಿ ದಾಖಲಿಸಿದ್ದಾರೆ.

ಬೆರಳೆಣಿಕೆಯ ಲೇಖನಗಳು ಹಾಗೂ ಕೃತಿಗಳನ್ನು ಬಿಟ್ಟು ಉಳಿದ ಎಲ್ಲಾ ಪ್ರಯತ್ನಗಳು ಕೊಡವ ಜಾನಪದ ಹಾಗೂ ಕೊಡವ ಸಂಸ್ಕೃತಿಯ ಮೇಲೆ ಬೆಳಕು ಬೀರಿವೆ. ನಿರ್ದಿಷ್ಟವಾಗಿ ಕೊಡವ ಜನಪದ ನೃತ್ಯಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ, ವ್ಯವಸ್ಥಿತವಾಗಿ ನಡೆದಿರುವ ಕಾರ್ಯ ಕಡಿಮೆಯಾಗಿದ್ದು, ನಡೆಯಬೇಕಾದ ಕಾರ್ಯ ಬಹಳಷ್ಟಿದೆ ಎಂಬುದು ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

೧– ಪರಿಪೂರ್ಣ (ಸ್ಮರಣ ಸಂಚಿಕೆ) ದ್ವಿಶತಮಾನೋತ್ಸವ ಸಮಿತಿ, ಸಂತ ಅನ್ನಮ್ಮ ದೇವಾಲಯ, ವೀರರಾಜೇಂದ್ರಪೇಟೆ 1992 ಪು 108–113.

೨– ಮಡಿಕೇರಿ ಸಾಹಿತ್ಯ ಸಮ್ಮೇಳನ ಸಂಪುಟ 1981, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1981 ಪು.221–234.

೩– ಪೂರ್ವೋಕ್ತ ಪು.235–244

೪– ಸಾಹಿತ್ಯ ಕಾವೇರಿ, ಕೊಡಗು ಜಿಲ್ಲಾ 3 ನೇ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಮಡಿಕೇರಿ, 1979 ಪು.61–62

೫–ಚಂದನ (ಕೊಡಗು ಜಿಲ್ಲಾ 3ನೇ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ) ಸೋಮವಾರಪೇಟೆ.

೬–ವೀರಾರಾಜೇಂದ್ರ ಪೇಟೆ ಕನಾಟಕ ಸಂಘದ ಕಟ್ಟಡ ಉದ್ಘಾಟನೆ ಸ್ಮರಣ ಸಂಚಿಕೆ, 1975–76 ವೀರರಾಜೋಂದ್ರಪೇಟೆ 1976 ಪು.87

೭–ಕನ್ನಡ ಕಾವೇರಿ (ಸ್ಮರಣ ಸಂಚಿಕೆ) ಪು.83–84

೮–ಕೊಡಗು ದರ್ಶನ (ಕೊಡಗು ಉತ್ಸವ 97 ಸ್ಮರಣ ಸಂಚಿಕೆ) ಕೊಡಗು ಉತ್ಸವ ಸಮಿತಿ, ಮಡಿಕೇರಿ 1997 ಪು. 69–73.

೯–ಪೂರ್ವೋಕ್ತ ಪು.74–81

೧೦–'ಕೊಡಗು ದರ್ಶನ'(ಕೊಡಗು ಉತ್ಸವ 97, ಸ್ಮರಣ ಸಂಚಿಕೆ), ಕೊಡಗು ಉತ್ಸವ ಸಮಿತಿ, ಮಡಿಕೇರಿ 1997 ಪು.29–31

೧೧– ಸುಧಾ ವಾರಪತ್ರಿಕೆ, 30–7–1995 ಬೆಂಗಳೂರು ಪು.25

೧೨– ಕೊಡವಾಮೆ (ತ್ರೈಮಾಸಿಕ ಸಂಚಿಕೆ) ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ 2000; ಪು.23–25.

೧೩– ಕೊಡವ ಪುದುಮೆ (ರಾಷ್ಟ್ರೀಯ ಕೊಡವ ಸಾಂಸ್ಕೃತಿಕ ಮೇಳ 1998, ವಿಶೇಷ ಸಂಚಿಕೆ); ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮಡಿಕೇರಿ, 1998 ಪು. 25–26.

೧೪–ಪೂರ್ವೋಕ್ತ, ಪು.36–42.

೧೫– ಕೊಡವ ಪುದುಮೆ, (ರಾಷ್ಟ್ರೀಯ ಕೊಡವ ಸಾಂಸ್ಕೃತಿಕ ಮೇಳ 1998 ವಿಶೇಷ ಸಂಚಿಕೆ) ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ 1998.ಪು.75–77.

ಅಧ್ಯಾಯ–೨

ಕೊಡವ ಜನಪದ ನೃತ್ಯ ಪ್ರಕಾರಗಳು

ಜನಪದ ಕಲೆಗಳಲ್ಲಿ ಒಂದಾದ ಜನಪದ ನೃತ್ಯಗಳು ಅಥವಾ ಕುಣಿತಗಳು ಸಂಸ್ಕೃತಿಯ ಅವಿಭಾಜ್ಯ ಅಂಗ. ಜನಪದ ಕಲೆಗಳ ಬೆಳವಣಿಗೆಯಿಂದಲೇ ಮನುಷ್ಯನ ಸಾಂಸ್ಕೃತಿಕ ಇತಿಹಾಸ ನಿರ್ಮಾಣವಾಯಿತು. ಕಲೆಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲ; ಅವು ಜನರ ಆಸೆ–ಆಕಾಂಕ್ಷೆ, ದು:ಖ–ದುಮ್ಮಾನಗಳನ್ನು ಅಭಿವ್ಯಕ್ತಿಸುತ್ತವೆ. ದ್ವೇಷ ರೋಷಗಳ ಮಾಧ್ಯಮ ಆಗುವ ಸಾಧ್ಯತೆಯೂ ಇದೆ.

ಕೊಡವ ಜನಪದ ನೃತ್ಯಗಳು ಇತರ ರಾಜ್ಯಗಳ ಜನಪದ ನೃತ್ಯಗಳಿಗಿಂತ ಹೆಚ್ಚು ವೈವಿಧ್ಯಪೂರ್ಣವಾಗಿವೆ. ವೈವಿಧ್ಯಮಯ ಭೌಗೋಳಿಕ ಹಿನ್ನಲೆ, ವಿವಿಧ ಜನಾಂಗಗಳಿಗೆ ಸೇರಿರುವ ಜನಪದರ ಪರಸ್ಪರ ಕೊಳು–ಕೊಡುಗೆ, ವೃತ್ತಿ ಇವೆಲ್ಲವೂ ಈ ವೈವಿಧ್ಯತೆಗೆ ಕಾರಣವಾಗಿರಬಹುದು.

ಕುಣಿತ ಅಥವಾ ನೃತ್ಯ ವ್ಯಕ್ತಿಯ ಮೂಲ ಪ್ರವೃತ್ತಿ. ಭಾಷೆಗಿಂತ ಮೊದಲು ಅಂಗಚಲನೆ, ಅಭಿನಯ ಹುಟ್ಟಿಕೊಂಡಿತು. ಮುಂದೆ ವಿಕಸನಗೊಂಡು ಅದು ಕುಣಿತ ಅಥವಾ ನೃತ್ಯವಾಯಿತು. ಬದುಕಿನ ನಾದ, ಲಯ, ನೋವು, ನಲಿವು, ಸುಖ –ದು:ಖಗಳನ್ನು ಗರ್ಭೀಕರಿಸಿಕೊಂಡಿರುವ ಜನಪದ ನೃತ್ಯಗಳು ಸಮುದಾಯ–ಸಂಸ್ಕೃತಿಯೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡು ಕಲಾಪರಿಣತಿಗೆ ಹೆಸರಾದವು. ವ್ಯಷ್ಟಿಕೃತವಾದರೂ, ಸಮಷ್ಟಿಯ ಸೊತ್ತಾಗಿ ಪರಿಣಮಿಸಿದ ಇವುಗಳು ಸಮಷ್ಟಿ ಬದುಕಿನ ಚಟುವಟಿಕೆಗಳಿಂದ

ಜನಪದರ ಸಂಘಟನೆ ಮತ್ತು ಸಂವಹನಕ್ಕೆ ನೇರವಾಗಿ ಆಧಾರವಾದವುಗಳು.

ಜನಪದ ನೃತ್ಯಗಳು ಜನಪದರ ಕಲಾತ್ಮಕ ಅಭಿವ್ಯಕ್ತಿ. ಜನಪದ ಕಲೆಗಳಲ್ಲಿನ ಬಹಳ ಸಮೃದ್ಧವಾದ ಹಾಗೂ ಬಹುವ್ಯಾಪಕವಾದ ಭಾಗವೂ ಹೌದು. ಸರಳ, ನೇರ ಆಕರ್ಷಣೀಯ ಗುಣಗಳಿಂದ ಇವು ಎಳೆಯರಿಂದ ಹಿಡಿದು ವಯಸ್ಸಾದವರವರೆಗೂ ಎಲ್ಲರಿಗೂ ಮುದ ನೀಡುತ್ತವೆ.

ಕೊಡವ ಜನಪದರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರಾಧನಾ ಸಂದರ್ಭಗಳನ್ನು ಗಮನಿಸಿದಾಗ ಅವರಲ್ಲಿ ವಿಶಿಷ್ಟ ಹಾಗೂ ವೈವಿಧ್ಯಪೂರ್ಣ ಜನಪದ ನೃತ್ಯಗಳಿವೆ. ಅವುಗಳಲ್ಲಿ ಕೆಲವು ಗೀತ ಪ್ರಧಾನ ನೃತ್ಯಗಳಾದರೆ ಇನ್ನು ಕೆಲವು ವಾದ್ಯಪ್ರಧಾನ, ಇನ್ನು ಕೆಲವು ಆರಾಧನಾಪ್ರಧಾನ, ಮನರಂಜನಾಪ್ರಧಾನ ನೃತ್ಯಗಳಿವೆ. ಅಲ್ಲದೆ ಗೀತ, ವಾದ್ಯ, ನೃತ್ಯ, ಮನರಂಜನೆ ಹೀಗೆ ಎಲ್ಲವನ್ನೂ ಮೇಳೈಸಿಕೊಂಡಿರುವ ನೃತ್ಯಗಳು ಇವೆ.

ದೃಶ್ಯ ಹಾಗೂ ಶ್ರವ್ಯ ಗುಣಗಳನ್ನು ಹೊಂದಿ ಚೇತೋಹಾರಿಯಾಗಿರುವ ಈ ನೃತ್ಯಗಳು ತಮ್ಮ ವಿಶಿಷ್ಟ ನಡವಳಿಕೆ, ಆಚರಣೆ, ರಂಗವೈವಿಧ್ಯಗಳಿಂದ ಯಾವುದೇ ನಿರ್ಭಂಧಗಳಿಗೆ ಸಿಲುಕದೆ ಸ್ವತಂತ್ರವಾಗಿ ಬೆಳೆದು ಬಂದಿವೆ.

ಅಧ್ಯಯನದ ಅನುಕೂಲದ ದೃಷ್ಟಿಯಿಂದ ಕೊಡವ ಜನಪದ ನೃತ್ಯಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ಚರ್ಚಿಸಲಾಗಿದೆ. ಇಲ್ಲಿ ಕೊಡವ ಭಾಷೆಯನ್ನಾಡುವ ಕೊಡವ ಭಾಷಿಕ ಮೂಲನಿವಾಸಿಗಳ ಜನಪದ ನೃತ್ಯಗಳೆಲ್ಲವನ್ನೂ ಸೇರಿಸಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

೧. ವಾದ್ಯ ಪ್ರಧಾನ ನೃತ್ಯಗಳು.

೨. ವಾದ್ಯ ಮತ್ತು ಗೀತ ಪ್ರಧಾನ ನೃತ್ಯಗಳು.

೩. ಗೀತ ಪ್ರಧಾನ ನೃತ್ಯಗಳು.

೧. ವಾದ್ಯ ಪ್ರಧಾನ ನೃತ್ಯಗಳು :-

ವಾದ್ಯ ಪ್ರಧಾನ ನೃತ್ಯಗಳಲ್ಲಿ ಹಿಮ್ಮೇಳವಾಗಿ ಜನಪದೀಯ ವಾದ್ಯಗಳಾದ ಕಚ್ಚೆದುಡಿ, ಮೇದಪರೆ, ದೋಳ್(ಡೊಳ್ಳು), ತಾಳಗಳು ಪ್ರಮುಖ ಪಾತ್ರ

ವಹಿಸುತ್ತವೆ. ಹತ್ತು ಕೊಡವ ಜನಪದ ನೃತ್ಯಗಳನ್ನು ಈ ವಿಭಾಗದಲ್ಲಿ ಚರ್ಚಿಸಲಾಗಿದೆ.

ಅ) ಕೋಲಾಟ್ :-

ಹುತ್ತರಿ ಕೊಡವರ ಪ್ರಮುಖ ಹಬ್ಬಗಳಲ್ಲಿ ಒಂದು. ಕೃಷಿ ಪ್ರಧಾನವಾದ ಕೊಡಗಿನಲ್ಲಿ ಕಟಾವಿಗೆ ಸಿದ್ದವಾಗಿ 'ನಿಂತ ಭತ್ತದ ಕೊಯಿಲನ್ನು ಅರ್ಥಾತ್ ಭತ್ತವನ್ನು ಮನೆಗೆ ಬರಮಾಡಿಕೊಳ್ಳುವ ಪೂರ್ವಿಭಾವಿ ಸಿದ್ಧತೆಯೇ ಈ ಹಬ್ಬ. ಹೊಸ ಭತ್ತವನ್ನು ಮನೆಗೆ ತರುವ ಸಂಭ್ರಮವೇ ಈ ಹಬ್ಬದ ಮೂಲ ಸಂಕೇತ. ಈ ಸಂದರ್ಭದಲ್ಲಿ ನರ್ತಿಸುವ ನೃತ್ಯವೇ ಕೋಲಾಟ್.

ಸಾಧಾರಣವಾಗಿ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಈ ಹಬ್ಬವನ್ನು ಕೊಡವ ಸಮುದಾಯ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಹಬ್ಬಕ್ಕೆ ಮುಂಚಿತವಾಗಿ ಪ್ರತೀ ಮನೆಯಲ್ಲಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ. ಮನೆಗಳನ್ನು ಸುಣ್ಣ ಬಣ್ಣಗಳಿಂದ ಅಂದಗೊಳಿಸುತ್ತಾರೆ. ಊರಿನ ದೇವಸ್ಥಾನ, 'ಮಂದ್'ಗಳನ್ನು ಶುಚಿಗೊಳಿಸುತ್ತಾರೆ. ಹಬ್ಬಕ್ಕೆ ನಾಲ್ಕೈದು ದಿನಗಳಿಗೆ ಮುಂಚಿತವಾಗಿ ಗ್ರಾಮದ ಯುವಕರು, ಹಿರಿಯರೆಲ್ಲಾ ಸೇರಿ ಗ್ರಾಮದ ನಿಶ್ಚಿತ ದೇವಸ್ಥಾನ ಅಥವಾ ಮಂದ್‌ನಲ್ಲಿ ಸೇರಿ ಕೋಲಾಟ್ ಅನ್ನು ಅಭ್ಯಾಸ ಮಾಡುತ್ತಾರೆ. ಹುತ್ತರಿ ಹಾಡು ಹಾಡುವುದನ್ನು ಮತ್ತು ಕ್ರಮಬದ್ಧವಾಗಿ ಕೋಲಾಟ್ ಆಡುವುದನ್ನು ಪ್ರತೀ ದಿನ ಸಂಜೆ ಅಭ್ಯಾಸ ಮಾಡಿ ಹಬ್ಬಕ್ಕೆ ಸಿದ್ಧರಾಗುತ್ತಾರೆ. ಇದಕ್ಕೆ 'ಈಡ್ ತೆಗೆಯುವುದು) ಎನ್ನುತ್ತಾರೆ. ಈಡ್ ತೆಗೆಯಲು ಹೋಗುವವರು ತಮ್ಮ ರಾತ್ರಿಯ ಊಟ ಮುಗಿಸಿ ಸುಮಾರು ಏಳು ಗಂಟೆಗೆ ಮಂದ್‌ನಲ್ಲಿ ಸೇರಿ ಬೆಳದಿಂಗಳಿನಲ್ಲಿ ತಮ್ಮ ನೃತ್ಯ ಮತ್ತು ಹಾಡುಗಳನ್ನು ಅಭ್ಯಾಸ ಮಾಡುವರು. ಪೂರ್ವದಲ್ಲಿ ಪ್ರತಿಯೊಬ್ಬ ಕೊಡವನಿಗೂ ಹಾಡಲು ಮತ್ತು ಕುಣಿಯಲು ತಿಳಿದಿರಬೇಕಿತ್ತು. ಗ್ರಾಮದ ಯಾವುದೇ ಶುಭಾಶುಭ ಸಂದರ್ಭಗಳಲ್ಲಿ ದುಡಿ ತೆಗೆದು ಹಾಡುವಂತೆ ಗ್ರಾಮದ ಯಾರನ್ನಾದರೂ ಹೆಸರಿಸುವ ಅಧಿಕಾರ ತಕ್ಕನಿಗೆ ಇರುತಿತ್ತು.

ಹಬ್ಬದ ಸಂದರ್ಭದಲ್ಲಿ ಸಾಂಪ್ರದಾಯಿಕ ಉಡುಗೆ ತೊಡುಗೆಯಾದ

ಕುಪ್ಯಚೇಲೆ, ಪೀಚೆ ಕತ್ತಿ, ಮಂಡೆತುಣಿಯನ್ನು ಧರಿಸಿ ಊರಿನ ಮಂದ್ (ಮೈದಾನ)ನಲ್ಲಿ ಈ ಕೋಲಾಟವನ್ನು ಆಡುತ್ತಾರೆ. ಕೋಲಾಟಕ್ಕೆ ಸುಮಾರು ಮೂರುವರೆ ಅಡಿ ಉದ್ದದ ತೂರೆಕೋಲ್ (ಬಿದಿರಿನ ಜಾತಿಯ ಸಸ್ಯದ ಕಾಂಡದ ಕೋಲು)ಅನ್ನು ಬಳಸಲಾಗುತ್ತದೆ. ಜಪ್ಪೆ ಕೋಲ್, ಚೆಂಡ್‌ತೂರೆ ಕೋಲ್, ಪಾತೂರೆ ಕೋಲ್ ಇವು ಕೋಲಾಟಕ್ಕೆ ಬಳಸುವ ವಿವಿಧ ರೀತಿಯ ಕೋಲುಗಳು. ಕೋಲಿನ ಹಿಡಿಯಲ್ಲಿ ಗೆಜ್ಜೆಗಳನ್ನು ಜೋಡಿಸಿದ್ದು, ಕೋಲಾಟ ನಡೆಯುವಾಗ ತಾಳಬದ್ಧ ಶಬ್ಧ ಕೇಳುತ್ತದೆ. ಇತ್ತೀಚೆಗೆ ಇಂತಹ ಕೋಲುಗಳು ಕಣ್ಮರೆಯಾಗಿವೆ.

ಸುಗ್ಗಿಯ ಸಂಭ್ರಮ ಹಾಗೂ ಮನರಂಜನೆ ಈ ನೃತ್ಯದ ಮೂಲ ಉದ್ದೇಶ. 'ಪರೆ' ಎಂಬ ಚರ್ಮ ವಾದ್ಯವು ಈ ಕುಣಿತಕ್ಕೆ ಹಿಮ್ಮೇಳವನ್ನು ಒದಗಿಸುತ್ತದೆ. "ಮೇದ" ಜನಾಂಗಕ್ಕೆ ಸೇರಿದ ವ್ಯಕ್ತಿ ಈ ಚರ್ಮವಾದ್ಯವನ್ನು ಬಾರಿಸುತ್ತಾನೆ. ಇದರೊಂದಿಗೆ ಕಲಾವಿದರು ಹಾಡುತ್ತಾ ಕುಣಿಯುತ್ತಾರೆ. ಈ ಹಾಡನ್ನು ಕೊಡವ ಭಾಷೆಯಲ್ಲಿ 'ಬಾಯಿತ್ಸೊರ' ಕೊಡುವುದು ಎನ್ನುತ್ತಾರೆ. ಹಾಸ್ಯ, ನೀತಿ ಬೋಧನೆ, ಚೋದ್ಯ, ಗೇಲಿಗಳು, ಹುತ್ತರಿ ಹಬ್ಬದ ಸಂಭ್ರಮ ಇಲ್ಲಿ ಹಾಸುಹೊಕ್ಕಾಗಿವೆ. ಈ ವಿಧದ ಕೋಲಾಟವು ಕೊಡಗಿನ 'ಮೇಂದಲೆ ನಾಡ್' ನಲ್ಲಿ ಚಾಲ್ತಿಯಲ್ಲಿದೆ.

ಕ್ಗಟ್ಟ್‌ನಾಡ್'ಗೆ ಸೇರಿದ ಊರುಗಳಲ್ಲಿ ನಡೆಯುವ ಕೋಲಾಟ್‌ನಲ್ಲಿ ಹೊಲೆಯ ಜನಾಂಗಕ್ಕೆ ಸೇರಿದ ವ್ಯಕ್ತಿಗಳು ನುಡಿಸುವ 'ಕೊಂಬು ಕೊಟ್ಟ್ ವಾಲಗ'ಕ್ಕೆ ಸರಿಯಾಗಿ ನರ್ತಿಸುತ್ತಾರೆ. ಇಲ್ಲಿ 'ಬಾಯಿತರ' ಕೊಡುವುದು ಇರುವುದಿಲ್ಲ. ಅದಕ್ಕೆ ಬದಲಾಗಿ ಮೋರಿ ವಾದ್ಯವನ್ನು ನುಡಿಸುವ ವ್ಯಕ್ತಿ ಈ ಹಾಡನ್ನು ನುಡಿಸುತ್ತಾನೆ.

"ಕೊಟ್ಟ್‌ಡಾ ಮೇದ ನೀ ಊದ್ ಪೋಲೆಯಾ ಪೊಯಿಲೇ ಪೊಯಿಲೇ
ಊರ್‌ಡ ಮಂದ್‌ಲ್ ಕೋಲ್ ಕ್‌ಳ್‌ಂಜ ಪೊಯಿಲೇ ಪೊಯಿಲೇ
ನಾಡ್ ಪರಂಬ್‌ಲ್ ಕೋಲ್‌ಕ್‌ಳ್‌ಂಜ ಪೊಯಿಲೇ ಪೊಯಿಲೇ
ದೇವ ಪರ್‌ಂಬ್‌ಲ್ ಕೋಲ್‌ಕ್‌ಳ್‌ಂಜ ಪೊಯಿಲೇ ಪೊಯಿಲೇ"...

"ವಾದ್ಯಗಾರರೇ ಸರಿಯಾಗಿ ವಾದ್ಯವನ್ನು ನುಡಿಸಿ. ಊರಿನ ಮಂದ್ (ಮೈದಾನ)ದಲ್ಲಿ, ನಾಡಿನ ಮಂದ್‌ನಲ್ಲಿ ಅಲ್ಲದೆ ದೇವರ ಪರ್‌ಂಬ್ (ಮೈದಾನ)ನಲ್ಲೂ ಕೋಲಾಟವಾಡುತ್ತಿದ್ದೇವೆ." - ಹೀಗೆ ಸಾಗುವ ಈ ಗೀತೆಯಲ್ಲಿ ಕೋಲಾಟ ಆಡುವವರ ವರ್ಣನೆ, ಹುತ್ತರಿಯ 'ತಂಬುಟ್ಟ್'ಿನ ವರ್ಣನೆಯೊಂದಿಗೆ ಹಬ್ಬದ ಸಂಭ್ರಮವೂ ವರ್ಣಿಸಲ್ಪಟ್ಟಿದೆ.

ಈ ಕುಣಿತದಲ್ಲಿ ನಡುಕೋಲ್, ಕಡತ್‌ಕೋಲ್, ದಾಟ್ ಕೋಲ್, ಒತ್ತೆ ಕೋಲ್, ಮೂಂದ್ ಪೊಯಿತ್ ಕೋಲ್, ನೆಲ ಪೊಯಿತ್, ಓಂಗಿ ಪೊಯಿತ್ ಹೀಗೆ ಸುಮಾರು ಮೂವತ್ತೆರಡು ವಿಧದ ಕೋಲಾಟ ಭಂಗಿಗಳಿವೆ. ಒಂದು ಭಂಗಿ ಮುಗಿದು ಮತ್ತೊಂದು ಪ್ರಾರಂಭಿಸುವಾಗ ಕೋಲಾಟದ ನಿರ್ದೇಶಕನು 'ಕೂಹಾ' ಎಂದು ಕೂಗಿ ಸಂಕೇತ ನೀಡುತ್ತಾನೆ. ಸಾಮಾನ್ಯವಾಗಿ ಕೋಲಾಟದ ನಿರ್ದೇಶಕ ಒಳ್ಳೆಯ ನೃತ್ಯಗಾರನಾಗಿದ್ದು ಮುಂದೆ ಕೋಲಾಟವಾಡುತ್ತಾ ತಂಡವನ್ನು ಮುನ್ನಡೆಸುತ್ತಾನೆ.

ಆ) ಕೊಂಬಾಟ್ :-

ವಾದ್ಯ ಪ್ರಧಾನ ನೃತ್ಯಗಳಲ್ಲಿ 'ಕೊಂಬಾಟ್' ಒಂದು. ಇದು ದೈವೀ ಆರಾಧನೆಯ ಹಿನ್ನಲೆಯಲ್ಲಿ ನಡೆಯುತ್ತದೆ. ಕೊಡಗಿನ ಮಡಿಕೇರಿ ತಾಲೂಕಿನ ಕೋಕೇರಿ ಎಂಬ ಗ್ರಾಮದಲ್ಲಿ ನಡೆಯುವ 'ಶಾಸ್ತಾವು' (ಸಾರ್ಥಾವು) ದೇವರ ಹಬ್ಬ ಕೊಂಬಾಟ್‌ನೊಂದಿಗೆ ಗುರುತಿಸಿಕೊಳ್ಳುತ್ತದೆ. ಈ ಹಬ್ಬವನ್ನು 'ಕೊಂಬಾಟ್ ನಮ್ಮೆ'. (ಉತ್ಸವ) ಎಂದೇ ಕರೆಯಲಾಗುತ್ತದೆ.

ಆರಾಧನಾ ಅಂಗವಾಗಿ ನಡೆಯುವ ಈ ಕುಣಿತದಲ್ಲಿ ನರ್ತಿಸುವವರು ಕಟ್ಟು ನಿಟ್ಟಿನ ವ್ರತ ನಿಯಮಗಳನ್ನು ಪಾಲಿಸುತ್ತಾರೆ. ಹಬ್ಬದ 'ಕೆಟ್ಟ್' (ಕಟ್ಟಳೆ) ಪ್ರಾರಂಭವಾದಂದಿನಿಂದ ಪ್ರತಿನಿತ್ಯ ಮುಂಜಾನೆ ಅಥವಾ ಸಂಜೆ ದೇವಸ್ಥಾನದಲ್ಲಿ ಕುಣಿತದ ಪೂರ್ವತಯಾರಿಯನ್ನು ನಡೆಸುತ್ತಾರೆ. ಸುಮಾರು ೧೮ ದಿನಗಳ ತಾಲೀಮಿನ ನಂತರ ೨೦ನೇ ದಿನ ಹಬ್ಬದಂದು ನರ್ತಿಸುತ್ತಾರೆ. ನೃತ್ಯವನ್ನು ಮುನ್ನಡೆಸುವವನನ್ನು 'ಮುಂಬಾಟ್‌ಕಾರ' ಅಥವಾ 'ಕೊಂಡಾಟ್‌ಕಾರ'ನೆಂದು ಕರೆಯುತ್ತಾರೆ.

ಕಲಾವಿದರು 'ಬಿಳಿಯ ವರ್ಣದ ಕುಪ್ಯ' (ದಟ್ಟಿ ಕುಪ್ಪಸದ) ತೋಳನ್ನು

ಮಡಚಿ ಸೊಂಟಕ್ಕೆ ಬಿಗಿಯಾಗಿ ಕಟ್ಟುತ್ತಾರೆ. ನಂತರ 'ಚೇಲೆ'ಯನ್ನು ಎದೆಯ ಮುಂಭಾಗಕ್ಕೆ ಕತ್ತರಿಯಾಕಾರದಲ್ಲಿ ಕಟ್ಟಲಾಗುತ್ತದೆ. ಇದನ್ನು 'ಮಾರಾಪು ಕೆಟ್ಟ್‌ವೊ' ಎನ್ನಲಾಗುತ್ತದೆ. ಮೇದ ಜನಾಂಗಕ್ಕೆ ಸೇರಿದ ವ್ಯಕ್ತಿ ಬಾರಿಸುವ 'ಪಡುವ' ಎಂಬ ವಾದ್ಯ ಪರಿಕರ ಇದಕ್ಕೆ ಹಿಮ್ಮೇಳವನ್ನು ಒದಗಿಸುತ್ತದೆ.

ಭಸ್ಮಾಸುರನನ್ನು ಸಂಹರಿಸಲು ಅವತಾರವೆತ್ತಿದ ವಿಷ್ಣು ಒಮ್ಮೆ ಕೊಂಬನ್ನು ಮತ್ತೊಮ್ಮೆ ಪೀಲಿ(ನವಿಲು ಗರಿ)ಯನ್ನು ಹಿಡಿದು ಸುಮಾರು ಹದಿನೆಂಟು ವಿಧಗಳಲ್ಲಿ ನರ್ತಿಸಿ ಸಂಹರಿಸಿದನಂತೆ. ಅದರ ಪ್ರತಿರೂಪವೇ ಈ ಕುಣಿತ ಎಂದು ನಂಬಲಾಗಿದೆ.

ಆರಂಭದಲ್ಲಿ ಕಲಾವಿದರು ಎತ್ತಿನ ಕೊಂಬಿನ ಸಂಕೇತವೆನ್ನುವಂತೆ ಬಯ್ಯ (ಹೊಳೆ ದಂಡೆಯಲ್ಲಿ ಕಾಣ ಸಿಗುವ ಒಂದು ಜಾತಿಯ ಮರ) ಮರದ ಕವಟೆಯನ್ನು ಕೈಯಲ್ಲಿ ಹಿಡಿದು ನರ್ತಿಸುತ್ತಾರೆ. ಈ ರೀತಿ ಕೊಂಬನ್ನು ಹಿಡಿದು ಕುಣಿಯುವ ನೃತ್ಯವೇ ಕೊಂಬಾಟ್. ಇಲ್ಲಿ ಕೊಂಬಿಗೆ ಕೊಂಬನ್ನು ತಾಗಿಸುತ್ತ, ಇರಿಯುವ, ಭಾವ ಭಂಗಿಗಳು ವಿಶೇಷವಾದುದಾಗಿದೆ.

ಕೊಡಗಿನ ಕೆಲವೆಡೆ (ಕೈಕಾಡ್ ಗ್ರಾಮದ ಮಕ್ಕೋಟ್ ಮಹಾಲಕ್ಷ್ಮಿ ದೇವಸ್ಥಾನ, ಪಾಲೇರಿ ಭದ್ರಕಾಳಿ ದೇವಸ್ಥಾನ)ಗಳಲ್ಲಿ ಜಿಂಕೆಯ ಕೊಂಬುಗಳನ್ನೇ ಬಳಸಿ ನರ್ತಿಸುವ ಪರಿಪಾಟವೂ ಇದೆ. ನೃತ್ಯಗಾರರು ಬಿಳಿವರ್ಣದ ಕುಪ್ಯಚೇಲೆಯನ್ನು ಧರಿಸಿರುತ್ತಾರೆ. ಇಲ್ಲಿ ನಡೆಯುವ ಕೊಂಬಾಟ್ ನೃತ್ಯದಲ್ಲಿ ಜಿಂಕೆಯ ಕೊಂಬುಗಳನ್ನೇ ಬಳಸುವುದಕ್ಕೆ ನಿರ್ದಿಷ್ಟ ಕಾರಣವನ್ನು ನೀಡುತ್ತಾರೆ. ದೇವರ ಸೇವಾರ್ಥ ನರ್ತಿಸುವ ಈ ನೃತ್ಯದಲ್ಲಿ ಶುದ್ಧ ಶಾಕಾಹಾರಿ ಪ್ರಾಣಿಯಾದ ಜಿಂಕೆಯ ಕೊಂಬನ್ನು ಬಳಸಬೇಕೆನ್ನುವ ನಿಯಮವಿದ್ದು, ಅದನ್ನೇ ಬಳಸಲಾಗುತ್ತದೆ ಎಂಬ ಪ್ರತೀತಿ ಇದೆ.[9]

ಕೊಂಬಾಟ್ ನೃತ್ಯದ ಮತ್ತೊಂದು ಅಂಗವನ್ನು 'ಕತ್ತಿಯಾಟ್' ಎಂದು ಕರೆಯಲಾಗುತ್ತದೆ. ಇಲ್ಲಿ ಕಲಾವಿದರು ಸಾಂಕೇತಿಕವಾಗಿ ಮರದ ಕತ್ತಿಯನ್ನು ಕೈಯಲ್ಲಿ ಹಿಡಿದು ವಿವಿಧ ಭಂಗಿಗಳಲ್ಲಿ ನರ್ತಿಸುತ್ತಾರೆ. ಕೆಲವು ಕಡೆ ಒಡಿಕತ್ತಿ (ಬಿಚ್ಚುಗತ್ತಿ)ಯನ್ನು ಬಳಸಿ ನರ್ತಿಸುವುದು ವಾಡಿಕೆಯಲ್ಲಿದೆ. ಸುಮಾರು ಹದಿಮೂರು ರೀತಿಯ ವಿನ್ಯಾಸಗಳನ್ನು ಕತ್ತಿಯಾಟ್ ಒಳಗೊಂಡಿದೆ. ಇದು

ಕೊಡವ ಜನಪದರ ಶೌರ್ಯ ಹಾಗೂ ವೀರಪರಂಪರೆಯನ್ನು ಪ್ರತಿನಿಧಿಸುತ್ತದೆ. ಕತ್ತಿಯಾಟ್‌ನ ನಂತರ ಕೊಂಬಾಟ್ ನೃತ್ಯದಲ್ಲಿ 'ಸೂತ್ರ ಪುಡಿಪೊ' ಎಂಬ ಸಂಪ್ರದಾಯವಿದೆ. ಇಲ್ಲಿ ನಾಲ್ವರು ನೃತ್ಯಗಾರರು ಸಾಲಾಗಿ ನಿಂತು ಬಲಗೈಯನ್ನು ಬಾಯಿಯ ಮುಂದೆ ಹಿಡಿದು ಶಂಖ ಊದುವಂತೆ ಶಬ್ದ ಹೊರಡಿಸುತ್ತಾರೆ. ನಂತರ ಮುಂದಿನ ನೃತ್ಯವನ್ನು ಪ್ರಾರಂಭಿಸುತ್ತಾರೆ.

ಇ) ಬಿಲ್ಲಾಟ್ :-

ಬಿಲ್ಲಾಟ್ ನೃತ್ಯ ಸಮುಚ್ಚಯವಾದ ಕೊಂಬಾಟ್‌ನ ಒಂದು ಅಂಗ. ಹೆಸರೇ ಸೂಚಿಸುವಂತೆ ಈ ಕುಣಿತದಲ್ಲಿ ಬಿಲ್ಲುಗಳ ಬಳಕೆಯಿದೆ. ಸಾಂಕೇತಿಕವಾಗಿ ತಯಾರಿಸಲಾದ ಮರದ ಬಿಲ್ಲುಗಳನ್ನು ಹಿಡಿದು ಹಿಮ್ಮೇಳದ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸಗಳಲ್ಲಿ ಬೀಸುತ್ತಾ ನರ್ತಿಸುತ್ತಾರೆ. ಇದು ಬೇಟೆಯ ಅಣಕು ಪ್ರದರ್ಶನದಂತೆ ಕಾಣುತ್ತದೆ.

ಈ) ಪೀಲಿಯಾಟ್ :-

ಕೊಡವ ಭಾಷೆಯಲ್ಲಿ 'ಪೀಲಿ' ಎಂದರೆ ನವಿಲು ಗರಿಗಳ ಕಂತೆ ಎಂದರ್ಥ. ಬೆಳ್ಳಿಯ ಅಥವಾ ಮರದ ಹಿಡಿಕೆಯಿರುವ ನವಿಲುಗರಿಗಳ ಕಂತೆಯ ಚಾಮರವನ್ನು ಕೈಯಲ್ಲಿ ಹಿಡಿದು ಮೇಲೆ, ಕೆಳಗೆ, ಬಲಭಾಗ, ಎಡಭಾಗ, ಬೆನ್ನಿನ ಮೇಲ್ಭಾಗ ಹೀಗೆ ವಿವಿಧ ಭಂಗಿಗಳಲ್ಲಿ ಬೀಸುತ್ತಾ ನರ್ತಿಸುತ್ತಾರೆ. ಇದು ದೇವರ ಸೇವಾರ್ಥ ನರ್ತಿಸುವ ನೃತ್ಯವಾಗಿದ್ದು, ಕೊಡಗಿನ ಬೇರೆ ಬೇರೆ ದೇವಸ್ಥಾನಗಳಲ್ಲಿ ವಿಭಿನ್ನ ರೀತಿಯ ಪೀಲಿಯಾಟ್‌ಗಳಿವೆ. ಊರಿನ ಉತ್ಸವಗಳಲ್ಲಿ ಒಕ್ಕ (ಮನೆತನ)ದಿಂದ ಒಬ್ಬ ವ್ಯಕ್ತಿಯಂತೆ ನೃತ್ಯದಲ್ಲಿ ಭಾಗವಹಿಸುತ್ತಾರೆ. ಈತ ಕಠಿಣ ವ್ರತ ನಿಯಮಗಳನ್ನು ಪಾಲಿಸುತ್ತಾ ಶುದ್ಧ ಮುದ್ರಿಕೆಯಲ್ಲಿರಬೇಕಾಗುತ್ತದೆ. ಮೇದ ಜನಾಂಗದ ವ್ಯಕ್ತಿ ಬಾರಿಸುವ ಪರೆಯ ಹಿಮ್ಮೇಳಕ್ಕೆ ತಕ್ಕಂತೆ ನೃತ್ಯಗಾರರು ಪೀಲಿಯನ್ನು ಹಿಡಿದು ಕಾಲನೆತ್ತಿ ಕುಣಿಯುತ್ತಾರೆ. ನೃತ್ಯದ ನಂತರ ಪೀಲಿಯನ್ನು ದೇವರಿಗೆ ಒಪ್ಪಿಸಲಾಗುತ್ತದೆ. ಕೊಳಗದಾಳು ಗ್ರಾಮದ ಭಗವತಿ (ಪೊವ್ವದಿ) ದೇವಸ್ಥಾನದಲ್ಲಿ ಉತ್ಸವದ ಕಟ್ಟು ಕಟ್ಟಳೆಗಳು ನಿಗಧಿಯಾದಂದಿನಿಂದ ಹಬ್ಬದ ಕೊನೆಯ ದಿನದವರೆಗೂ ಪೀಲಿಯಾಟನ್ನು ನರ್ತಿಸುತ್ತಾರೆ. ಈ ಅವಧಿಯಲ್ಲಿ ನರ್ತಿಸುವವರು ಕಠಿಣ

ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅವರು ಮನೆಯೊಳಗೆ ಮಲಗುವಂತಿಲ್ಲ, ಮುಟ್ಟಾದ ಹೆಣ್ಣುಮಗಳು ಮಾಡಿದ ಅಡುಗೆಯನ್ನು ಉಣ್ಣುವಂತಿಲ್ಲ. ಮಂಚದಲ್ಲಿ, ಹಾಸಿಗೆಯಲ್ಲಿ ಮಲಗುವಂತಿಲ್ಲ. ಮನೆಯ ಹೊರಭಾಗದ (ಕಯ್ಯಾಲೆ) ಪಡಸಾಲೆಯಲ್ಲಿ ಚಾಪೆಯ ಮೇಲೆ ನಿದ್ರಿಸಬೇಕಾಗುತ್ತದೆ. ಮದ್ಯಪಾನ, ಮಾಂಸಾಹಾರಗಳನ್ನು ವರ್ಜಿಸಬೇಕಾಗುತ್ತದೆ.

'ಪೀಲಿಯಾಟ್' ಆರಂಭವಾಗುವ ಮೊದಲ ದಿನದಂದು ಕಲಾವಿದರು ಮುಂಜಾನೆ ಎದ್ದು ದೇವಸ್ಥಾನಕ್ಕೆ ಬಂದು ಸೇರುತ್ತಾರೆ. ನೃತ್ಯಕ್ಕೆ ಹಿಮ್ಮೇಳ ಒದಗಿಸುವ ಮೇದ ಜನಾಂಗದ ವ್ಯಕ್ತಿಯು ಬರುತ್ತಾರೆ. ಎಲ್ಲರೂ ಸೇರಿ ದೇವರನ್ನು ಪ್ರಾರ್ಥಿಸಿ ಮೌನ ವ್ರತವನ್ನು ಧರಿಸುತ್ತಾರೆ. ದೇವರ ವಿಗ್ರಹವನ್ನು ಜಳಕ ಮಾಡಿಸುವ ನಿರ್ದಿಷ್ಟ ನದಿಯ ನಿರ್ದಿಷ್ಟ ಗುಂಡಿಗೆ ಸಾಲಾಗಿ ತೆರಳಿ ಸ್ನಾನ ಮಾಡುತ್ತಾರೆ. ನಂತರ ಎಲ್ಲರೂ ಬಿಳಿ ವರ್ಣದ ಪಂಚೆಯನ್ನು ಧರಿಸಿ ಸೊಂಟಕ್ಕೆ ಚೇಲೆಯನ್ನು ಸುತ್ತುತ್ತಾರೆ. ಸೊಂಟದ ಮೇಲ್ಭಾಗಕ್ಕೆ ಬಟ್ಟೆಯನ್ನು ಧರಿಸುವಂತಿಲ್ಲ. ಸ್ನಾನ ಮುಗಿಸಿ ದೇವಸ್ಥಾನಕ್ಕೆ ಮರಳುವಾಗ ಊ..... ಊ..... ಎಂದು ಮೆಲ್ಲನೆ ಶಬ್ದ ಮಾಡುತ್ತಾ ಬರುತ್ತಾರೆ. ಇವರು ಬರುವ ಸಂದರ್ಭದಲ್ಲಿ ಯಾರಾದರೂ ಅಡ್ಡ ಬಂದರೆ ಅವರು ಸರಿದು ದಾರಿ ಬಿಡಬೇಕಾಗುತ್ತದೆ.

ನೃತ್ಯವನ್ನು ಮುನ್ನಡೆಸುವವರನ್ನು 'ಮುಂಬಾಟ್‌ಕಾರ' ಎಂದು ಕರೆಯಲಾಗುತ್ತದೆ. ಈತ ಸಾಲಿನಲ್ಲಿ ಮುಂದೆ ಇರುತ್ತಾನೆ. ಈತನೊಂದಿಗೆ ನೃತ್ಯಗಾರರೆಲ್ಲಾ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿ ಮುಂಬಾಗಿಲಿನ ಮುಂದೆ ನಮಸ್ಕರಿಸುತ್ತಾ ನಿಲ್ಲುತ್ತಾರೆ. 'ಮುಂಬಾಟ್‌ಕಾರ' ಪೀಲಿಯನ್ನು ನೃತ್ಯಗಾರರೆಲ್ಲರಿಗೂ ನೀಡಿ ತಾನು ಒಂದನ್ನು ಎತ್ತಿಕೊಳ್ಳುತ್ತಾನೆ. ಎಲ್ಲರೂ ವೃತ್ತಾಕಾರವಾಗಿ ನಿಲ್ಲುತ್ತಾರೆ. ಅಷ್ಟರಲ್ಲಿ ಮೇದ 'ಬಗ್ಗ್' ಅಥವಾ 'ದೋಳ್' ಅನ್ನು ಬಾರಿಸುತ್ತಾನೆ. ದೋಳಿನ ನಾದಕ್ಕೆ ಅನುಗುಣವಾಗಿ ನೃತ್ಯಗಾರರು ಹೆಜ್ಜೆಹಾಕುತ್ತಾ ನಿಶ್ಯಬ್ಧವಾಗಿ ನರ್ತಿಸುತ್ತಾರೆ.

ಹಿಂದೆ ನೂರಾವೊಂದು ಸುತ್ತಿನಲ್ಲಿ ನೂರಾವೊಂದು ರೀತಿಯ ನೃತ್ಯವನ್ನು ನರ್ತಿಸುತ್ತಿದ್ದರಂತೆ. ಇತ್ತೀಚಿನ ದಿನಗಳಲ್ಲಿ ಅವುಗಳು ಮರೆಯಾಗಿವೆ. ಒಂದೊಂದು ಸುತ್ತಿಗೆ ಒಂದೊಂದು ರೀತಿಯ ನೃತ್ಯ ವೈವಿಧ್ಯವಿರುತ್ತದೆ.

ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ವ್ಯಕ್ತಿಯೊಬ್ಬ ಮಾಡುವ ಕೆಲಸಗಳ ವರ್ಣನೆಯ ರೀತಿ ಈ ನೃತ್ಯದಲ್ಲಿದೆ. ಮುಂಜಾನೆ ಎದ್ದು ಸೂರ್ಯ ದೇವನಿಗೆ ನಮಸ್ಕರಿಸುವುದು, ಗದ್ದೆಗೆ ಉಳಲು ಹೋಗುವುದು, ಉಳುವುದು, ಅಗೆಯುವುದು, ಬೀಜ ಬಿತ್ತನೆ ಮಾಡುವುದು, ನಾಟಿ ನೆಡುವುದು, ಬೆಳೆ ಕೊಯ್ಲು ಮಾಡುವುದು, ಹೊರೆ ಹೊರುವುದು, ಭತ್ತದ ತೆನೆಯನ್ನು ಬಡಿದು ಭತ್ತವನ್ನು ಬೇರ್ಪಡಿಸುವುದು, ಒಕ್ಕಲು ಮಾಡುವುದು, ಭತ್ತವನ್ನು ಗಾಳಿಗೆ ತೂರಿ ಶುದ್ಧಗೊಳಿಸುವುದು, ತುಳಿಯ (ಭತ್ತವನ್ನು ಶೇಖರಿಸಿಡಲು ಬಿದಿರಿನಿಂದ ಹೆಣೆಯಲ್ಪಟ್ಟ ಸಾಧನ)ಕ್ಕೆ ಭತ್ತವನ್ನು ತುಂಬುವುದು, ಭತ್ತವನ್ನು ಒನಕೆ ಮತ್ತು ರಾಟೆಯಲ್ಲಿ ಕುಟ್ಟಿ ಅಕ್ಕಿ ಮಾಡುವುದು, ಅಕ್ಕಿಯನ್ನು ಮೊರದಿಂದ ಕೇರಿ ಶುದ್ಧಗೊಳಿಸುವುದು, ಶುದ್ಧೀಕರಿಸಿದ ಅಕ್ಕಿಯಿಂದ ಅನ್ನ ಮಾಡಿ ದೇವರಿಗೆ ನೈವೇದ್ಯ ಅರ್ಪಿಸುವುದು, ತಾನೂ ಉಂಡು ದೇವರನ್ನು ಸ್ತುತಿಸಿ ನಿದ್ರಿಸುವುದು. ಹೀಗೆ ಬೀಜ ಬಿತ್ತನೆ, ನಾಟಿ ಕೆಲಸದಿಂದ ಹಿಡಿದು ಬೆಳೆ ಕೊಯ್ಲಿನವರೆಗೆ ಎಲ್ಲಾ ಕೆಲಸದ ಭಂಗಿಯನ್ನು ಒಂದೊಂದು ಸುತ್ತು ನರ್ತಿಸಿ ತೋರಿಸುತ್ತಾರೆ. ಅಷ್ಟರಲ್ಲಿ ಮೇದನ ಹಿಮ್ಮೇಳದ ಧಾಟಿ ಬದಲಾಗುತ್ತದೆ. ಅದಕ್ಕೆ ತಕ್ಕಂತೆ ನೃತ್ಯದ ಹೆಜ್ಜೆಯು ಬದಲಾಗುತ್ತದೆ. ಇದು ಮದುವೆಯಲ್ಲಿ ನರ್ತಿಸುವ ವಾಲಗತ್ತಾಟ್‌ನಂತೆ ಸಂತೋಷದ ನೃತ್ಯ. ನೋಡಲು ಬಹಳ ಸುಂದರ. ಈ ನೃತ್ಯದಲ್ಲಿ ನೃತ್ಯಗಾರರೆಲ್ಲಾ ವೃತ್ತದಿಂದ ಹೊರಬಂದು ಗುಂಪುಗೂಡಿ ನರ್ತಿಸುತ್ತಾರೆ. ಅದೇ ಸಮಯಕ್ಕೆ ತಿರೋಳಕಾರ (ದೇವರು ಮೈಮೇಲೆ ಬರುವವ)ನಿಗೆ ದೇವರ ಆವೇಶ ಬಂದು ಕಡತಲೆ, ಕೈಮರೆ (ಒಂದು ವಿಧದ ಖಡ್ಗ) ಹಿಡಿದು ಕುಣಿಯುತ್ತಾ ಬಂದು ನೃತ್ಯಗಾರರ ನಡುವೆ ಸೇರಿಕೊಳ್ಳುತ್ತಾನೆ. ಈ ಹಂತದಲ್ಲಿ ಪೀಲಿಯಾಟನ್ನು ನೋಡುವುದೇ ಉತ್ಸವದ ಸಾರ್ಥಕ್ಯ ಎನ್ನಲಾಗುತ್ತದೆ. ಕೆಲ ಹೊತ್ತಿನ ನೃತ್ಯದ ನಂತರ ನೃತ್ಯಗಾರರು ತಿರೋಳಕಾರರನ್ನು ಹಿಂಬಾಲಿಸುತ್ತಾ ದೇವಸ್ಥಾನದ ಪ್ರದಕ್ಷಿಣೆ ಮಾಡುತ್ತಾರೆ. ಪೀಲಿಯನ್ನು ಒಪ್ಪಿಸಿದ ನಂತರ ನೃತ್ಯಗಾರರೆಲ್ಲರ ಕೊರಳಿಗೆ ತಿರೋಳಕಾರ ಹೂವಿನ ಸಣ್ಣ ಮಾಲೆಯನ್ನು ಹಾಕಿ ಅನುವಾದ (ಆಶೀರ್ವಾದ) ನೀಡುತ್ತಾನೆ. ಇದಾದ ನಂತರ ನೃತ್ಯಗಾರರು, ತಮ್ಮ ವೇಷವನ್ನು ಬದಲಿಸಬಹುದು, ಪರಸ್ಪರ ಮಾತನಾಡಬಹುದು ಹಾಗೂ ಅನ್ನಾಹಾರಗಳನ್ನು ಸೇವಿಸಬಹುದು. ದೇವರ ದೊಡ್ಡ ಹಬ್ಬ (ಪಟ್ಟಣಿ ಮತ್ತು

ದೇವರ ಜಳಕ) ದರಿದು ಮಾತ್ರ ಜನರು ನೋಡಲು ಅನುಕೂಲವಾಗುವಂತೆ ಬೆಳಗ್ಗೆ ೧೦ ಗಂಟೆಯಿಂದ ಈ ನೃತ್ಯ ಪ್ರಾರಂಭವಾಗುತ್ತದೆ.[೫] ಉಳಿದ ದಿನಗಳಲ್ಲಿ ನಸುಕಿನಲ್ಲಿಯೇ ನೃತ್ಯದ ತಾಲೀಮು ನಡೆಯುತ್ತದೆ.

ಕೊಡಗಿನ ಕೆಲವೆಡೆಗಳಲ್ಲಿ ಪೀಲಿಯಾಟ್ ದೇವರ ಸೇವಾರ್ಥ ಸ್ವತಂತ್ರ ನೃತ್ಯವಾಗಿ ನರ್ತಿಸಲ್ಪಟ್ಟರೆ; ಇನ್ನು ಕೆಲವೆಡೆಗಳಲ್ಲಿ ಕೊಂಬಾಟ್ ನೃತ್ಯದ ಅಂಗವಾಗಿ ನರ್ತಿಸಲ್ಪಡುತ್ತದೆ. ಕೊಂಬಾಟ್ ನೃತ್ಯದ ಒಂದು ಅಂಗವಾಗಿ ನರ್ತಿಸಲ್ಪಡುವ ಪೀಲಿಯಾಟ್‌ನಲ್ಲಿ ನರ್ತಿಸುವವರು ದೇವಾಲಯದ ಪ್ರಾಕಾರದ ಸುತ್ತಲೂ ಕುಪ್ಪಳಿಸುತ್ತಾ, ಕೇಕೆ ಹಾಕುತ್ತಾ, ಒನಪು ಒಯ್ಯಾರಗಳನ್ನು ಪ್ರದರ್ಶಿಸುತ್ತಾ ಅತ್ಯಾಕರ್ಷಕವಾಗಿ ಕುಣಿಯುತ್ತಾರೆ. ಸುಮಾರು ಹದಿನಾರು ವಿಧಗಳಲ್ಲಿ ನರ್ತಿಸುವ ಈ ನೃತ್ಯದ ಭಂಗಿಗಳನ್ನು ಪೀಲಿ ಬೀಜೊ, ನೀರ್‌ಕೂಟ್‌ವ, ಜೋಮಾಲೆ ಪತ್ತಾಕ್, ತಪ್ಪಾಳೆ ಕೊಟ್ಟುವ, ಕೂಡಿಯಾಟ್ ಎನ್ನುವ ಹೆಸರುಗಳಿಂದ ಕರೆಯಲಾಗುತ್ತದೆ.

ಗಂಡು ಹೆಣ್ಣಿನ ಸಮ್ಮಿಲನವಾಗದೆ ಕೇವಲ ಕಣ್ಣಿನ ನೋಟದಿಂದಲೇ ಗರ್ಭ ಧರಿಸುವ ಪಕ್ಷಿಯ ಗರಿಯಿಂದಲೇ ದೇವರಿಗೆ ಸೇವೆಯಾಗಬೇಕು. ಅಂತಹ ಏಕೈಕ ಪಕ್ಷಿ ನವಿಲು. ಹಾಗಾಗಿ ಅದರ ಗರಿಗಳನ್ನು ಮಾತ್ರ ಪೀಲಿಯಾಟ್‌ನಲ್ಲಿ ಬಳಸಲಾಗುತ್ತದೆ ಎಂಬ ನಂಬಿಕೆ ಇದೆ.[೬]

ಇಷ್ಟೇ ಅಲ್ಲದೆ ನೃತ್ಯ ಸಮುಚ್ಚಯವಾಗಿರುವ ಕೊಂಬಾಟ್‌ನಲ್ಲಿ 'ತುಳ್ಳಾಟ್' ಎಂಬ ನೃತ್ಯ ವೈವಿಧ್ಯವಿದೆ. ಇಲ್ಲಿ ಕಲಾವಿದರು ಆರು ವಿಭಿನ್ನ ಭಂಗಿಗಳಲ್ಲಿ ತಮ್ಮ ತೋಳುಗಳನ್ನು ಬೀಸುತ್ತಾ ನರ್ತಿಸುತ್ತಾರೆ. ಕಲಾವಿದರ ಪ್ರಕಾರ ಇದು ಭಸ್ಮಾಸುರ ಮೋಹಿನಿಯ ನೃತ್ಯವಾಗಿದೆ. ನೃತ್ಯದ ಕೊನೆಯ ಭಾಗವೆಂಬಂತೆ 'ಎತ್ತ್‌ಪೋರ್ ಆಟ್'ನ್ನು ನರ್ತಿಸಲಾಗುತ್ತದೆ. ಇಲ್ಲಿ ನರ್ತಿಸುವವರು ಇಬ್ಬಿಬ್ಬರಾಗಿ ಕೈ ಕೈ ಹಿಡಿದುಕೊಂಡು ವಿವಿಧ ಶಬ್ದಗಳನ್ನು ಹೊರಡಿಸುತ್ತಾ ದನಗಳನ್ನು ಸಾಲಿನಲ್ಲಿ ಅಟ್ಟಿಕೊಂಡು ಹೋಗುವ ರೀತಿಯನ್ನು ಅಣಕಿಸುತ್ತಾರೆ.

ಹೀಗೆ ಪೀಲಿಯಾಟ್, ಕತ್ತಿಯಾಟ್, ಬಿಲ್ಲಾಟ್, ತುಳ್ಳಾಟ್, ಕೊಂಬಾಟ್, ಎತ್ತ್‌ಪೋರ್ ಆಟ್‌ಗಳ ಸಮುಚ್ಚಯವಾಗಿರುವ ಕೊಂಬಾಟ್ ಜನಪದರ ದೈವ ಅಯ್ಯಪ್ಪನ ಬೇಟೆ ಸಂಸ್ಕೃತಿಯನ್ನು ಪ್ರದರ್ಶಿಸುತ್ತದೆ.[೭] ಬೇಟೆಯ

ಆಯುಧವಾಗಿ ನೃತ್ಯದಲ್ಲಿ ಬಳಸಲ್ಪಡುವ ಕೊಂಬು ಒಂದೆಡೆ ಬೇಟೆಯ ಆಯುಧವಾಗಿಯೂ, ಮತ್ತೊಂದೆಡೆ ಕೃಷಿ ಸಂಸ್ಕೃತಿಯಲ್ಲಿ ಪ್ರಧಾನ ಪಾತ್ರ ವಹಿಸುವ ಎತ್ತಿನ ಸಂಕೇತವಾಗಿಯೂ ಬಳಸಲ್ಪಡುತ್ತದೆ. ಹೀಗೆ ದೈವೀ ಆಚರಣೆಯ ಹಿನ್ನಲೆಯಲ್ಲಿ ನರ್ತಿಸಲ್ಪಡುವ ಕೊಂಬಾಟ್ ತನ್ನ ಜನಪದೀಯ ಮೌಲ್ಯವನ್ನು ಇಂದಿಗೂ ಉಳಿಸಿಕೊಂಡಿದೆ.

ಉ) ಕೊಡಿಯಾಟ್ :-

ವಾದ್ಯ ಪ್ರಧಾನ ನೃತ್ಯಗಳಲ್ಲಿ ಕೊಡಿಆಟ್ ಒಂದು. ಭಗವತಿ ಹಾಗೂ ಭದ್ರಕಾಳಿ ದೇವಿಯ ಹಬ್ಬದ ಸಂದರ್ಭದಲ್ಲಿ ಆರಾಧನೆಯ ಅಂಗವಾಗಿ ನಡೆಯುವ ನೃತ್ಯ ಇದಾಗಿದೆ. ಕೊಡವ ಭಾಷೆಯಲ್ಲಿ 'ಕೊಡಿ' ಎಂಬ ಪದಕ್ಕೆ 'ಬಾವುಟ', 'ಚಿಗುರು', ಎಂಬ ಅರ್ಥವಿದೆ. ಉದ್ದನೆಯ ಬಿದಿರಿನ ಬೆತ್ತಕ್ಕೆ ಬಿದಿರಿನ ಕಡ್ಡಿಗಳಿಂದ ತ್ರಿಕೋನಾಕ್ಕಾರದ ಪಟ್ಟಿಯನ್ನು ಮಾಡಿ ಅದಕ್ಕೆ ತ್ರಿಕೋನಾಕಾರದ ಕೆಂಪು ಬಟ್ಟೆಯನ್ನು ಕಟ್ಟಲಾಗುತ್ತದೆ. ಇದನ್ನು 'ಕೊಡಿ' ಎಂದು ಕರೆಯುತ್ತಾರೆ. ಒಂದು ಕೈಯಲ್ಲಿ ಕೊಡಿಯನ್ನು ಹಿಡಿದುಕೊಂಡು ಮತ್ತೊಂದು ಕೈಯನ್ನು ವಾದ್ಯಕ್ಕೆ ತಕ್ಕಂತೆ ಬೀಸುತ್ತಾ ವಿವಿಧ ಭಂಗಿಗಳಲ್ಲಿ ಕುಣಿಯುವ ನೃತ್ಯವೇ 'ಕೊಡಿಯಾಟ್'. ಮೇದ ಜನಾಂಗಕ್ಕೆ ಸೇರಿದ ವ್ಯಕ್ತಿ ನುಡಿಸುವ 'ಪರೆ' ವಾದ್ಯ ಇಲ್ಲಿ ಹಿಮ್ಮೇಳವಾಗಿದೆ.

ದೈವೀ ಆರಾಧನೆಗೆ ಸೀಮಿತವಾಗಿರುವ ಈ ನೃತ್ಯ ವಿಶಿಷ್ಟವಾಗಿದ್ದು; ಉತ್ತರ ಕೊಡಗಿನ ಕೆಲವೇ ದೇವಸ್ಥಾನಗಳಲ್ಲಿ ಉತ್ಸವದಂದು ಮಾತ್ರ ನರ್ತಿಸಲ್ಪಡುತ್ತದೆ. ಅದರಲ್ಲೂ ಪ್ರಮುಖವಾಗಿ ಮಡಿಕೇರಿ ಸಮೀಪದ ಇಬ್ನಿವಳವಾಡಿಯಲ್ಲಿ ನಡೆಯುವ ಭದ್ರಕಾಳಿ ದೇವತೆಯರ ಉತ್ಸವದಲ್ಲಿ ವರ್ಷಂಪ್ರತೀ ನಡೆಯುತ್ತದೆ. ಊರಿನಲ್ಲಿರುವ ಪ್ರತೀ ಕೊಡವ ವಕ್ಕ (ಮನೆತನ)ದಿಂದ ಪ್ರೌಢ ವಯಸ್ಸಿಗೆ ಬಂದ ಪುರುಷನೊಬ್ಬ ಕುಣಿತದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಆಯಾ ಮನೆತನದ ಹಿರಿಯರು ತಕ್ಕ ಮುಖ್ಯಸ್ಥರು ಆಯ್ಕೆ ಮಾಡಿದ ಗಂಡಸು 'ಕೊಡಿ' ತೆಗೆಯುತ್ತಾನೆ. ಪ್ರತೀ ವಕ್ಕದ ಐನ್‌ಮನೆ (ಮೂಲಮನೆ)ಯಿಂದ ಹೊರಟ 'ಕೊಡಿ' ಮಧ್ಯಾಹ್ನ ಒಂದು ಗಂಟೆಯ ಒಳಗೆ ದೇವಸ್ಥಾನಕ್ಕೆ ತಲುಪಿರಬೇಕು. ಕೊಡಿಯೊಂದಿಗೆ

ಮೇದ ತನ್ನ ಪರೆ (ಡೋಲು) ಅನ್ನು ಬಾರಿಸುತ್ತಾ ಸಾಗುವನು. 'ಕೊಡಿ' ತೆಗೆದುಕೊಂಡವನು ದಾರಿಯಲ್ಲಿ ಆಗಾಗ ಜೋರಾಗಿ ಕೂಗುತ್ತಾ ಸಾಗುತ್ತಾನೆ. ಹೀಗೆ ಸಾಗುವಾಗ ಯಾರೂ ಅಡ್ಡ ಸಿಗಬಾರದು. ಅಂತವರಿಗೆ ಅನಿಷ್ಟ ಸಂಭವಿಸುತ್ತದೆ ಎನ್ನುವ ನಂಬಿಕೆ ಅಲ್ಲಿನವರಲ್ಲಿದೆ.

ಪ್ರತೀ ವಕ್ಕದಿಂದ ಹೊರಟ 'ಕೊಡಿ' ತೆಗೆದುಕೊಂಡವರು ದೇವಸ್ಥಾನದ ಸಮೀಪವಿರುವ ಒಂದು ನಿರ್ದಿಷ್ಟ ಸ್ಥಳದಲ್ಲಿ ಜೊತೆ ಸೇರಿ ದೇವಸ್ಥಾನದ ಮುಂಭಾಗದ ಗದ್ದೆಯಲ್ಲಿರುವ ದೇವರ "ಕಲ್ಲ್ ಬೋಟಿ" (ಕಲ್ಲಿನ ಕಂಬ)ಯ ಸುತ್ತಲೂ ಮೂರು ಸುತ್ತು ಕುಣಿದು ಅನಂತರ ದೇವಸ್ಥಾನದ ಒಳಭಾಗದ 'ಕಳ' (ಅಂಗಳ, ಪ್ರಾಂಗಣ)ದಲ್ಲಿಯೂ ಕುಣಿಯುತ್ತಾರೆ. ಈ ಸಂದರ್ಭದಲ್ಲಿ 'ತಿರೋಳಕಾರ (ಮೈಮೇಲೆ ಆವೇಶ ಬರುವವನು) ಕಲಾವಿದರ ನಡುವೆ ಕುಣಿತಕ್ಕೆ ಸೇರಿಕೊಳ್ಳುತ್ತಾನೆ. ನಂತರ ಕೊಡಿಯನ್ನು ದೇವಸ್ಥಾನಕ್ಕೆ ಒಪ್ಪಿಸಲಾಗುತ್ತದೆ.

ಕೊಡಿಯಾಟ್ ಈ ಜನಪದ ನೃತ್ಯದ ಗತ್ತು ಮತ್ತು ಭಂಗಿ ಇತರ ಜನಪದ ನೃತ್ಯಗಳಿಗಿಂತ ಭಿನ್ನವಾಗಿರುತ್ತದೆ. ಇಲ್ಲಿ ಭಾಗವಹಿಸುವ ಕಲಾವಿದರು ಸಾಂಪ್ರದಾಯಿಕ ಉಡುಪಾದ ಬಿಳಿವರ್ಣದ ಕುಪ್ಯಚೇಲೆ (ದಟ್ಟಿ ಕುಪ್ಪಸ), ತಲೆಗೆ 'ಮಂಡೆತುಣಿ' (ಪೇಟ)ಯನ್ನು ಧರಿಸುವರು. 'ತಿರೋಳಕಾರ' ಕೆಂಪು ಬಣ್ಣದ ಕುಪ್ಯವನ್ನು ಧರಿಸಿರುವನು. ಈತ ಉತ್ಸವ ನಡೆಯಲು ಹದಿನೈದು ದಿನಗಳಿಗೆ ಮುಂಚಿತವಾಗಿಯೇ ಪ್ರಾಣಿವಧೆಯಂತಹ ಯಾವುದೇ ಹಿಂಸಾ ಕಾರ್ಯಗಳಲ್ಲಿ ಭಾಗವಹಿಸಬಾರದು. ಉತ್ಸವದ ಕಟ್ಟಳೆಯ ನಂತರ ಊರಿನಲ್ಲಿ ಪ್ರಾಣಿವಧೆ ನಡೆಯಬಾರದು, ಹಾಲು ಬರುವ ಮರಗಳನ್ನು ಕಡಿಯಬಾರದು. ಉತ್ಸವದ ಕುಣಿತದಲ್ಲಿ ಭಾಗವಹಿಸುವವರು ಮದ್ಯ, ಮಾಂಸವನ್ನು ಸೇವಿಸದೆ 'ಮಡಿ'ಯನ್ನು ಕಾಯ್ದುಕೊಳ್ಳಬೇಕು. ಹಬ್ಬದ ಕೊನೆಯ ದಿನದಂದು ಇವರು 'ಪಟ್ಟಣಿ' (ಅಕ್ಕಿಯಿಂದ ಮಾಡಿದ ಯಾವುದೇ ಪದಾರ್ಥಗಳನ್ನು ಸೇವಿಸದೇ ಇರುವುದು) ಮುಂತಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ಈ ಹಬ್ಬಕ್ಕೆ ಸಂಬಂಧಿಸಿದಂತೆ ಕಥೆಯೊಂದು ಚಾಲ್ತಿಯಲ್ಲಿದೆ. ಉತ್ತರಕೊಡಗಿನ ಈ ಪ್ರದೇಶದಲ್ಲಿ ಏಳು ಜನ ಸಹೋದರಿಯರೊಂದಿಗೆ

ವಲಸೆ ಬಂದ ಅಣ್ಣ ಕಾಟಕೇರಿ ಎಂಬ ಸ್ಥಳದಲ್ಲಿ ನೆಲೆ ನಿಲ್ಲುತ್ತಾನೆ. ಅವನ ತಂಗಿಯರು ಭದ್ರಕಾಳಿ ಎಂಬ ಹೆಸರಿನಲ್ಲಿ ಏಳು ಬೇರೆ ಬೇರೆ ಕಡೆಗಳಲ್ಲಿ ನೆಲೆ ನಿಲ್ಲುತ್ತಾರೆ. ಇವರಿಗೆ ಎರಡು ವರ್ಷಗಳಿಗೊಮ್ಮೆ 'ನಮ್ಮೆ' (ಉತ್ಸವ) ವನ್ನು ಆಚರಿಸಲಾಗುತ್ತದೆ. ಆದರೆ ಇಬ್ನಿವಳವಾಡಿ ಎಂಬ ಸ್ಥಳದಲ್ಲಿ ನೆಲೆ ನಿಂತ ಭದ್ರಕಾಳಿಗೆ ಪ್ರತೀ ವರ್ಷ ಉತ್ಸವ ನಡೆಯುತ್ತದೆ. ಈ ಊರಿನ ಜನರಿಗೆ ಯಾವುದೋ ಕಾರಣಕ್ಕಾಗಿ ಭಿನ್ನಾಭಿಪ್ರಾಯ ಉಂಟಾಗಿ ಊರಿನೊಳಗೆ ವಳವಾಡಿ ಎಂಬ ಮತ್ತೊಂದು ಭಾಗದಲ್ಲಿ ಇದೇ ಭದ್ರಕಾಳಿಗೆ ಮತ್ತೊಂದು ದೇವಸ್ಥಾನವನ್ನು ಕಟ್ಟಿ ಹಬ್ಬವನ್ನು ಆಚರಿಸಲು ಆರಂಭಿಸುತ್ತಾರೆ. ಕಾಲಕ್ರಮೇಣ ದೇವತೆಯ ಪೂಜಾ ವಿಧಾನಗಳಲ್ಲಿ ವ್ಯತ್ಯಾಸ ಆದ ಕಾರಣ ಇವೆರಡೂ ದೇವಸ್ಥಾನಗಳಿಗೆ ಸೇರಿದ ಜನರು ಒಟ್ಟಾಗಿಯೇ ಉತ್ಸವವನ್ನು ಆಚರಿಸಬೇಕೆಂದಾಗುತ್ತದೆ. ಇದರಿಂದಾಗಿ ಎಲ್ಲರೂ ಸೇರಿ ಒಂದೊಂದು ವರ್ಷ ಒಂದೊಂದು ದೇವಸ್ಥಾನದಲ್ಲಿ ಉತ್ಸವವನ್ನು ಆಚರಿಸಲಾರಂಭಿಸುತ್ತಾರೆ. ಈ ಕಾರಣದಿಂದ ಉಳಿದ ಭದ್ರಕಾಳಿ ದೇವ ನೆಲೆಗಳಲ್ಲಿ ಎರಡು ವರ್ಷಗಳಿಗೊಮ್ಮೆ ಉತ್ಸವ ನಡೆದರೆ ಇಬ್ನಿವಳವಾಡಿಯಲ್ಲಿ ಪ್ರತೀ ವರ್ಷವೂ ನಡೆಯುತ್ತದೆ.

ಊ) ಪರೆಯಕಳಿ :-

ಪರೆಯಕಳಿ ಅಥವಾ ಪಡೆಕಳಿ ಕೊಡವ ಜನಪದರ ಯುದ್ಧ ನೃತ್ಯವಾಗಿದೆ. ಕೊಡವ ಭಾಷೆಯಲ್ಲಿ 'ಪಡೆ'ಎಂದರೆ ಯುದ್ಧ ಎಂದರ್ಥ. ಇಲ್ಲಿ ಸಮ ಬಲರ ಕಾದಾಟದ ಪ್ರದರ್ಶನವಿರುವುದರಿಂದ ಯುದ್ಧ – ನೃತ್ಯ ಎನ್ನಲಾಗುತ್ತದೆ. ಇಲ್ಲಿಯೂ ಮೇದ ಜನಾಂಗಕ್ಕೆ ಸೇರಿದ ವ್ಯಕ್ತಿ ಬಾರಿಸುವ ಪರೆ ಎಂಬ ವಾದ್ಯದ ಹಿಮ್ಮೇಳವಿದೆ. ಹಾಗಾಗಿ ಪರೆಯ ನಾದಕ್ಕೆ ಆಡುವ ಕಳಿ (ಆಟ, ಕುಣಿತ, ನೃತ್ಯ)ಯೇ ಪರೆಯಕಳಿ ಎಂದಾಗಿರಬಹುದು.

ಹುತ್ತರಿ ಹಬ್ಬದ ಸಂದರ್ಭದಲ್ಲಿ ನಡೆಯುವ ಕೋಲಾಟ್‌ನ ನಂತರ 'ಪರೆಯಕಳಿ'ಯನ್ನು ಆಡಲಾಗುತ್ತದೆ. ಸಮಬಲರಾದ ಇಬ್ಬಿಬ್ಬರು ವ್ಯಕ್ತಿಗಳು ಇಲ್ಲಿ ಪಾಲ್ಗೊಳ್ಳುತ್ತಾರೆ. ಸಾಂಪ್ರದಾಯಿಕ ಕುಪ್ಯಚೇಲೆಯನ್ನು ಧರಿಸಿ ಬಲಗೈಯಲ್ಲಿ ಉದ್ದನೆಯ ಬೆತ್ತದ ಪರೆಕೋಲು, ಎಡಗೈಯಲ್ಲಿ ಬೆತ್ತದ 'ತಟ್ಟೆ' (ಗುರಾಣಿ)

ಯನ್ನು ಹಿಡಿದು ಪರಸ್ಪರ ಕಾದಾಡುವಂತೆ ನರ್ತಿಸುತ್ತಾರೆ. ಸಂದರ್ಭ ನೋಡಿ ಎದುರಾಳಿಯ ಕಾಲಿಗೆ ಪರೆಕೋಲಿನ ಹೊಡೆತ ಬೀಳುತ್ತದೆ.

ಆರಂಭದಲ್ಲಿ "ನಾ ಬಾಳ್ ನೀ ಬಾಳ್

ನಾಡ ಕೂಡ ಬಪ್ಪ ಚಂಜಾದಿ ಬಾಳ್"

"ನಾನು ಬಾಳುವಂತಾಗಲಿ, ನೀನು ಬಾಳುವಂತಾಗಲಿ, ನನ್ನೊಡನೆ ಬರುವ ನನ್ನ ಸ್ನೇಹಿತನೂ ಬಾಳಲಿ" ಎಂದು ಹಾಡಿ ಕುಣಿಯುತ್ತಾ ಕೋಲನ್ನು ನೆಲಕ್ಕೆ ಹೊಡೆಯುತ್ತಾರೆ.

ಕೆಲವೆಡೆಗಳಲ್ಲಿ 'ಕೊಂಬ್ ಕೊಟ್ಟ್ ವಾಲಗ'ದ ಹಿಮ್ಮೇಳವಿರುತ್ತದೆ. ವಾದ್ಯದ ತಾಳಕ್ಕೆ ತಕ್ಕಂತೆ ಹಾರಿ ಹಾರಿ ಕುಣಿಯುತ್ತಾ, ಬಗ್ಗಿ ಕುಣಿಯುತ್ತಾ, ಎದುರಾಳಿಯ ಸಮೀಪಕ್ಕೆ ಬರುತ್ತಾ ಆತನ ಕಾಲಿಗೆ ಪ್ರತಿಸ್ಪರ್ಧಿಯು ಸಮಯ ಸಾಧಿಸಿ ಚಾಣಾಕ್ಷತೆಯಿಂದ ಹೊಡೆಯುತ್ತಾನೆ. ಹೊಡೆತವನ್ನು ತಟ್ಟಿಯಿಂದ ತಡೆಯಲಾಗುತ್ತದೆ. ಕಾಲಿಗೆ ತಾಗಿದರೆ ರಕ್ತ ಚಿಮ್ಮುತ್ತದೆ. ಇಲ್ಲಿ ಮೊಣಕಾಲಿನ ಕೆಳಗೆ ಮಾತ್ರ ಹೊಡೆಯಬೇಕೆಂಬ ನಿಯಮವಿದೆ. ಇದೊಂದು ರೀತಿಯ ಸಮರಾಭ್ಯಾಸದಂತೆ ಕಾಣುತ್ತದೆ. ಹೀಗೆ ವೀರಾವೇಶದಿಂದ ಕುಣಿಯುತ್ತಾ, ಎದುರಾಳಿಯನ್ನು ಸಮಯ ಸಾಧಿಸಿ ಹೊಡೆಯುತ್ತಾ, ಹೊಡೆತ ತಪ್ಪಿಸುತ್ತಾ ಸಾಗುವ ಈ ನೃತ್ಯ ಕೊನೆಗೆ ಎದುರಾಳಿಗಳಿಬ್ಬರು ಕೋಲು ಮತ್ತು ಕಡ್ಡಿಯನ್ನು ಹಿಡಿದುಕೊಂಡು ಪರಸ್ಪರ ಆಲಂಗಿಸಿಕೊಂಡು ಕುಣಿಯುವ ಮೂಲಕ ಮುಕ್ತಾಯವಾಗುತ್ತದೆ. ತಟ್ಟಿಯ ಬದಲಿಗೆ ಎರಡು ಕೈಯಲ್ಲಿ ಪರೆಕೋಲನ್ನು ಹಿಡಿದು ನರ್ತಿಸುವ ಪರಿಪಾಟವೂ ಕೊಡಗಿನ ಕೆಲವೆಡೆಗಳಲ್ಲಿ ಇದೆ.

ಪೂರ್ವದಲ್ಲಿ ಹುತ್ತರಿ ಹಬ್ಬದ ಸಂದರ್ಭದಲ್ಲಿ ನಡೆಯುತ್ತಿದ್ದ 'ನಾಡ್ ಕೋಲ್'ನಲ್ಲಿ ಬೇರೆ ನಾಡಿನವರು ಬಂದು ನರ್ತಿಸುವ ಪರಿಪಾಟವಿತ್ತು. ಅಂತವರು ಉತ್ತಮ ನೃತ್ಯಗಾರರು, ಪರೆಯಕಳಿ ಶೂರರು ಆಗಿರುತ್ತಿದ್ದರು. ಮಂದ್‌ನಲ್ಲಿ ಕೋಲಾಟ್ ಮುಗಿದ ನಂತರ ಆಯಾ ನಾಡಿನ ಪರೆಯಕಳಿ ಶೂರರು 'ಮಂದ್'ಗೆ ಇಳಿಯುವರು. ಕೈಯಲ್ಲಿ ಪರೆಕೋಲನ್ನು ಹಿಡಿದು "ನಾ ಬಾಳ್, ನೀ ಬಾಳ್, ನಾಡ ಕೂಡೆ ಬಪ್ಪವನು ಬಾಳ್, ನಾಡ ತಲೆಬೆಂದು ಧೀರ ಶೂರಂಗ ಬಾರಿರಾ" ಎಂದು ಆಹ್ವಾನಿಸುತ್ತಿದ್ದರು. "ಕೊಟ್ಟ್‌ರ ಮೇದ"

ಎಂದು ಮೇದನಿಗೆ ಪರೆ ಬಾರಿಸಲು ನಿರ್ದೇಶಿಸಿ ಕೋಲು ಬೀಸುತ್ತಿದ್ದರು. ಅಷ್ಟರಲ್ಲಿ ಮತ್ತೊಬ್ಬ ಸಮರ್ಥ ಪರೆಯಕಳಿ ಶೂರ ಪರೆಕೋಲು ಸಹಿತ ಮಂದ್‌ಗೆ ಇಳಿದು, ಮೈಕೊಡವಿ, ಮೀಸೆ ತಿರುವಿ "ನಾ ಬಾಳ್, ಬಂದ ಬೆಂದು ಬಾಳ್, ನಂಗೆಲ್ಲಾ ಬಾಳನಾ" ಎಂದು ಕೋಲು ಬೀಸುತ್ತಾನೆ. ಪರೆಯ ಹೊಡೆತಕ್ಕೆ ಸರಿಯಾಗಿ ಇಬ್ಬರೂ ಹೊಡೆದಾಡುತ್ತಾರೆ. ಇಬ್ಬರೂ ಸಮಬಲರಾಗಿದ್ದು, ಸುಲಭದಲ್ಲಿ ಯಾರೂ ಹೊಡೆತವನ್ನು ಪಡೆಯುವುದಿಲ್ಲ. ಪ್ರಮಾದಗಳೇನಾದರೂ ಸಂಭವಿಸಿದರೆ ಇಬ್ಬರಿಗೂ ತೀರ್ಪುಗಾರರು ಇರುತ್ತಿದ್ದರು. ಮೊಣಕಾಲಿನ ಕೆಳಭಾಗವನ್ನು ಬಿಟ್ಟು ದೇಹದ ಉಳಿದ ಭಾಗಗಳಿಗೆ ಹೊಡೆದದ್ದೇ ಆದರೆ ಲಕ್ಷಣ ಆತನನ್ನು ನಿಲ್ಲಿಸಿ ರಟ್ಟೆ ಹಿಡಿದು ದೇಶತಕ್ಕ, ನಾಡ್‌ತಕ್ಕ.(ಮುಖ್ಯಸ್ಥ)ರ ಬಳಿಗೆ ಕರೆದೊಯ್ಯುತ್ತಿದ್ದರು. ಅವರು ವಿಚಾರಣೆ ನಡೆಸಿ ತಪ್ಪಿತಸ್ಥನಿಂದ ತಪ್ಪು ಪಣ (ದಂಡ)ವನ್ನು ದೇವಸ್ಥಾನದ ಭಂಡಾರಕ್ಕೆ ಒಪ್ಪಿಸುತ್ತಿದ್ದರು ಎಂದು ಹಿರಿಯ ಜಾನಪದ ತಜ್ಞ ಪಾಲಂದಿರ ಪಿ. ದೇವಯ್ಯ ಅಭಿಪ್ರಾಯ ಪಡುತ್ತಾರೆ.

ಋ) ಕಪ್ಪೆಯಾಟ್ :-

ಕಪ್ಪೆಯಾಟ್ ದೈಹಿಕ ಕಸರತ್ತು ಪ್ರಧಾನವಾದ ನೃತ್ಯವಾಗಿದೆ. ವಾದ್ಯ ಪ್ರಧಾನ ನೃತ್ಯಗಳಲ್ಲಿ ಒಂದಾದ ಈ ಕುಣಿತದಲ್ಲಿ ಗಂಡಸರು ಹಾಗೂ ಯುವಕರು ಮಾತ್ರ ಪಾಲ್ಗೊಳ್ಳುತ್ತಾರೆ. ನರ್ತಿಸುವವರು ಬಗ್ಗಿ ತಮ್ಮೆರಡೂ ಕೈಗಳನ್ನು ಎರಡು ಕಾಲೊಳಗೆ ತೂರಿಸಿ; ಕೈಗಳನ್ನು ನೆಲಕ್ಕೆ ತಾಗಿಸುತ್ತಾ ಕಪ್ಪೆಗಳಂತೆ ಕುಪ್ಪಳಿಸುತ್ತಾ ವೃತ್ತಾಕಾರವಾಗಿ ಸುತ್ತುತ್ತಾ ನರ್ತಿಸುತ್ತಾರೆ. ಒಮ್ಮೆ ಮುಂಗೈ ಮತ್ತೊಮ್ಮೆ ಹಿಂಗೈಯನ್ನು ನೆಲಕ್ಕೆ ತಾಗಿಸುತ್ತಿರಬೇಕೆಂಬ ನಿಯಮವಿದೆ. ಈ ನೃತ್ಯದಲ್ಲಿ 'ಕೊಂಬ್ ಕೊಟ್ಟ್ ವಾಲಗ ಹಿಮ್ಮೇಳದ ಪಾತ್ರ ವಹಿಸುತ್ತದೆ. ಕೆಲವೆಡೆಗಳಲ್ಲಿ ಮೇದಪರೆ ಹಾಗೂ ದುಡಿವಾದ್ಯದ ಹಿಮ್ಮೇಳಕ್ಕೂ ನರ್ತಿಸಲಾಗುತ್ತದೆ.

ಎ) ವಾಲಗತ್ತಾಟ್ :-

ಕೊಡವರ ಮನರಂಜನಾತ್ಮಕ ಕುಣಿತಗಳಲ್ಲಿ **'ವಾಲಗತ್ತಾಟ್'** ಪ್ರಮುಖವಾದುದು. ಗಂಡು-ಹೆಣ್ಣು, ಹಿರಿಯ-ಕಿರಿಯ **ಎಂಬ ಬೇಧಭಾವವಿಲ್ಲದೆ**

ಎಲ್ಲರೂ ಗುಂಪು ಸೇರಿ ಕುಣಿಯುತ್ತಾರೆ. 'ಕೊಂಬ್‌ಕೊಟ್ಟ್‌ವಾಲಗ'ದ ಹಿಮ್ಮೇಳಕ್ಕೆ ಸರಿಯಾಗಿ ಹೆಜ್ಜೆಯೆತ್ತಿ ಕುಣಿಯುವುದರಿಂದ ವಾಲಗತ್ತಾಟ್ (ಓಲಗ ಕುಣಿತ) ಎಂಬ ಹೆಸರಿದೆ. ಮದುವೆ ಮುಂತಾದ ಸಾಮಾಜಿಕ, ಸಾಮೂಹಿಕ ಸಮಾರಂಭಗಳಲ್ಲಿ ಈ ನೃತ್ಯವನ್ನು ನರ್ತಿಸುತ್ತಾರೆ. ಇದರಲ್ಲಿ ಎರವ ಚೇನಿ, ಕುರ್‌ಂದ ಕಳಿ, ಪಾಂಬಾಟ್, ದೇವ ಆಟ್, ಹುಲಿವೇಷ, ಮಾಪಳೆಯಾಟ್, ಬೊಳಕಾಟ್ ಹೀಗೆ ಹಲವು ಭಂಗಿಗಳಿವೆ. ಇತ್ತೀಚೆಗೆ ಡಿಸ್ಕೋಡಾನ್ಸ್, ಬ್ರೇಕ್ ಡಾನ್ಸ್ ಹಾಗೂ ಸಿನಿಮಾ ನೃತ್ಯಗಳ ಭಂಗಿಗಳು ಸೇರ್ಪಡೆಗೊಂಡು ವಾಲಗತ್ತಾಟ್ ನೃತ್ಯ ಆದುನಿಕಲೆಯ ಸ್ಪರ್ಶವನ್ನು ನೀಡಿದೆ.

ಏ) ಅಂಗಕಳಿ :-

ಕೊಡವ ಭಾಷಿಕ ಮೂಲ ನಿವಾಸಿಗಳಲ್ಲಿ ಕಂಡುಬರುವ ಏಕೈಕ ಶೋಕ ಸೂಚಕ ನೃತ್ಯ ಅಂಗಕಳಿ. ಆಯಾ ಊರಿನ ಶ್ರೇಷ್ಟ, ಹಿರಿಯ ವ್ಯಕ್ತಿಗಳು ಅಥಾವ ಪಟ್ಟೆದಾರ ಮರಣ ಪಟ್ಟ ಸಂದರ್ಭಗಳಲ್ಲಿ ಶೋಕ ಸೂಚನೆಯನ್ನು ಮಾಡುತ್ತಾ, ಮರಣಪಟ್ಟ ವ್ಯಕ್ತಿಗೆ ಅಂತಿಮ ವಿದಾಯವನ್ನು ಕೋರುತ್ತಾ ನರ್ತಿಸುವ ನೃತ್ಯವೇ ಅಂಗಕಳಿ. ಕೊಡವ ಭಾಷಿಕ ಮೂಲ ನಿವಾಸಿಗಳಲ್ಲಿ ಒಬ್ಬರಾದ ಕೆಂಬಟ್ಟಿ ಜನಾಂಗದವರು ಈ ನೃತ್ಯದಲ್ಲಿ ಭಾಗವಹಿಸುತ್ತಾರೆ.

ಮರಣ ಪಟ್ಟ ವ್ಯಕ್ತಿಯ ಮನೆಯ ಮುಂದಿನ ಅಂಗಳದ ಮಧ್ಯಭಾಗದಲ್ಲಿ ಕೆರಂಜಿ (ಬಿದಿರಿನಲ್ಲಿ ತಯಾರಿಸಲ್ಪಟ್ಟ ಒಂದು ವಿಧದ ಬುಟ್ಟಿ)ಯಲ್ಲಿ ಭತ್ತವನ್ನು ತುಂಬಿಸಿ ಅದರ ಮಧ್ಯಭಾಗದಲ್ಲಿ ಭತ್ತವನ್ನು ತುಂಬಿದ ಸೇರನ್ನು ಇರಿಸಿರುತ್ತಾರೆ. ಸೇರಿನ ಸಮೀಪ ಮಣ್ಣಿನ ಹಣತೆಯನ್ನು ಹೊತ್ತಿಸಿ ಇಡಲಾಗುತ್ತದೆ. ಸೇರಿನ ಮೇಲ್ಭಾಗದಲ್ಲಿ ಕತ್ತಿ ಹಾಗೂ ಮರಣ ಹೊಂದಿದ ವ್ಯಕ್ತಿಯ ಹುಲ್ಲಿನ ಪ್ರತಿಕೃತಿಯನ್ನು ಮಾಡಿ ಇರಿಸಿರುತ್ತಾರೆ. ಈ ಎಲ್ಲಾ ಪರಿಕರಗಳ ಸುತ್ತ ನರ್ತಿಸಲಾಗುತ್ತದೆ. ಇಲ್ಲಿ ವಾಲಗ ಅಥವಾ ಮೇದ ಪರೆ ಹಿಮ್ಮೇಳವಾಗಿರುತ್ತದೆ.

ಮರಣ ಸಂದರ್ಭದ ಈ ನೃತ್ಯ ಆ ನೆಲದಲ್ಲಿ ಶ್ರೇಷ್ಟ ಸಾಧನೆಯನ್ನು ಮಾಡಿದ ವ್ಯಕ್ತಿಗೆ ಅರ್ಪಿಸುವ ವಿಶೇಷ ಗೌರವವಾಗಿದೆ. ಕೆಂಬಟ್ಟಿ ಜನಾಂಗದವರು ಭಾಗವಹಿಸುವ ಈ ಶೋಕ ಸೂಚಕ ನೃತ್ಯ ಇತ್ತೀಚಿನ ದಿನಗಳಲ್ಲಿ ಕೊಡಗಿನ

ಕೆಲವೇ ಕೆಲವು ಕಡೆಗಳಲ್ಲಿ ಮಾತ್ರ ಕಾಣಸಿಗುತ್ತದೆ.

ಐ) ಸಿದ್ಧಿಯಾಟ್ :-

ದೈವೀ ಆರಾಧನೆಯ ಮೂಲದೊಂದಿಗೆ ಗುರುತಿಸಿಕೊಳ್ಳುವ 'ಸಿದ್ಧಿಯಾಟ್' ಅನಂತರದಲ್ಲಿ ದೈಹಿಕ ಕಸರತ್ತು ಪ್ರಧಾನವಾಗಿಯೂ, ಪ್ರದರ್ಶನ ಕುಣಿತವಾಗಿಯೂ ರೂಪಾಂತರ ಹೊಂದಿದ ಜನಪದ ನೃತ್ಯ. ಇದು ವಾದ್ಯ ಪ್ರಧಾನ ನೃತ್ಯ. ಗಂಡಸರು ಭಾಗವಹಿಸುವ ಈ ನೃತ್ಯದಲ್ಲಿ ನೃತ್ಯಗಾರರು ಸಮ ಸಂಖ್ಯೆಯಲ್ಲಿರಬೇಕು.

ಸಿದ್ಧಿಯಾಟ್ ನೃತ್ಯದಲ್ಲಿ ಎರಡು ನಮೂನೆಗಳಿವೆ. ಒಂದು ಪ್ರಕಾರ ಸಮರಾಭ್ಯಾಸ ಕುಣಿತದಂತಿದ್ದರೆ, ಮತ್ತೊಂದು ದೇವರ ಆರಾಧನೆಯ ಅಂಗವಾಗಿ ನರ್ತಿಸಲ್ಪಡುತ್ತದೆ.

ಮಡಿಕೇರಿ ತಾಲೋಕಿನ ಕೋಟೆಬೆಟ್ಟ ಈಶ್ವರ ಕಲಾತಂಡದವರು ಮೊದಲ ನಮೂನೆಯ 'ಸಿದ್ಧಿಯಾಟ್'ನ್ನು ನರ್ತಿಸುತ್ತಾರೆ. 'ದುಡಿಕೊಟ್ಟ್'ನ ಹಿಮ್ಮೇಳಕ್ಕೆ ನರ್ತಿಸುವ ಈ ಕುಣಿತದಲ್ಲಿ ದೈಹಿಕ ಶಕ್ತಿ ಸಾಮರ್ಥ್ಯ, ಕಸರತ್ತು ಪ್ರಮುಖ ಪಾತ್ರ ವಹಿಸುತ್ತದೆ.

ನೃತ್ಯಗಾರರು ಎದುರುಬದುರಾಗಿ, ಕಾಲಿಗೆ ಕಾಲು ತಾಗುವಂತೆ, ಹಿಮ್ಮುಖವಾಗಿ, ಬೆನ್ನಿಗೆ ಬೆನ್ನು ತಾಗುವಂತೆ, ವರ್ತುಲಾಕಾರವಾಗಿ ಐದು ವಿಭಿನ್ನ ಹೆಜ್ಜೆಗಳನ್ನು ಹಾಕುತ್ತಾ ಕುಣಿಯುತ್ತಾರೆ. ನೃತ್ಯದಲ್ಲಿ ಎದುರಾಳಿಯ ಸಾಮರ್ಥ್ಯ ಪರೀಕ್ಷೆಯು ನಡೆಯುತ್ತದೆ. ನರ್ತಿಸುತ್ತಾ ಬೆನ್ನಿಗೆ ಬೆನ್ನು ಬಲವಾಗಿ ತಾಗಿಸುವ ಸಂದರ್ಭದಲ್ಲಿ ಎದುರಾಳಿ ಅಸಮರ್ಥನಾದರೆ ಕುಸಿದುಬೀಳುವ ಸಂಭವವೂ ಇರುತ್ತದೆ.

ಎರಡನೇ ಮಾದರಿಯ ಸಿದ್ಧಿಯಾಟ್ ಕೊಡವ ಭಾಷಿಕ ಮೂಲನಿವಾಸಿಗಳಲ್ಲಿ ಒಬ್ಬರಾದ ಕುಡಿಯ ಜನಾಂಗದವರಲ್ಲಿ ಕಂಡುಬರುತ್ತದೆ. 'ಸಿದ್ಧ ಆಟ್' ಎಂದೂ ಕರೆಯಲ್ಪಡುವ ಈ ಕುಣಿತವೂ ಆರಂಭದಲ್ಲಿ ದೈವೀ ಸಂಬಂಧೀ ಆಚರಣೆಯ ಹಿನ್ನೆಲೆಯನ್ನು ಹೊಂದಿದೆ. ಈಶ್ವರ ಹಾಗೂ ಕಾಡಿನಲ್ಲಿ ನೆಲೆಸಿರುವ ಐಯ್ಯಪ್ಪ ದೇವರ ಆರಾಧನೆಯ ಅಂಗವಾಗಿ

ನಡೆಯುತ್ತಿತ್ತು ಎನ್ನಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಮೇದಪರೆ ಹಾಗೂ ತಳಿಯಮಣಿ (ಒಂದು ವಿಧಧ ಜಾಗಟೆ)ಯ ಹಿಮ್ಮೇಳದೊಂದಿಗೆ ಕೇವಲ ಮನರಂಜನಾತ್ಮಕ ನೃತ್ಯವಾಗಿ ಯಾವುದೇ ನೃತ್ಯ ಪರಿಕರಗಳಿಲ್ಲದೆ ಕಾಲನೆತ್ತಿ ಕೈಗಳನ್ನು ವಿವಿಧ ವಿನ್ಯಾಸಗಳಲ್ಲಿ ಬೀಸುತ್ತಾ ನರ್ತಿಸಲಾಗುತ್ತದೆ.

ಸಂಪಾಜೆಯ ಅರೆಕಲ್ಲ್ ಅಯ್ಯಪ್ಪ ದೇವಸ್ಥಾನದಲ್ಲಿ ನಡೆಯುವ ಉತ್ಸವದಲ್ಲಿ ಸಾಂಪ್ರದಾಯಿಕ ಶೈಲಿಯ ಸಿದ್ಧಿಯಾಟ್ ನೃತ್ಯವನ್ನು ನರ್ತಿಸಲಾಗುತ್ತದೆ. ಮಾರ್ಚ್ ತಿಂಗಳಿನಲ್ಲಿ ನಡೆಯುವ ಈ ಹಬ್ಬದಲ್ಲಿ ಕುಡಿಯ ಜನಾಂಗದ ನೃತ್ಯಗಾರರು ಶುದ್ಧ ಮುದ್ರಿಕೆಯಲ್ಲಿದ್ದು, ದೇವಸ್ಥಾನದಲ್ಲಿ ನರ್ತಿಸುತ್ತಾರೆ. 'ದುಡಿಕೊಟ್ಟ್ ' ಹಿಮ್ಮೇಳವಾಗಿರುತ್ತದೆ.

ಹೀಗೆ ಕೊಡವರಲ್ಲಿ ಸಿದ್ಧಿಯಾಟ್ ಸಮರಾಭ್ಯಾಸ ಕುಣಿತವಾಗಿ ಉಳಿದುಕೊಂಡರೆ, ಕುಡಿಯರಲ್ಲಿ ದೈವೀ ಆರಾಧನೆಯ ನೃತ್ಯವಾಗಿಯೂ, ಮನರಂಜನಾತ್ಮಕ ಕುಣಿತವಾಗಿಯೂ ಉಳಿದುಕೊಂಡಿದೆ.

೨. ವಾದ್ಯ ಮತ್ತು ಗೀತ ಪ್ರಧಾನ ನೃತ್ಯಗಳು :-

ಈ ವಿಭಾಗದ ಜನಪದ ನೃತ್ಯಗಳಲ್ಲಿ ವಾದ್ಯಗಳ ಹಿಮ್ಮೇಳದೊಂದಿಗೆ ಜನಪದ ನೃತ್ಯ ಗೀತೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಲ್ಲಿ ಒಂದನ್ನು ಬಿಟ್ಟು ಮತ್ತೊಂದು ಇರುವಂತಿಲ್ಲ. ವಾದ್ಯ ಮತ್ತು ನೃತ್ಯ ಗೀತೆಗಳು ಜೋಡೆತ್ತುಗಳಂತೆ ಕೆಲಸ ನಿರ್ವಹಿಸುತ್ತದೆ.

ಅ) ಬೊಳಕಾಟ್ :-

ಬೊಳಕಾಟ್ ಕೊಡವ ಜನಪದರಲ್ಲಿ ರೂಢಿಯಲ್ಲಿರುವ ವೀರ ಕುಣಿತ. ದೈವೀ ಆರಾಧನೆಯ ಹಿನ್ನಲೆಯಲ್ಲಿ ಈ ಜನಪದ ನೃತ್ಯ ಮೂಡಿಬಂದಿದೆ. ಕೊಡಗಿನ ಹಲವು ದೇವಸ್ಥಾನಗಳಲ್ಲಿ ಬಹಳ ಹಿಂದಿನಿಂದಲೇ ಈ ನೃತ್ಯವು ರೂಢಿಯಲ್ಲಿದ್ದು, ಇದನ್ನು ದೇವರ ನೃತ್ಯ ಎಂದು ಕರೆಯುತ್ತಾರೆ. ಹಬ್ಬದ ಕಟ್ಟು ಕಟ್ಟಳೆ ಆರಂಭವಾದಂದಿನಿಂದ ಆಯಾ ಊರಿನ ದೇವಸ್ಥಾನಗಳಲ್ಲಿ ಹಬ್ಬದ ಕೊನೆಯ ದಿನದವರೆಗೆ ಈ ನೃತ್ಯ ನಿಯಮಬದ್ಧವಾಗಿ ನಡೆಯುತ್ತದೆ. ಕೊಡವ ಭಾಷೆಯಲ್ಲಿ 'ಬೊಳಕ್' ಎಂದರೆ ಬೆಳಕು, ದೀಪ ಎಂದರ್ಥ.

ಬೆಳಕಿನ ಸುತ್ತ ಕುಣಿಯುವ ಕುಣಿತವೇ ಬೊಳಕಾಟ್. ಆಕರ್ಷಕವೂ, ರೋಮಾಂಚಕವೂ ಆದ ಈ ನೃತ್ಯವನ್ನು ಊರಿನ ದೇವರ 'ಬೊಳಕ್‌ನಮ್ಮೆ' (ಬೆಳಕು ಹಬ್ಬ)ದಲ್ಲಿ ನರ್ತಿಸುತ್ತಿದ್ದುದರಿಂದ ಈ ಹೆಸರು ಬಂದಿರಬಹುದೆಂಬ ಅಭಿಪ್ರಾಯವಿದೆ. ದೈವೀ ಹಿನ್ನೆಲೆಯ ಈ ಯುದ್ಧ ನೃತ್ಯದಲ್ಲಿ ಕೊಡವ ಗಂಡಸರು ಭಾಗವಹಿಸುತ್ತಾರೆ.

ಶಿವನು ಭಸ್ಮಾಸುರನನ್ನು ಸಂಹರಿಸಿದ ಸಮಯದಲ್ಲಿ ವೀರಾವೇಶದಲ್ಲಿ ಮೂವತ್ತೆರಡು ನೃತ್ಯ ಭಂಗಿಗಳಲ್ಲಿ ನರ್ತಿಸಿದರ ಪ್ರತಿರೂಪವೇ ಬೊಳಕಾಟ್ ಎಂಬ ನಂಬಿಕೆ ಇದೆ. ಈ ಹಿನ್ನೆಲೆಯ ಕಥೆಯೊಂದು ಹೀಗಿದೆ. ಪ್ರಾಚೀನ ಕಾಲದಲ್ಲಿ ಹೊರ ರಾಜ್ಯಗಳಲ್ಲಿ ಸರಿಯಾದ ನೆಲೆ ಸಿಗದ ಕಾರಣ ಹಲವು ದೇವತೆಗಳು ಕೊಡಗಿಗೆ ಆಗಮಿಸಿದವು. ಕೊಡಗಿನ ಪರಿಸರ, ಇಲ್ಲಿನ ಜನರ ಪ್ರಾಮಾಣಿಕತೆ, ದಾನ ಗುಣವನ್ನು ಮೆಚ್ಚಿದ ಸಾರ್ಥಾವು (ಸಾರ್‌ತಾವು) ದೇವರು ಇಲ್ಲಿ ನೆಲೆಗೊಂಡರೆ ತನಗೆ ನಿತ್ಯಪೂಜೆಗೆ ತೊಂದರೆಯಾಗದೆಂದು ಭಾವಿಸಿ ಕೊಡಗಿಗೆ ಬಂದು ನೆಲೆಸಿದನು. ಅದೇ ಸಮಯದಲ್ಲಿ ತುಳುನಾಡಿನ ಗೋಕರ್ಣ ಎಂಬಲ್ಲಿ ರಾಕ್ಷಸ ದೊರೆಯಾದ ಮೃಗೇಶ್ವರ ವಾಸಿಸುತ್ತಿದ್ದನು. ಆತ ತನಗೆ ಅಗ್ನಿಯ ಕೈ ಬೇಕೆಂದು ಶಿವನನ್ನು ಕುರಿತು ತಪಸ್ಸು ಮಾಡಿದನು. ತಪಸ್ಸಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾಗಿ ವಿಧಿ ಇಲ್ಲದೆ ಅಗ್ನಿಯ ಕೈಯನ್ನು ದಯಪಾಲಿಸಿದನು. ವರವನ್ನು ಪರೀಕ್ಷಿಸಲೆಂದು ಮೃಗೇಶ್ವರನು ವರ ನೀಡಿದ ಶಿವನ ತಲೆಯ ಮೇಲೆ ಕೈಯಿರಿಸಲು ಹೋದನು. ಭಯಭೀತನಾದ ಶಿವನು ಓಡಿ ತಪ್ಪಿಸಿಕೊಂಡು ದೊಡ್ಡ ಮರವೊಂದರ ಪೊಟರೆಯಲ್ಲಿ ಅಡಗಿದನು. ಅಷ್ಟರಲ್ಲಿ ಮಹಾಮಾಯೆ ಎಂಬಂತೆ ದೇವಲೋಕ ಮತ್ತು ಕೆಳಲೋಕದಲ್ಲಿ ಗಾಳಿ ಸಂಚಾರ ನಿಂತು ಬಿಸಿ ಏರಲಾರಂಭಿಸಿತು. ಇದನ್ನು ಕಂಡ ಮಾವಿಷ್ಣು ಕೆಳಲೋಕಕ್ಕೆ ಬಂದನು. ಮೃಗೇಶ್ವರನನ್ನು ಭೇಟಿ ಮಾಡಲು ಮೋಹಿನಿ ಅವತಾರವೆತ್ತಿದನು. ಸುರಸುಂದರಿ ಮೋಹಿನಿಯ ರೂಪಕ್ಕೆ ಮರುಳಾದ ಮೃಗೇಶ್ವರನು ತನ್ನನು ವಿವಾಹವಾಗಬೇಕೆಂದು ಆಕೆಯನ್ನು ಒತ್ತಾಯಿಸುತ್ತಾನೆ. ಒಪ್ಪದಿದ್ದರೆ ಅಗ್ನಿಯ ಕೈಯಿಂದ ಭಸ್ಮಗೊಳಿಸುತ್ತೇನೆ ಎಂದು ಹೆದರಿಸುತ್ತಾನೆ.

ವಿವಾಹವಾಗಲು ಒಪ್ಪಿದ ಮೋಹಿನಿ ಆತನಿಗೆ ಷರತ್ತು ಹಾಕುತ್ತಾಳೆ. ಅದರಂತೆ ತಾನು ನರ್ತಿಸುವ 'ಏಳ್ ತರ ಆಟ್' (ಏಳು ವಿಧದ ನೃತ್ಯ)ವನ್ನು

ನೀನು ನರ್ತಿಸಬೇಕು ಎನ್ನುತ್ತಾಳೆ. ಮೋಹಿನಿ ಮಾತಿಗೆ ಮರುಳಾದ ರಾಕ್ಷಸ ಆಕೆ ನರ್ತಿಸಿದಂತೆಲ್ಲಾ ನರ್ತಿಸುತ್ತಾನೆ. ನೃತ್ಯದ ಭಂಗಿಯೆಂಬಂತೆ ಮೋಹಿನಿ ರೂಪದ ವಿಷ್ಣು ತಲೆಯ ಮೇಲೆ ಕೈಯಿಟ್ಟು ನರ್ತಿಸುತ್ತಾಳೆ. ಅದನ್ನೇ ಅನುಕರಿಸಿದ ಮೃಗೇಶ್ವರ ತನ್ನ ತಲೆಯ ಮೇಲೆ ತಾನೇ ಕೈಯಿಟ್ಟು ಉರಿದು ಬೂದಿಯಾಗುತ್ತಾನೆ. ಹೀಗೆ ಮೃಗೇಶ್ವರ ಭಸ್ಮಾಸುರ ಆಗುತ್ತಾನೆ. ಅಂದು ಮೋಹಿನಿ ನರ್ತಿಸಿದ ನೃತ್ಯವೇ ಬೊಳಕಾಟ್ ಎನ್ನಗುತ್ತದೆ.

ಭಗವತಿ, ಭದ್ರಕಾಳಿ ದೇವಸ್ಥಾನಗಳಲ್ಲಿ, ಅಯ್ಯಪ್ಪ ಅಥವಾ ಇತರ ದೇವಿಯರ ನೆಲೆಯಿರುವ ಈಶ್ವರ ದೇವಸ್ಥಾನಗಳಲ್ಲಿ 'ಬೊಳಕಾಟ್' ನೃತ್ಯವನ್ನು ದೇವರ ಸೇವಾರ್ಥ ನರ್ತಿಸಲಾಗುತ್ತದೆ. ಈ ಸಂದರ್ಭದಲ್ಲಿ ನೃತ್ಯವನ್ನು ದೇವರಿಗೆ ಒಪ್ಪಿಸುವಾಗ ತಲೆಯ ಮೇಲೆ ಕೈಯಿಟ್ಟು ನರ್ತಿಸುವ ಪರಿಪಾಟವಿದೆ.

ಮೋಹಿನಿ ರೂಪದ ವಿಷ್ಣು ಈ ನೃತ್ಯವನ್ನು ಶಿವನ ಮುಂದೆ ಪ್ರದರ್ಶಿದಾಗ ಮೈ ಮರೆತ ಶಿವನು ಮೋಹಿನಿಯನ್ನು ಮೋಹಿಸಿ ಅನಾಹುತವಾಯಿತು. ಅಂತಹ ಅನಾಹುತ ಭವಿಷ್ಯದಲ್ಲಿ ಸಂಭವಿಸಬಾರದು ಮುನ್ನೆಚ್ಚರಿಕೆಯಿಂದ ಬೊಳಕಾಟ್ ನೃತ್ಯವನ್ನು ಶಿವ ದೇವಾಲಯಗಳಲ್ಲಿ ನರ್ತಿಸುವುದಿಲ್ಲ ಎಂಬ ಪ್ರತೀತಿಯಿದೆ.

ಬೊಳಕಾಟ್ ಒಂದು ನೃತ್ಯ ಸಮುಚ್ಚಯ. ಬೆಳಕಿನ ಸುತ್ತ ವೈವಿಧ್ಯಮಯ ಭಂಗಿಗಳಲ್ಲಿ ಕುಣಿಯುವ ಕೊಡವ ಗಂಡಸರು ಸುಮಾರು ಹದಿನೇಳು ಬಗೆಯ ನೃತ್ಯ ಪ್ರಕಾರಗಳನ್ನು ಪ್ರದರ್ಶಿಸುತ್ತಾರೆ. ಇಲ್ಲಿ ಹಾಡುವವರು ನಾಲ್ಕು ಮಂದಿ. ಇವರನ್ನು ಒಳಗೊಂಡಂತೆ ನರ್ತಿಸುವವರು ಕೊಡವ ಪಾರಂಪರಿಕ ಉಡುಪಾದ 'ಕುಪ್ಯಚೇಲೆ'ಯನ್ನು ತೊಟ್ಟಿರುತ್ತಾರೆ. ಮುಂಭಾಗದಲ್ಲಿ ಬಲಗಡೆಗೆ ಸಾಂಪ್ರದಾಯಿಕ ತೊಡುಗೆಯಾದ ಪೀಚೆಕತ್ತಿಯನ್ನು ಸಿಕ್ಕಿಸಿರುತ್ತಾರೆ. ಹಾಗೂ ತಲೆಗೆ ಬಿಳಿಯವರ್ಣದ ಮಂಡೆತುಣಿಯನ್ನು ಧರಿಸಿರುತ್ತಾರೆ. ಬಲಗೈಯಲ್ಲಿ ಒಡಿಕತ್ತಿ (ಬಿಚ್ಚುಗತ್ತಿ), ಎಡಗೈಯಲ್ಲಿ ಪೀಚೆಕತ್ತಿ, ಕೆಲವೊಮ್ಮೆ ಚೌರಿ (ಚಮರಿ ಮೃಗದ ಕೂದಲಿನ ಗುಚ್ಛ)ವನ್ನು ಹಿಡಿದು ಕುತ್ತ್‌ಂಬೊಳ್‌ಚ (ಕಾಲುದೀಪ)ದ ಸುತ್ತ ವರ್ತುಲಾಕಾರವಾಗಿ ನಿಲ್ಲುತ್ತಾರೆ. ಹಾಡುವವರು ದೀಪದ ಸುತ್ತ ನಿಂತು ಸಾಂಪ್ರದಾಯಿಕ ದುಡಿ ವಾದ್ಯವನ್ನು ಬಾರಿಸುತ್ತಾ ಹಾಡುತ್ತಾರೆ. ನರ್ತಿಸುವವರು

ಇವರ ಸುತ್ತ ಚಕ್ರಾಕಾರವಾಗಿ ವಿವಿಧ ಭಂಗಿಗಳಲ್ಲಿ ನರ್ತಿಸುತ್ತಾರೆ. ನರ್ತಿಸುವ ತಂಡದ ನಾಯಕನನ್ನು 'ಮುಂಬಾಟ್‌ಕಾರ' ಎನ್ನುತ್ತಾರೆ. ಈತ ನೃತ್ಯವನ್ನು ಭಾವಸೂಚಕ ಉದ್ಗಾರ ಹಾಗೂ ಹಾಡಿನ ತುಣುಕುಗಳ ಮೂಲಕ ಮುನ್ನಡೆಸುತ್ತಾನೆ. ಹಾಡು ಹಾಗೂ ದುಡಿ ವಾದ್ಯದ ತಾಳಕ್ಕೆ ಅನುಗುಣವಾಗಿ ಗತ್ತಿನ ಹೆಜ್ಜೆಗಳನ್ನು ಹಾಕುತ್ತಾ ವೃತ್ತಾಕಾರವಾಗಿ ಕುಣಿಯುತ್ತಾರೆ. ಹೇ,ಹೋ,ಹಾ ಎಂಬ ಉದ್ಗಾರಗಳೊಂದಿಗೆ ನೃತ್ಯದ ಗತಿಗಳನ್ನು ಬದಲಾಯಿಸುತ್ತಾರೆ. ಕುಣಿಯುವಾಗ ಕೈಯಲ್ಲಿ ಹಿಡಿದಿರುವ ಕತ್ತಿಗಳು ಇತರರಿಗೆ ತಾಗದಂತೆ ತೋರುವ ಚಾಕಚಕ್ಯತೆ, ಕೈಚಪ್ಪಾಳೆ ತಟ್ಟುತ್ತಾ ಕುಣಿಯುವ ಕುಣಿತದ ಕೆಲವು ವಿನ್ಯಾಸಗಳು ರೋಮಾಂಚನಕಾರಿಯಾದವುಗಳು. ಈ ನೃತ್ಯದ ಹಾಡಿನ ದಾಟಿ ಒಂದೇಯಾಗಿದ್ದರೂ, ಕುಣಿತದಲ್ಲಿ ಮೂವತ್ತಕ್ಕೂ ಅಧಿಕ ವೈವಿಧ್ಯಮಯ ಭಂಗಿಗಳಿವೆ. ನೃತ್ಯದ ಭಂಗಿ ಹಾಗೂ ವಿನ್ಯಾಸಗಳನ್ನು ಗಮನಿಸಿದಾಗ ಇದು ವೀರಪ್ರಧಾನ ಕುಣಿತದಂತೆ ಕಂಡುಬರುತ್ತದೆ. ಕುಣಿತದ ಮಧ್ಯೆ ನೃತ್ಯಗಾರರೆಲ್ಲ ಒಟ್ಟಾಗಿ "ತುಮ್ಮಾದೇವಿ ದೇವಿ ತಾ, ಓ ಎಹೀಯೋ. ಶಂಬೋ ಶಿವೋ ಮಾದೇವೋ ಓ ಎಹಿಯೋ" ಎಂದು ಹಾಡುತ್ತಾ ಕುಣಿಯುತ್ತಾರೆ.

ಪೂರ್ವದಲ್ಲಿ ಊರಿನ ದೇವಸ್ಥಾನಗಳಿಗೆ ಸೀಮಿತವಾಗಿದ್ದ ಬೊಳಕಾಟ್ ಇಂದು ಸಾರ್ವಜನಿಕ ಪ್ರದರ್ಶನಗಳನ್ನು ಕಾಣುತ್ತಿದೆ. ನೃತ್ಯ ಸಮುಚ್ಛಯವೆನಿಸಿಕೊಳ್ಳುವ ಬೊಳಕಾಟ್‌ನ ಆರಂಭಿಕ ಹಂತದಲ್ಲಿ ಕೈಚಪ್ಪಾಳೆ ತಟ್ಟುತ್ತಾ ನರ್ತಿಸಲಾಗುತ್ತದೆ. ಅನಂತರ ನರ್ತಿಸುವ ನೃತ್ಯವೇ 'ಕತ್ತಿಯಾಟ್'.

ಆ) ಕತ್ತಿಯಾಟ್ :-

ಕತ್ತಿಯಾಟ್ ಕೆಲವೆಡೆಗಳಲ್ಲಿ ಕೊಂಬಾಟ್‌ನ ಒಂದು ಅಂಗವಾಗಿಯೂ ಇನ್ನೂ ಕೆಲವೆಡೆಗಳಲ್ಲಿ ಬೊಳಕಾಟ್‌ನ ಅಂಗವಾಗಿಯೂ ನರ್ತಿಸಲ್ಪಡುತ್ತದೆ. ಕೊಂಬಾಟ್‌ನ ಅಂಗವಾಗಿ ನರ್ತಿಸಲ್ಪಡುವ ಕತ್ತಿಯಾಟ್‌ನಲ್ಲಿ ಮರದಿಂದ ತಯಾರಿಸಲಾದ ಚೂರಿಯ ರೀತಿಯ ಕತ್ತಿಗಳನ್ನು ಬಳಸುತ್ತಾರೆ. ಮೇದ ಜನಾಂಗದ ವ್ಯಕ್ತಿ ಬಾರಿಸುವ ಪಡ್‌ಮ ಅಥವಾ ಪಡುವ ವಾದ್ಯದ ಹಿಮ್ಮೇಳಕ್ಕೆ ನರ್ತಿಸಲಾಗುತ್ತದೆ. (ವಿವರ:- ಕೊಂಬಾಟ್‌ನ ವಿವರಣೆಯಲ್ಲಿ ನೀಡಲಾಗಿದೆ.) ಬೊಳಕಾಟ್‌ನ ಮುಂದುವರಿದ ಭಾಗವಾಗಿ ನರ್ತಿಸಲ್ಪಡುವ ಕತ್ತಿಯಾಟ್‌ನಲ್ಲಿ

ಒಡಿಕತ್ತಿ ಮತ್ತು ಪೀಚೆಕತ್ತಿಗಳ ಬಳಕೆ ಇದೆ. ಪ್ರಸ್ತುತ ಈ ನೃತ್ಯಗಳು ಬಿಡಿ ನೃತ್ಯಗಳಾಗಿಯೂ ಪ್ರದರ್ಶನಗೊಳ್ಳುತ್ತಿವೆ. ಈ ಹಂತದಲ್ಲಿ ನರ್ತಿಸುವವರು ಒಂದು ಕೈಯಲ್ಲಿ ಒಡಿಕತ್ತಿ, ಮತ್ತೊಂದು ಕೈಯಲ್ಲಿ ಪೀಚೆಕತ್ತಿಯನ್ನು ಹಿಡಿದು ವಿವಿಧ ಭಂಗಿಗಳಲ್ಲಿ ನರ್ತಿಸುತ್ತಾರೆ. ವೀರರಸ ಪ್ರಧಾನವಾದ ಈ ನೃತ್ಯದಲ್ಲಿ ಬೊಳಕಾಟ್‌ನ ನೃತ್ಯಗೀತೆಯನ್ನೇ ದುಡಿಕೊಟ್ಟ್‌ನ ಹಿಮ್ಮೇಳದೊಂದಿಗೆ ಹಾಡಲಾಗುತ್ತದೆ. ಈ ಗೀತೆಯಲ್ಲಿ ದೇವರ ಸ್ತುತಿ, ಪುರಾಣ, ಇತಿಹಾಸ, ಪ್ರಕೃತಿ ವರ್ಣನೆ ಹಾಗೂ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ವಿವರಗಳು ವರ್ಣಿತವಾಗಿವೆ.

ಇ) ಚೌರಿಯಾಟ್ :-

ಕತ್ತಿಯಾಟ್‌ನ ನಂತರ ಕುಣಿಯುವ ನೃತ್ಯವೇ 'ಚೌರಿಯಾಟ್'. ಚೌರಿ (ಚಮರಿ ಮೃಗದ ಕೂದಲಿನ ಗುಚ್ಛ)ಯನ್ನು ಕೈಯಲ್ಲಿ ಹಿಡಿದು ವೈವಿಧ್ಯಮಯವಾಗಿ ಬೀಸುತ್ತಾ ನರ್ತಿಸುವ ನೃತ್ಯವೇ ಚೌರಿಯಾಟ್. ತಾಳ ಲಯಬದ್ಧವಾಗಿ ನರ್ತಿಸುವ ಈ ನೃತ್ಯ ದೇವರ ಸೇವಾ ವೈಖರಿಯನ್ನು ತೋರಿಸುವ ನೃತ್ಯ ಕಲೆಯಾಗಿದೆ.

ಈ) ಉರ್‌ಟಿಕೊಟ್ಟ್ ಆಟ್ :-

ಕೊಡವ ಭಾಷಿಕ ಮೂಲನಿವಾಸಿಗಳಲ್ಲಿ ಒಬ್ಬರಾದ ಕುಡಿಯ ಜನಾಂಗದ ಜನಪದ ನೃತ್ಯ 'ಉರ್‌ಟಿಕೊಟ್ಟ್‌ಆಟ್'. ಈ ನೃತ್ಯದಲ್ಲಿ ಹೆಣ್ಣುಮಕ್ಕಳು ಮಾತ್ರ ಭಾಗವಹಿಸುವರು. ಮೂಲತಃ ಬೆಟ್ಟಗಳಲ್ಲಿ ವಾಸಿಸುವ ಈ ಜನಾಂಗದವರು ಹಬ್ಬಹರಿದಿನ, ದೇವರಿಗೆ ಕೊಡುವುದು, ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ, ಬಿಡುವಿನ ವೇಳೆಯಲ್ಲಿ ಎಲ್ಲರೂ ಒಂದೆಡೆ ಸೇರುವ ಸಂದರ್ಭದಲ್ಲಿ ಮನರಂಜನೆಗಾಗಿ ನರ್ತಿಸುವ ನೃತ್ಯವಾಗಿದೆ.

ಇಲ್ಲಿ ನೃತ್ಯಗಾರರು ಇಂತಿಷ್ಟೇ ಸಂಖ್ಯೆಯಲ್ಲಿರಬೇಕೆಂಬ ನಿಯಮವಿಲ್ಲ. ಕೊಡವ ಜನಪದ ವಾದ್ಯವಾದ ದುಡಿಯನ್ನು ಬಾರಿಸುತ್ತಾ ಹಾಡುಗಾರರು ಹಾಡುತ್ತಾರೆ. ಇವರ ಸುತ್ತ ವೃತ್ತಾಕಾರವಾಗಿ ನೃತ್ಯಗಾರ್ತಿಯರು ನರ್ತಿಸುತ್ತಾರೆ. ಹಿಮ್ಮೇಳದ ತಾಳಕ್ಕೆ ಅನುಗುಣವಾಗಿ ಕುಣಿದು ಕುಪ್ಪಳಿಸುತ್ತಾ ಬಹಳ ವೇಗವಾಗಿ ನರ್ತಿಸುತ್ತಾರೆ. ಉಮ್ಮತ್ತಾಟ್‌ನಲ್ಲಿರುವ ಸೌಮ್ಯತೆ ಹಾಗೂ ಮಂದಗತಿ ಇಲ್ಲಿ

ಕಾಣಿಸುವುದಿಲ್ಲ.

ಕುಡಿಯತಿ ಹೆಣ್ಣುಮಕ್ಕಳು (ಕುಡಿಯಡ್‌ಚಿ) ಹಾಡುವ ಈ ನೃತ್ಯಗೀತೆ ಪ್ರಕೃತಿಯೊಡನೆ ಅವರಿಗಿರುವ ಆತ್ಮೀಯ ಸಂಬಂಧ, ಅನನ್ಯತೆ ಹಾಗೂ ಕುಡಿಯರ ಮೂಲವೃತ್ತಿಯಾದ ಹೆಂಡ ಇಳಿಸುವ ಕಾಯಕದ ವಿವರಗಳನ್ನು ಒಳಗೊಂಡಿದೆ.

ಆ ಮಲೆ ಈ ಮಲೆ ಬೊಟ್ಟತ್ ಮಲೆ
ಬೊಟ್ಟತ್ ಮಲೆಲ್ ಬಟ್ಟಿ ಪನೆಯೋ .
ಒನ್ನಾಂದ್ ಪೋಯಿತ್ ನೋಟಿತ್ ಬಂದ
ಪಿತ್ಯಾಂದ್ ಪೋಯಿತ್ ಬಟ್ಟೆಯೂ ಕೆತ್ತ್‌ನ
ಪಿತ್ಯಾಂದ್ ಪೋಯಿತ್ ಏಣಿಯೂ ಕೆತ್ತ್‌ನ
ಏಣಿ ಕೆತ್ತಿತ್ ತೂರಂಬಲ್‌ಚ
ಅನ್ನನೆ ಪೋಯಿತ್ ಕೆಟ್ಟ್ಂಗೊಡ್‌ತ
ಕೆಟ್ಟ್ಂಗೊಡತಿತ್ ಕಂಡೆ ತೊಲ್‌ಚ
ಪಿತ್ಯಾಂದ್ ಪೋಯಿತ್ ಬಾಟಿತ್ ಬಂದ
ಪಿತ್ಯಾಂದೂ ಪೋಯಿತ್ ಬಾಟಿತೇ ಬಂದ
ಮೂಂದಡೆ ಬುಟ್ಟಿತ್ ತುಂಡ್‌ಟ್ಟ್ ಬಂದ
ಬುದ್ದತ್ ಕಳ್ಳೆಲ್ಲಾ ಮೂಪಾನಿ ಕಳ್ಳ್
ಮಿಞ ಬುದ್ದತುಳಿ ಭೂಮಿ ತುಳಿ
ಅಲ್ಲಿಂಜ ಬುದ್ದತ್ ತಮ್ಮಚಂದುಳಿ
ಅಲ್ಲಿಂಜ ಬುದ್ದತ್ ಮಾಲವಂದುಳಿ
ಬುದ್ದತ್ ಕಳ್ಳೆಲ್ಲಾ ಮೂಪಾನಿ ಕಳ್ಳ್
ಕುಂಡೂಮೆ ಚೊಟ್ಟಂಡ ಮದ್ದ್‌ಟ್ಟ ಕಳ್ಳ್
ಆಕಾಶ ನೋಟಿತ್ ಸುಳಿಪೋನ ಮದ್ದ್
ತಾನನ್ನೆ ಪೋಯಿತ್ ಕೋಂದೋರ್ ಮದ್ದ್

ಚುಳ್ಳಂಬೆದ್‌ಲ್ ಒಣಂಗ್‌ನ ಮದ್ದ್
ಕುಂಡಾನ ವರತ್‌ಲ್ ಇಡ್‌ಚೋರ್ ಮದ್ದ್
ಕೂಡ್ ಮೊರತ್‌ಲ್ ತೆಳ್ಳ್‌ನ ಮದ್ದ್
ಜೋಯಿ ತೊರಪೆಕ್ ದುಂಬ್‌ನ ಮದ್ದ್
ಅನ್ನನ್ನೆ ಕಳ್ಳ್‌ಕ್ ಇಟ್ಟೋರ್ ಮದ್ದ್
ಚೊಕ್ಕ್‌ಚಿ ಚೊಕ್ಕ್‌ಚಿ ಚೊಕ್ಕೀರ ಕಳ್ಳ್
ಮಂಡೆ ಮರ್‌ಂಜತ್ ಮಂಡೀರ ಕಳ್ಳ್
ಒಬ್ಬಂಗುಡಿಕಣೆ ಇಬ್ಬಂಗ್ ಚೊಕ್ಕು
ತೇಂಬರೆ ಚೊಟ್ಟಂಡ ಮದ್ದ್‌ಟ್ಟ ಕಳ್ಳ್
ಮದ್ದ್‌ಟ್ಟ ಕಳ್ಳ್‌ಕ್ ಎರಣಾಯಿ ಪೋನ"

"ಆ ಬೆಟ್ಟ ಈ ಬೆಟ್ಟ ಬೊಟ್ಟತ್ ಬೆಟ್ಟವೊ
ಬೊಟ್ಟ್‌ತ್ ಬೆಟ್ಟದಲ್ಲಿ ಈಚಲು ಮರವೋ
ಒಂದು ದಿನ ಹೋಗಿ ನೋಡಿ ಬಂದೆ
ಮತ್ತೊಂದು ದಿನ ಹೋಗಿ ಹಾದಿ ಮಾಡಿದೆ
ಮತ್ತೊಂದು ದಿನ ಹೋಗಿ ಏಣಿ ಮಾಡಿದೆ.
ಏಣಿಯನ್ನಿರಿಸಿ ಬೆತ್ತದಿ ಬಿಗಿದೆ
ಏಣಿಯನ್ನೇರಿ ಗೊನೆಯನ್ನು ಶುಚಿಗೊಳಿಸಿದೆ.
ಮತ್ತೊಮ್ಮೆ ಹೋಗಿ ಜಜ್ಜಿ ಬಂದೆ
ಮಗದೊಮ್ಮೆ ಹೋಗಿ ಜಜ್ಜಿ ಬಂದೆ
ಮೂರೆಡೆ ಬಿಟ್ಟು ತುಂಡರಿಸಿದೆ.
ಅಲ್ಲಿಂದ ಸೋರಿತು ತಮ್ಮಚ್ಚ (ದೇವರು) ಹನಿ
ಅಲ್ಲಿಂದ ಸೋರಿತು ಮಾನವನಿಗಿರುವ ಹನಿ
ಸೋರಿತು ಸೋರಿತು ಮೂಪಾನಿ (ಅಳತೆ ಮಾಪಕ) ಹೆಂಡ

ಕುಂಡೂಮೆ ಚೊಟ್ಟನದು ಮದ್ದಿರುವ ಹೆಂಡ
ಆಕಾಶ ನೋಡಿ ಚಿಗುರಿರುವ ಮದ್ದು
ಕೆಳಭೂಮಿ ನೋಡಿ ಬೇರಿಳಿದ ಮದ್ದು
ನಾನೇ ಹೋಗಿ ತಂದಿರುವ ಮದ್ದು
ಎಳೆಬಿಸಿಲಲ್ಲಿ ಒಣಗಿರುವ ಮದ್ದು
ಆಳವಾದ ವರದಲ್ಲಿ ಜಜ್ಜಿದ ಮದ್ದು
ಒಳ್ಳೆಯ ಮೊರದಲ್ಲಿ ಕೇರಿದ ಮದ್ದು
ಜೋಗಿ ತೊರಪೆ (ದೊನ್ನೆ)ಗೆ ತುಂಬಿದ ಮದ್ದು
ಅಮಲೇರಿತು ಅಮಲೇರಿತು ಚೋಕೀರ ಹೆಂಡ
ತಲೆಯನ್ನು ವಾಲಿಸಿತು ಮಂಡೀರ ಹೆಂಡ
ಒಬ್ಬ ಕುಡಿದಾಗ ಇಬ್ಬರಿಗೆ ಮತ್ತು
ತೇಂಬರೆ ಚೊಟ್ಟನ ಮದ್ದಿರುವ ಹೆಂಡ
ಮದ್ದಿರುವ ಹೆಂಡಕ್ಕೆ ಶರಣಾಗಿ ಹೋದೆ
ಸೋರಿತು ಹೆಂಡವೊ ಮೂಪಾನಿ ಹೆಂಡವೊ
ಮೊದಲು ಬಿದ್ದಹನಿ ಭೂಮಿಹನಿ"

ಹೀಗೆ ಸಾಗುವ ಈ ಗೀತೆಯು ವಿಶಿಷ್ಟವಾಗಿದೆ.

ಮತ್ತೊಂದು ಗೀತೆಯಲ್ಲಿ ಪ್ರಾಕೃತಿಕ ವರ್ಣನೆಯಿದೆ. ಅಲ್ಲದೆ ತಮ್ಮ ನೃತ್ಯದಲ್ಲಿ ಹಿಮ್ಮೇಳಗಾರನಾಗಿ ಮುಸುವನೂ, ಆತನ ವಾದ್ಯದ ತಾಳಕ್ಕೆ ಸರಿಯಾಗಿ ನರ್ತಿಸುವ ಕೋತಿಗಳೂ ಇವೆ. ಎಂದು ಹಾಡುವ ಈ ನೃತ್ಯ ಗೀತೆ ವಿಭಿನ್ನವಾಗಿದೆ.

ಕೊಟ್ಟ್ ಕೊಟ್ಟ್ ಮುಚ್ಚ ಆಟಾಡ್ ಕೋಡ
ಕೊಂಬುಂಜ ಕೊಂಬುಕ್ ತುಳ್ಳುವ ಕೋಡ
ಕೋಡ ಮದ್‌ಚಿತ್ ತೇಂಜ ಪಲಚಿ

ಮುಚ್ಚ ಮದಿಕಣೆ ಕೈ ತಪ್ಪಿ ಬುದ್ದ
ಕೇಳಿರೋ ಕೇಪಿರೋ ಬಾಲರೇ ನಿಂಗ
ಕೇಳಿರೋ ಕೇಪಿರೋ ತಕ್ಕರೇ ನಿಂಗ
ಲಕ್ಕುವಾ ಲೇಂಬಾಳ್ ಲೆಲ್ಲೇಲಾಂ ಬಾಳ್
ಪಾರೆಲ್ ತೇಂಗಲ ಬಾಯಿ ಮರಿಯ
ತೋರಣ ಬಾಳೆರ ತೊಂಬೆ ಮರಿಯ
ಬರೆಲ್ ತೇಂಗಲ ಬಾಯಿ ಮರಿಯ
ಈ ಚಂಗೊತ್ತ ಬಾಳೆ ಬೇರ್ ಮರಿಯ
ಕೇಳಿರೋ ಕೇಪಿರೊ ಬಾಲರೇ ನಿಂಗ
ಲಕ್ಕುವ ಲೇಂಬಾಳ್ ಲೆಲ್ಲೇಲಾಂ ಬಾಳ್
ಬಾಳೆಕೊಲೆ ಬೂವ ಓಣಿಕ್ ನೇರೆ
ಅಣ್ಣಂಡ ಕೋಂಬರೆ ಗುಡ್ಡಕ್ ನೇರೆ
ಏಡಣ್ಣಂಡತ್ತಿಗೆ ಬೋಜಿ ಮದೆಮ್ಮ
ಕಟ್ಟೋಳೆ ಕಂಡಿಕ್ ಬಾರಿ ಮದೆಮ್ಮ
ಬಟ್ಟೋಳೆ ಮೂಡ್‌ನ ನಾನೊಮ್ಮ ನೋಟ್‌ವಿ
ಬಟ್ಟೋಳೆ ಮೂಡ್‌ಕ್ ಬೊಟ್ಟ್‌ಟ್ಟ್ ತಪ್ಪಿ
ನಾಡಣ್ಣಂಡತ್ತಿಗೆ ಚಾಯಿಕಾರತಿ
ನಾರಾಚೆ ನಾರಾಚೆ ಬಾರಿರೋ ಬಾವ
ಕಾಪ್‌ಲ್ ಕೋಳಿಕರಿ ಬೆಚ್ಚಂಡ್ ಕಾಪಿ
ಕೇಳಿರೋ ಕೇಪಿರೊ ಬಾಲರೆ ನಿಂಗ
ಲಕ್ಕುವ ಲೇಂಬಾಳ್ ಲೆಲ್ಲೇಲಾ ಬಾಳ್

"ದುಡಿಯನ್ನು ಬಾರಿಸು ಮುಸುವನೇ, ನರ್ತಿಸು ನೀ ಮಂಗನೇ
ರೆಂಬೆಯಿಂದ ರೆಂಬೆಗೆ ಹಾರುವ ಮಂಗ
ಮಂಗ ಹಾರಿ ಸವೆಯಿತು ಹಲಸಿನ ಮರವು
ಮುಸುವ ಹಾರಾಡಲು ಆಯತಪ್ಪಿ ಬಿದ್ದಿತು
ಕೇಳ್ರಪ್ಪೋ ಕೇಳ್ರಪ್ಪೋ ಬಾಲಕರೇ ನೀವು
ಕೇಳ್ರಪ್ಪೋ ಕೇಳ್ರಪ್ಪೋ ತಕ್ಕರೇ ನೀವು
ಲಕ್ಕುವಾ ಲೇಂಬಾಳು ಲೆಲ್ಲೇಲಾ ಬಾಳು"

ಬಂಡೆ ಮೇಲಿನ ಜೇನು ಕುಡಿಕೆಯ ಬಾಯಿ ಮೇಲಿದೆ
ತೋರಣದ ಬಾಳೆಯ ಹೂವು ಮೇಲಿದೆ.
ಬರೇ (ಕಡಿದಾದ ಪ್ರದೇಶ)ಯಲ್ಲಿನ ಜೇನು ಕುಡಿಕೆಯ ಬಾಯಿ ಮೇಲಿದೆ.
ಶಂಖದಂತಿರುವ ಈ ಬಾಳೆಯ ಬೇರು ಮೇಲಿದೆ.
ಕೇಳ್ರಪ್ಪೊ ಕೇಳ್ರಪ್ಪೊ ಬಾಲಕರೇ ನೀವು
ಲಕ್ಕುವಾ ಲೇಂಬಾಳು ಲೆಲ್ಲೇಲಾ ಬಾಳು
ಬಾಳೆಗೊನೆ ಬೀಳ್ವುದು ಓಣಿಯ ಬದಿಗೆ
ಅಣ್ಣನ ಕೋಣೆ ಬಚ್ಚಲ ಮನೆಯ ಬದಿಗೆ
ನನ್ನಣ್ಣನ ಅತ್ತಿಗೆ ರೂಪಸಿಯವಳು
ಹೊಸ್ತಿಲ ಅಂಚಿಗೆ ಬನ್ನಿ ನಾದಿನಿಯಮ್ಮ
ತಟ್ಟೆಯಂದದ ಮೊಗವ ತೋರಮ್ಮ ನೀನು
ತಟ್ಟೆಯಂದದ ಮೊಗಕೆ ಬೊಟ್ಟಿಡುವೆ ನಾನು
ನನ್ನಣ್ಣನ ಅತ್ತಿಗೆ ರೂಪಸಿಯುವಳು
ಭಾನುವಾರ ಭಾನುವಾರ ಬನ್ನಿರಿ ಬಾವ

ಕಾವು ಕುಳಿತ ಕೋಳಿಯ ಸಾರು ಮಾಡುವೆ
ಕೇಳ್ರಪ್ಪೊ ಕೇಳ್ರಪ್ಪೊ ಬಾಲಕರೇ ನೀವು
ಲಕ್ಕುವಾ ಲೇಂಬಾಳು ಲೆಲ್ಲೇಲಾ ಬಾಳು

ಈ ಗೀತೆಯಲ್ಲಿ ಪ್ರಕೃತಿಯಲ್ಲಿ ಕಂಡುಬರುವ ಪ್ರಾಣಿ ಪಕ್ಷಿಗಳ, ಗಿಡಮರಗಳ, ಹಣ್ಣು ಹಂಪಲುಗಳ ವರ್ಣನೆ ಅತ್ತಿಗೆ ನಾದಿನಿಯರ ಹಾಗೂ ಸಾಂಸಾರಿಕ ಸಂಬಂಧಗಳ ಚಿತ್ರಣವಿದೆ.

ಕೆಲವು ಕಡೆಗಳಲ್ಲಿ ಕುಡಿಯತಿ ಹೆಣ್ಣು ಮಕ್ಕಳ ಹಾಡಿಗೆ ಕುಡಿಯ ಗಂಡಸರು ದುಡಿ ಬಾರಿಸಿದರೆ ಮತ್ತೆ ಕೆಲವೆಡೆಗಳಲ್ಲಿ ಕುಡಿಯತಿ ಹೆಣ್ಣು ಮಕ್ಕಳೆ ದುಡಿಯನ್ನು ಬಾರಿಸುತ್ತಾ ಹಾಡುತ್ತಾರೆ. ಕೊಡವ ಭಾಷೆಯಲ್ಲಿ ದುಡಿಯನ್ನು ಉರುಳಿಸಿ ಬಾರಿಸುವ ವಿಧಾನವನ್ನು 'ಉರ್‌ಟಿಕೊಟ್ಟ್‌ವ' ಎನ್ನಲಾಗುತ್ತದೆ.ಇದರಿಂದ ಹೊಮ್ಮುವ ನಾದವು ವಿಭಿನ್ನವಾಗಿರುತ್ತದೆ. ಈ ವಿಭಿನ್ನ ನಾದಕ್ಕೆ ಸರಿಯಾಗಿ ನರ್ತಿಸುವ ನೃತ್ಯವೇ 'ಉರ್‌ಟಿಕೊಟ್ಟ್‌ಆಟ್' ಎಂದು ಕರೆಯಲಾಗುತ್ತದೆ.

ಉ) ಬೋಡ್‌ನಮ್ಮೆರ ಆಟ್ (ಬೋಡ್ ಕಳಿ) :-

ಬೋಡಾಟ್, ಬೋಡ್‌ಕಳಿ ಎಂದು ಕರೆಯಲ್ಪಡುವ ಈ ನೃತ್ಯ ಪ್ರಮುಖವಾಗಿ ದಕ್ಷಿಣ ಕೊಡಗಿನ ಕ್‌ಗ್ಗಟ್ಟ್ ನಾಡಿನಲ್ಲಿ ಕಾಣಸಿಗುತ್ತದೆ. ಬೋಡ್ ಹಬ್ಬ ಕೊಡಗಿನ ವಿಶಿಷ್ಟ ಹಬ್ಬವಾಗಿದ್ದು ದಕ್ಷಿಣ ಕೊಡಗಿನ ಕೆಲವು ಗ್ರಾಮಗಳಲ್ಲಿ ಮಾತ್ರ ಆಚರಿಸಲ್ಪಡುತ್ತದೆ. ಕೊಡಗಿನ ಹಬ್ಬಗಳಾದ ಪುತ್ತರಿ, ಕೈಲ್‌ಪೊಳ್ದ್,ಕಾವೇರಿ ಚಂಗ್ರಾಂದಿಯಂತೆ ಇದು ಏಕಕಾಲದಲ್ಲಿ ಆಚರಿಸಲ್ಪಡುವುದಿಲ್ಲ. ಅಕ್ಟೋಬರ್ ತಿಂಗಳ ಕಾವೇರಿ ಸಂಕ್ರಮಣದೊಂದಿಗೆ ಆರಂಭವಾಗುವ ಈ ಹಬ್ಬ ಜೂನ್ ತಿಂಗಳಿನವರೆಗೆ ಬೇರೆ ಬೇರೆ ಊರುಗಳಲ್ಲಿ ಜರುಗುತ್ತದೆ. ಊರಿನ ಗಂಡಸರು, ಯುವಕರು ಪ್ರಮುಖ ಪಾತ್ರ ವಹಿಸುವ ಈ ಹಬ್ಬದ ಸಂದರ್ಭದಲ್ಲಿ ವೇಷ ಬದಲಾಯಿಸಿಕೊಂಡು ವಿನೋದಮಯವಾಗಿ ನರ್ತಿಸುವ ನೃತ್ಯವೇ ಬೋಡ್‌ನಮ್ಮೆರ ಆಟ್(ಬೋಡ್ ಕಳಿ)

ಕೊಡವ ಭಾಷೆಯಲ್ಲಿ 'ಬೊಗ್‌ಡ್' ಎಂದರೆ ವಿನೋದ, ಹಾಸ್ಯ

ಎಂದರ್ಥ. ಕಾಲಕ್ರಮೇಣ ಇದು 'ಬೋಡ್' ಎಂದು ಬದಲಾಗಿರಬಹುದು. ಆಯಾ ಊರಿನ ದೇವರ ಪ್ರೀತ್ಯರ್ಥ ನಡೆಸುವ ಬೋಡ್ ಹಬ್ಬದಲ್ಲಿ ದೈವಿಕ ಭಾವನೆಯೊಂದಿಗೆ ಹಾಸ್ಯ ವಿನೋದ ಪ್ರಮುಖ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ಬೋಡ್‌ಕಳಿ ಅಥವಾ ಬೋಡಾಟನ್ನು ವಿನೋದ ನೃತ್ಯ ಎನ್ನಬಹುದು. ನಿಗದಿತ ದಿನದಂದು ಊರಿನ ಅಂಬಲದಲ್ಲಿ ಹಬ್ಬದ ಕಟ್ಟಳೆ ಆರಂಭವಾಗುತ್ತದೆ. ಅಂದಿನಿಂದ ನಾಲ್ಕು ಅಥವಾ ಆರು ದಿನಗಳ ಕಾಲ ಹಬ್ಬದ ಹಾಡುಗಳ ಪೂರ್ವ ತಯ್ಯಾರಿ ನಡೆಸಲಾಗುತ್ತದೆ. ನಿಗಧಿಯಾದ ಹಬ್ಬದ ದಿನದಂದು ಊರಿನ ಎಲ್ಲರೂ ಊರಿನ ತಕ್ಕ (ಮುಖ್ಯಸ್ಥ)ನ ಮನೆಯಲ್ಲಿ ಸೇರುತ್ತಾರೆ. ಈ ಸಂದರ್ಭದಲ್ಲಿ ಊರಿನ ಯುವಕರು ಹಾಗೂ ಗಂಡಸರು ಒಡ್ಡ, ಜೋಗಿ, ಚೂಳೆ (ಸೂಳೆ) ಇತ್ಯಾದಿ ವೇಷಗಳನ್ನು ಧರಿಸಿರುತ್ತಾರೆ. ಇಲ್ಲಿ ನಾಲ್ವರು ಹಾಡುಗಾರರು 'ದೋಳ್' (ಡೊಳ್ಳು)ನ್ನು ಬಾರಿಸುತ್ತಾ ಹಾಡುತ್ತಾರೆ. ಈ ಹಿಮ್ಮೇಳದೊಂದಿಗೆ ಹಾಡುತ್ತಾ, ಕುಣಿಯುತ್ತಾ ಹಗಲಿರುಳೆನ್ನದೆ ನೃತ್ಯಗಾರರು ಮನೆಮನೆಗೆ ಹೋಗುತ್ತಾರೆ. ಊರಿನ ಎಲ್ಲಾ ಮನೆಯವರು ಆದರದಿಂದ ಕಳಿಕಾರ (ಬೋಡ್‌ಕಳಿಯ ಕಲಾವಿದ)ರನ್ನು ಸ್ವಾಗತಿಸಿ ತಿಂಡಿ ತಿನಿಸುಗಳನ್ನು ನೀಡಿ ಸತ್ಕರಿಸುತ್ತಾರೆ. ಮನೆಯ ನೆಲ್ಲಕ್ಕಿ ನಡುಬಾಡೆ (ನಡುಮನೆ)ಯಲ್ಲಿ ನಿಂತು ಹಾಡುಗಾರರು ಒಬ್ಬೊಬ್ಬ ವೇಷಧಾರಿಯನ್ನು ಕುರಿತು ಹಾಡುತ್ತಾ ಆಹ್ವಾನಿಸುತ್ತಾರೆ. ಅದಕ್ಕೆ ಸರಿಯಾಗಿ ವೇಷಧಾರಿಗಳು ಬಂದು ತಮ್ಮ ವಿಶಿಷ್ಟ ಹಾವಭಾವಗಳೊಂದಿಗೆ ನರ್ತಿಸುತ್ತಾರೆ. ಈ ಹಿನ್ನಲೆಯಲ್ಲಿ ಕೊಡವ ಜನಪದ ರಂಗಭೂಮಿಯ ಉಗಮವನ್ನು ಇಲ್ಲಿ ಗುರುತಿಸಲಾಗಿದೆ.

ಹಬ್ಬದ ಸಂದರ್ಭದಲ್ಲಿ ಮನೆಗೆ ಆಗಮಿಸುವ ಕಳಿಕಾರನನ್ನು ಮನೆಯೊಡೆಯ ಚೆಂಬಿನಲ್ಲಿ ನೀರನ್ನು ಹಿಡಿದುಕೊಂಡು ಸ್ವಾಗತಿಸುತ್ತಾನೆ. ಮನೆಯ ನೆಲ್ಲಕ್ಕಿ ನಡುಬಾಡೆಗೆ ಹಾಡುತ್ತಾ ಬರುವ ಹಾಡುಗಾರರು ಅಲ್ಲಿ ಅದರ ಒಂದು ಮಾದರಿ ಹೀಗಿದೆ.

"ನಾ ಬಪ್ಪಕೆಕ್ಕಲು ನಲ್ಲ ಸುದಿನ ತಾಲಿಲೆಲ್ಲೇಲಾ
ನಲ್ಲವಂಡ ನಲ್ಲಾಮೆಡೆನ್ನೆಲ್ಲ ಕಂಡ ತಾಲಿಲೆಲ್ಲೇಲಾ
ಬೊಳ್ಳೋಡ್ ಮುಕ್ಕಾಲಿ ಬೊಳ್ಳಿತಳಿಯ ತಾಲಿಲೆಲ್ಲೇಲಾ
ಬೊಳ್ಳಿ ತಳಿಯತ್ ಸಣ್ಣಕ್ಕಿ ಕಂಡ ತಾಲಿಲೆಲ್ಲೇಲಾ

ಸಣ್ಣಕ್ಕಿ ಮೀದಲ್ ಪೊನ್ನ್‌ಬೊಳ್‌ಚ ತಾಲಿಲೆಲ್ಲೇಲಾ
ಪೊನ್ನ್ ಭೊಳ್‌ಚತ್ ಪಯ್ಯುಡ ನೈಯ್ಯ್ ತಾಲಿಲೆಲ್ಲೇಲಾ
ಪಯ್ಯುಡ ನೆಯ್ಯ್‌ಲ್ ಪರತಿ ತಿರಿಯೋ ತಾಲಿಲೆಲ್ಲೇಲಾ
ಡಾತಿರಿ ಬೊಪ್ಪ್‌ಲ್ ಎಲಂಗ್‌ಚಿ ಎಂಗ ತಾಲಿಲೆಲ್ಲೇಲಾ
ದೇವಂಗೆ ಕತ್ತುವೋ ಪೊನ್ನ್ ಬೊಳಕೋ ತಾಲಿಲೆಲ್ಲೇಲಾ
ಬಾಲಂಗೆ ಕತ್ತುವೋ ಪೆತ್ತವ್ವ ತಾಯೋ ತಾಲಿಲೆಲ್ಲೇಲಾ"

"ನಾ ಬರುವ ದಿನವೆಲ್ಲ ಶುಭದಿನ ತಾಲಿಲೆಲ್ಲೇಲಾ
ಒಳ್ಳೆಯವನ ಒಳ್ಳೇತನ ಏನೆಲ್ಲಾ ಕಂಡೆ ತಾಲಿಲೆಲ್ಲೇಲಾ
ಬೆಳ್ಳಿಯ ಮುಕ್ಕಾಲಿ (ಮೂರುಕಾಲಿನ ಮಣೆ)ಯಲ್ಲಿ ಬೆಳ್ಳಿಯ ತಟ್ಟೆ ತಾಲಿಲೆಲ್ಲೇಲಾ
ಸಣ್ಣಕ್ಕಿ ಮೇಲೆ ಚಿನ್ನದ ದೀಪ ತಾಲಿಲೆಲ್ಲೇಲಾ
ಚಿನ್ನದ ದೀಪದಿ ಹಸುವಿನ ತುಪ್ಪ ತಾಲಿಲೆಲ್ಲೇಲಾ
ಹಸುವಿನ ತುಪ್ಪದಿ ಹತ್ತಿಯ ಬತ್ತಿ ತಾಲಿಲೆಲ್ಲೇಲಾ
ಆ ಬತ್ತಿ ಬೆಳಕಲ್ಲಿ ಶೋಭಿಸಿದೆವು ನಾವು ತಾಲಿಲೆಲ್ಲೇಲಾ
ದೇವರಿಗೆ ಬೆಳಗುವುದು ಚಿನ್ನದ ದೀಪ ತಾಲಿಲೆಲ್ಲೇಲಾ
ಬಾಲಕರಿಗೆ ಬೆಳಗುವಳು ಹೆತ್ತವ್ವ ತಾಯಿ ತಾಲಿಲೆಲ್ಲೇಲಾ

ಹೀಗೆಂದು ಹಬ್ಬದ ಸಂದರ್ಭದಲ್ಲಿ ನೆಲ್ಲಕ್ಕಿ ನಡುಬಾಡೆ (ನಡುಮನೆ)ಯ ಸೌಂದರ್ಯವನ್ನು ಚಿತ್ರಿಸುತ್ತಾರೆ.

ಮನೆಯವರ ಸತ್ಕಾರವನ್ನು ಸ್ವೀಕರಿಸಿದ ಕಳಿಕಾರರು "ಪಾರಣ ಮಾನಿಕ್ (ಪಾರಣ ಮಾನಿ ಎಂಬ ಸ್ಥಳಕ್ಕೆ) ನೇರ್‌ತೆ ಬಾರಿಯೋ (ಬೇಗನೆ ಬನ್ನಿ) ತಾಲಿಲೆಲ್ಲೇಲಾ ಎಂದು ಹಾಡುತ್ತಾ ಮತ್ತೊಂದು ಮನೆಗೆ ಸಾಗುತ್ತಾರೆ. ಹೀಗೆ ಸಾಗುವಾಗ ಕಠಿಣ ಹಾದಿಯನ್ನು ಸವೆಸಲು ದೇವರೊಂದಿಗೆ ಬಹಳ ಸರಾಗವಾಗಿ ಒಡನಾಡುತ್ತಾ ದೇವರ ಮಹಿಮೆಯನ್ನು ಕೊಂಡಾಡುತ್ತಾರೆ. ಇದರೊಂದಿಗೆ

ಹಾದಿಯಲ್ಲಿನ ತೊಡಕುಗಳ ವರ್ಣನೆ, ಅವುಗಳನ್ನು ಎದುರಿಸುವ ರೀತಿಯನ್ನು ಈ ಕೆಳಗಿನಂತೆ ಹಾಡುತ್ತಾರೆ.

ಇಲ್ಲಿಂಜ ಕೊಟ್ಟ್‌ನ ಕೊಟ್ಟ್‌ಲ್ಲಿ ಕೇಪ ತಾಲಿಲೆಲ್ಲೇಲಾ
ಎಂಗಡ ದೇವಡ ಸ್ಥಾನಕೆ ಕೇಕು ತಾಲಿಲೆಲ್ಲೇಲಾ
ನಿನ್ನ ನೆನಪಳ ಭದ್ರಕಾಳಮ್ಮೆ ತಾಲಿಲೆಲ್ಲೇಲಾ
ನಿಂಗ ದಯ ಬೋಂಡು ಭದ್ರಕಾಳಮ್ಮೆ ತಾಲಿಲೆಲ್ಲೇಲಾ
ಎಂಗಡ ಚೊಕ್ಕ್‌ಕ್ ಪಾಡುವದಲ್ಲ ತಾಲಿಲೆಲ್ಲೇಲಾ
ದೇವಡ ಚೊಕ್ಕ್‌ನ ಪಾಡಿ ಮುರಿಕ ತಾಲಿಲೆಲ್ಲೇಲಾ
ಚೋಮಂಡ ಚೊಕ್ಕ್‌ನ ಉತ್ತ್ ಮುರಿಕ ತಾಲಿಲೆಲ್ಲೇಲಾ
ದೇವ ದಯಗೊಂಡ್ ಪಾಡುವ ಎಂಗ ತಾಲಿಲೆಲ್ಲೇಲಾ
ಎಂಗಡ ದೇವಂಡ ಸ್ಥಾನಕೆ ಪೋಕ ತಾಲಿಲೆಲ್ಲೇಲಾ
ಆಲಿ ಮಳೆಗೊಂಡ್ ಎನ್ನನೆ ಪೋಪ ತಾಲಿಲೆಲ್ಲೇಲಾ
ಇದಂಗಲ್ಲೇ ಎಂಗಡ ಪೀಲಿ ಕೊಡೆಯೋ ತಾಲಿಲೆಲ್ಲೇಲಾ
ಜಾರಿಕೆ ಬಟ್ಟೆಲ್‌ಡೆನ್ನನೆ ಪೋಪ ತಾಲಿಲೆಲ್ಲೇಲಾ
ಡಾಬರಿ ಈಬರಿ ಕೈ ಊಂದಿ ಪೋಕ ತಾಲಿಲೆಲ್ಲೇಲಾ

"ಇಲ್ಲಿ ಬಾರಿಸುವ ದೋಳಿನ ಶಬ್ಧ, ಎಲ್ಲಿ ಕೇಳುವುದು? ಅದು ನಮ್ಮಯ ದೇವರ ಸ್ಥಾನಕ್ಕೆ ಕೇಳಿಸುವುದು. ಭದ್ರಕಾಳಿ ತಾಯೆ ನಿನ್ನನ್ನು ನೆನೆಯುವೆವು. ನಮ್ಮಯ ಗರ್ವಕ್ಕೆ ನಾವು ಹಾಡುತ್ತಿಲ್ಲ. ಹಾಡು ಹಾಡುತ್ತಾ ದೇವರ ಮುರಿಯೋಣ. ಎತ್ತಿನ ಗರ್ವವ ಗದ್ದೆ ಉತ್ತು ಮುರಿಯೋಣ. ಆಲಿಮಳೆ ಹೊಡೆತದಿ ಹೋಗುವುದೆಂತು? ಅದಕ್ಕಾಗಿಯೇ ದೇವರ ಬೆಳ್ಗೊಡೆಯಿದೆ. ಆ ಕಡೆ ಈ ಕಡೆ ಕೈ ಊರಿ ಜಾರುವಿಕೆಯ ಹಾದಿಯಲ್ಲಿ ಸಾಗೋಣ." ಹೀಗೆ ಸಾಗುವ ಗೀತೆಯಲ್ಲಿ ಆಶ್ಲೀಲತೆಯೂ ನುಸುಳಿಕೊಂಡು ಹಾಡುಗಾರರು ಹಾಡುತ್ತಾ ಹಾದಿಯ ಕಷ್ಟವನ್ನು ಮರೆತು ಸಂಭ್ರಮದಿಂದ ಸಾಗುತ್ತಾರೆ.

ಬೋಡ್ ಹಬ್ಬದ ಆರಂಭ ಹಾಗೂ ಆಚರಣೆಯ ಅವಧಿಗೆ ಸಂಬಂಧಿಸಿದಂತೆ ಪ್ರಸಿದ್ಧ ಉಕ್ತಿಯೊಂದು ಕೊಡವ ಜನಪದರಲ್ಲಿ ಚಾಲ್ತಿಯಲ್ಲಿದೆ.

"ಕುಂದತ್‌ಬೊಟ್ಟ್‌ಲ್ ನೇಂದ ಕುದ್‌ರೆ

ಪಾರಣಮಾನಿಲ್ ಅಳ್‌ಂಜ ಕುದ್‌ರೆ"

"ಕುಂದ" ಎಂಬ ಗ್ರಾಮದ ಬೆಟ್ಟದಲ್ಲಿ ಎದ್ದ ಕುದುರೆ 'ಪಾರಣಮಾನಿ' ಎಂಬ ಗದ್ದೆಯಲ್ಲಿರುವ ಮೈದಾನದಲ್ಲಿ ಕೊನೆಯಾಯಿತು". ಜನಪದರ ಪ್ರತೀತಿಯಂತೆ ಪೊನ್ನಂಪೇಟೆ ಸಮೀಪದ ಕುಂದ ಗ್ರಾಮದ ಬೆಟ್ಟದಲ್ಲಿನ 'ಬೊಟ್ಟ್‌ಲಪ್ಪ' ದೇವಸ್ಥಾನದಲ್ಲಿ ಕಾವೇರಿ ಸಂಕ್ರಮಣದಂದು ಪ್ರಾರಂಭವಾಗುವ ಬೋಡ್‌ಹಬ್ಬವು ದಕ್ಷಿಣ ಕೊಡಗಿನ ಬೇರೆ ಬೇರೆ ಗ್ರಾಮಗಳಲ್ಲಿ ನಡೆಯುತ್ತದೆ. ಜೂನ್ ಒಂದರಂದು ವಿರಾಜಪೇಟೆ ತಾಲೂಕಿನ ಬೇರಳಿನಾಡಿನ 'ಪಾರಣಮಾನಿ' ಎಂಬಲ್ಲಿ ಕೊನೆಗೊಳ್ಳುತ್ತದೆ. ಇಲ್ಲಿ ಈ ಹಬ್ಬವನ್ನು 'ಪಾರಣನಮ್ಮೆ' (ಪಾರಣಹಬ್ಬ) ಎಂದು ಕರೆಯುತ್ತಾರೆ.

ಆಯಾ ಗ್ರಾಮದ ದೇವರುಗಳ ಸಂತೃಪ್ತಿಗಾಗಿ ಈ ಹಬ್ಬವನ್ನು ಆಚರಿಸಲಾಗುವುದು. 'ಪಾರಣ ಹಬ್ಬ'ವು ಕಮ್ಮರ್‌ಟಪ್ಪ, ಭದ್ರಕಾಳಿ ಹಾಗೂ ಅಯ್ಯಪ್ಪ ದೇವರ ಆರಾಧನೆಯ ಅಂಗವಾಗಿ ನಡೆಯುತ್ತದೆ. ಬೋಡ್ ಹಬ್ಬದಲ್ಲಿ 'ಕುದುರೆ'ಗೆ ವಿಶೇಷ ಸ್ಥಾನವಿದೆ. ಬಿದಿರಿನ ಪಟ್ಟಿಗಳಿಂದ ಕುದುರೆಯ ಅಸ್ಥಿಪಂಜರವನ್ನು ಮಾಡಿ ಅದಕ್ಕೆ ಬಟ್ಟೆಯನ್ನು ತೊಡಿಸಿ ಅಲಂಕಾರ ಮಾಡಲಾಗುತ್ತದೆ. ನಿರ್ದಿಷ್ಟ ಮನೆತನದವರು ಮೊದಲೇ ಪ್ರಾರ್ಥಿಸಿಕೊಂಡಂತೆ ಈ ಕಳಿಯನ್ನು ಕಟ್ಟಿ ನರ್ತಿಸಬೇಕೆಂಬ ಅಲಿಖಿತ ನಿಯಮವಿದೆ. ಕುದುರೆಯ ಬೆನ್ನಿನ ಭಾಗದಲ್ಲಿ ಮೈತೂರಿಸಿ ಕುದುರೆಯನ್ನು ದೇಹಕ್ಕೆ ಹೊಂದಿಸಿ ಎತ್ತಿಕೊಳ್ಳಲಾಗುತ್ತದೆ. ಇದನ್ನು ಕೊಡವ ಭಾಷೆಯಲ್ಲಿ 'ಕುದ್‌ರೆ ಎಡ್‌ಪೊ' ಎನ್ನುವರು. ಈ ಕುದುರೆಯನ್ನು ಹೊರುವ ವ್ಯಕ್ತಿ ಶುದ್ಧ ಮುದ್ರಿಕೆಯಲ್ಲಿದ್ದು; ಕೊಡವ ಸಾಂಪ್ರದಾಯಿಕ ಉಡುಪಾದ ಬಿಳಿಯ ವರ್ಣದ ಕುಪ್ಯಚೇಲೆ ಮಂಡೆತುಣಿಯನ್ನು ಧರಿಸಿರುತ್ತಾರೆ. ಊರಿನ ಅಂಬಲಗಳಲ್ಲಿ ಈ ಕುದುರೆ ವೇಷಗಳನ್ನು ಕಟ್ಟಲಾಗುತ್ತದೆ. ದುಡಿ ಕೊಟ್ಟ್, ಎರವ ಚೀನಿ, ದೋಳ್ ವಾದ್ಯಗಳ ಹಿಮ್ಮೇಳದೊಂದಿಗೆ ತಾಲಿಪಾಟ್ ನ ನಾದಕ್ಕೆ ತಕ್ಕಂತೆ ವೇಷಧಾರಿಗಳು

ನರ್ತಿಸುತ್ತಾರೆ. ಪುಟ್ಟ ಹೆಜ್ಜೆ ಹಾಕುತ್ತಾ, ಹಿಂದಕ್ಕೂ ಮುಂದಕ್ಕೂ ಸಾಗುತ್ತಾ, ಕೀಲು ಕುದುರೆಯ ಕುಣಿತದಂತೆ ಕುಣಿಯುತ್ತಾರೆ. ಮೃದುಗತಿಯ ಹಾವಭಾವದೊಂದಿಗೆ ಸಾಗುವ ಈ ಕುದುರೆ ಟ್ಯಾಬ್ಲೋದಂತೆ ಕಾಣುತ್ತದೆ. ಹೀಗೆ ಕುಂದತ್ ಬೊಟ್ಟ್‌ನಲ್ಲಿ ಹುಟ್ಟಿದ ಕುದುರೆ ಕೊಡಗಿನ ಕೊನೆಯ ಬೋಡ್ ಹಬ್ಬವಾದ 'ಪಾರಣನಮ್ಮೆ' ಯ ಸಂದರ್ಭದಲ್ಲಿ 'ಪಾರಣಮಾನಿ' ಯಲ್ಲಿ ಕೊನೆಗೊಳ್ಳುತ್ತದೆ. ಕೊಡಗಿನಲ್ಲಿ ನಡೆಯುವ ಇತರ ಬೋಡ್ ಹಬ್ಬಗಳಲ್ಲಿ ಮೊದಲೇ ಬೆತ್ತದಿಂದ ಸಿದ್ಧಗೊಳಿಸಿರುವ ಕುದುರೆಯ ಅಸ್ಥಿಪಂಜರವನ್ನು ಬಳಸಲಾಗುತ್ತದೆ. ಆದರೆ ಜೂನ್ ಒಂದರಂದು ನಡೆಯುವ ಪಾರಣಹಬ್ಬದಲ್ಲಿ ಬಿದಿರಿನ ಕುದುರೆಯನ್ನು ಕಟ್ಟಲಾಗುತ್ತದೆ. ನಿಗದಿತ ದಿನದಂದು ಕುದುರೆಯನ್ನು ಹೊತ್ತುಕೊಳ್ಳುವವರು 'ಕುದ್‌ರೆ ಮಂಡ' (ಕುದುರೆ ಕಟ್ಟಲು ನಿಗದಿ ಮಾಡಿರುವ ಬಿದಿರು ಮೆಳೆಯ ಗುಂಪು) ಇರುವ ಸ್ಥಳಕ್ಕೆ ಹೋಗಿ ಅದಕ್ಕೆ ಬೇಕಾದ ನಿಗಧಿತ ಸಂಖ್ಯೆಯ ಬಿದಿರುಗಳನ್ನು ಕತ್ತರಿಸಿ ತಂದು ಕಟ್ಟಲಾಗುತ್ತದೆ. ಉಳಿದ ದಿನಗಳಲ್ಲಿ ಇಲ್ಲಿಂದ ಬಿದಿರು ಕಡಿದು ತರಬಾರದೆಂದು, ಕತ್ತರಿಸಿದರೆ ರಕ್ತ ಬರುವುದೆಂಬ ನಂಬಿಕೆ ಇದೆ. ಇತ್ತೀಚಿನ ದಿನಗಳಲ್ಲಿ ಬಹುತೇಕ ಕೊಡಗಿನೆಲ್ಲೆಡೆ ಇರುವ ಬಿದಿರು ನಾಶವಾಗಿದ್ದರೂ; ಪ್ರಸ್ತುತ 'ಕುದುರೆ ಮಂಡ' ಯಾವುದೇ ತೊಂದರೆ ಅನುಭವಿಸದೆ ನಳನಳಿಸುತ್ತಿದೆ. ಇದು ಇಲ್ಲಿನ ದೈವೀ ಶಕ್ತಿಯ ಪ್ರಭಾವ ಎಂದು ನಂಬಲಾಗಿದೆ. ಇದರಂತೆ ಬಿದಿರಿನ ಆನೆಯನ್ನು ಕಟ್ಟುವ ವಿಶೇಷ ಆಚರಣೆ ಈ ಹಬ್ಬದಲ್ಲಿ ಮಾತ್ರ ಕಾಣುತ್ತದೆ. ಅಯ್ಯಪ್ಪನ ವಾಹನ ಈ ಆನೆ ಎಂಬ ನಂಬಿಕೆ ಇಲ್ಲಿನ ಜನರದು. ಆನೆಯನ್ನು ಹೊತ್ತಿರುವ ವ್ಯಕ್ತಿ ಕುದುರೆಯನ್ನು ಹೊತ್ತು ನರ್ತಿಸುವ ವೇಷಧಾರಿಯಂತೆಯೇ ನರ್ತಿಸುತ್ತಾನೆ. ಹಬ್ಬದ ಕೊನೆಯ ಹಂತವೆಂಬಂತೆ ಬೋಡ್‌ಕಳಿಕಾರರು, ಆನೆ ಮತ್ತು ಕುದುರೆಯನ್ನು ಹೊತ್ತ ವೇಷಧಾರಿಗಳು 'ಪಾರಣಮಾನಿ' ಎಂಬ ಗದ್ದೆಯಲ್ಲಿರುವ ಮೈದಾನದಲ್ಲಿ ಸೇರಿ ನರ್ತಿಸುತ್ತಾರೆ. ಈ ನೃತ್ಯದ ನಂತರ ಅಂತಿಮವಾಗಿ ಕುದುರೆ ಮತ್ತು ಆನೆಯ ಪ್ರತಿಕೃತಿಯನ್ನು ಕಡಿಯಲಾಗುತ್ತದೆ. ಇದು ಪಾರಣ ಹಬ್ಬಕ್ಕೆ ಸೀಮಿತವಾದ ವಿಶೇಷ ಆಚರಣೆಯಾಗಿದೆ. ಕೆಲವು ಬೋಟ್ ಹಬ್ಬಗಳಲ್ಲಿ ಭದ್ರಕಾಳಿ ದೇವಿಯ ಆರಾಧನೆಯ ಅಂಗವಾಗಿ ಪಣಿಕ ಅಥವಾ ಬಣ್ಣ ಜನಾಂಗಕ್ಕೆ ಸೇರಿದ ಜನರು ಬಿದಿರಿನಿಂದ ದೇವಿಯ ಪ್ರತಿಕೃತಿಯನ್ನು ತಯಾರಿಸುತ್ತಾರೆ. ಅದನ್ನು ಕೆಂಪು ಬಣ್ಣದ ವಸ್ತ್ರ, ತೆಂಗಿನ ಗರಿ ಹಾಗೂ

ಹೂವುಗಳಿಂದ ಅಲಂಕರಿಸಲಾಗುತ್ತದೆ. ಇದನ್ನು ಕೊಡವ ಭಾಷೆಯಲ್ಲಿ 'ಮೊಗ' ಎನ್ನುತ್ತಾರೆ. ಕುದುರೆಯನ್ನು ಹೊತ್ತ ವೇಷಧಾರಿಗಳೊಂದಿಗೆ ಈ "ಮೊಗ"ವನ್ನು ಹೊತ್ತ ಪಣಿಕ / ಬಣ್ಣ ಜನಾಂಗದ ವ್ಯಕ್ತಿ ಹಿಮ್ಮೇಳಕ್ಕೆ ಸರಿಯಾಗಿ ನರ್ತಿಸುತ್ತಾನೆ.

ಬೋಡ್‌ನಮ್ಮೆರ ಆಟ್(ನೃತ್ಯ)ನಲ್ಲಿ ಹಾಡುವ ನೃತ್ಯಗೀತೆಗಳಲ್ಲಿ ದೇವರೊಡನೆ ಆತ್ಮೀಯತೆಯಿಂದ ಒಡನಾಡುವ, ಗೇಲಿಮಾಡುವ ಸಂಗತಿ ಎದ್ದು ಕಾಣುತ್ತದೆ. ಅಲ್ಲಲ್ಲಿ ಅಶ್ಲೀಲ ಪದಗಳು ಢಾಳಾಗಿ ಗೋಚರಿಸುತ್ತವೆ.

"ತಾಲಿಯಲೇರಳ ಲೇರಳಲೆಲ್ಲೋ ತಾಲಿಲೆಲ್ಲೇಲಾ
ಕಮ್ಮರಟಪ್ಪಂಡ ಪಾರಣ ಬೋಡೋ ತಾಲಿಲೆಲ್ಲೇಲಾ
ಭದ್ರಕಾಳಮ್ಮೆರ ಪಾರಣ ಬೋಡೋ ತಾಲಿಲೆಲ್ಲೇಲಾ

....

ಆಡಿ ಆಡಿ ಬಾರೋ ಚಿಕ್ಕಮ ಜೋಗಿ ತಾಲಿಲೆಲ್ಲೇಲಾ
ನೀನೊಂದು ಮೂಲೆಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ
ಪಾರಣಮಾನಿಕ್ ನೇರತೆ ಬಾರಿಯೋ ತಾಲಿಲೆಲ್ಲೇಲಾ

....

ಪಚ್ಚೆ ಪಲಪಿಯ ಪಾಡನ ಎಂಗ ತಾಲಿಲೆಲ್ಲೇಲಾ
ಇನ್ನನೊರ್‌ತರ ಪಾರಣ ಪಾಟೋ ತಾಲಿಲೆಲ್ಲೇಲಾ
ಕುಂದತ್ ಬೊಟ್ಟ್‌ಲ್ ಮಂದಿರ ..... ತಾಲಿಲೆಲ್ಲೇಲಾ
ಕ್‌ಭೂಮಿ ನೋಟಿತ್ ಬೇರ್‌ಟ್ಟ ..... ತಾಲಿಲೆಲ್ಲೇಲಾ
ಆಕಾಶ ನೋಟಿತ್ ಕೊಡಿಬೆಚ್ಚ ...... ತಾಲಿಲೆಲ್ಲೇಲಾ..
ಕಮ್ಮರಾಟಪ್ಪಂಡ ಬೊಳ್ಳರಿ .... ತಾಲಿಲೆಲ್ಲೇಲಾ
ಭದ್ರಕಾಳಿ ಅಮ್ಮೆರ ಪಿಚ್ಚೊಳೆ ...... ತಾಲಿಲೆಲ್ಲೇಲಾ[೧೦]"

"ತಾಲಿಯ ಲೇರಳ ಲೇರಳ ಲೆಲ್ಲೋ ತಾಲಿಲೆಲ್ಲೇಲಾ" ಎಂಬ ಸೊಲ್ಲಿನೊಂದಿಗೆ ಪ್ರಾರಂಭವಾಗುವ ಈ ಗೀತೆಯಲ್ಲಿ ಕಮ್ಮರಟಪ್ಪ, ಭದ್ರಕಾಳಿ ಹಾಗೂ ಅಯ್ಯಪ್ಪ ದೇವರ ಸಂತೃಪ್ತಿಗಾಗಿ ಹಾಡಿ ಕುಣಿಯೋಣ ಎನ್ನಲಾಗುತ್ತದೆ. ಚಿಕ್ಕಮ ಜೋಗಿ,ಬೈರಮ ಜೋಗಿ, ವಡ್ಡರ ತಿಮ್ಮ, ಮಾಯತ ಚೂಳೆ(ಮಾಯದ

ಸೂಳೆ), ಪಾಪರ ಜೋಗಿ, ಪಾಲೆ ಕರುಂಬ, ಕೋಡಂಗಿ ದಾಸ ಹೀಗೆ ಹಲವು ವೇಷಧಾರಿಗಳನ್ನು ಒಬ್ಬರ ನಂತರ ಒಬ್ಬರಾಗಿ ಹಾಡುತ್ತಾ ಕರೆಯುತ್ತಾರೆ. ಅದರ ಒಂದು ಮಾದರಿ- ಹೀಗಿದೆ.

"ಆಡಿ ಆಡಿ ಬಾರೋ ಚಿಕ್ಕಮ ಜೋಗಿ ತಾಲಿಲೆಲ್ಲೇಲಾ
ಚಿಕ್ಕಮ ಜೋಗಿರ ಚಿಂಗಾರತಾಟೋ ತಾಲಿಲೆಲ್ಲೇಲಾ
ಚಿಮ್ಮಿ ಚಿಮ್ಮಿ ಮಕ್ಕ ಚಿಮ್ಮುಣಿ ಮಕ್ಕ ತಾಲಿಲೆಲ್ಲೇಲಾ
ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ
ಈಂಡ ಕೂಡೆ ಬಾರೋ ಬೈರಮ ಜೋಗಿ ತಾಲಿಲೆಲ್ಲೇಲಾ
ಬಾಡೆಕ್ ಬಪ್ಪಕ ಬೆನ್ಸ್ಟ್ ಬಾರೋ ತಾಲಿಲೆಲ್ಲೇಲಾ
ಪಟ್ಟಣ ಬೇವಕ ಎಲ್ಲಿಂಜ ಜೋಗಿ ತಾಲಿಲೆಲ್ಲೇಲಾ
ನೀನೊಂದು ಮೂಲೇಲ್ ಕೂತುಕೋ ಜೋಗಿ ತಾಲಿಲೆಲ್ಲೇಲಾ
ಈಂಡ ಕೂಡೆ ಬಾರೋ ಪಾಪರ ಜೋಗಿ ತಾಲಿಲೆಲ್ಲೇಲಾ
ಪತ್ತ್ ಪರೆಲಿಂಜ ಪಾಪರೆಲಿಂಜ ತಾಲಿಲೆಲ್ಲೇಲಾ
ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ
ಈಂಡ ಕೂಡೆ ಬಾರೋ ಮುದ್ದು ಕೋಡಂಗಿ ತಾಲಿಲೆಲ್ಲೇಲಾ
ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ
ಈಂಡ ಕೂಡೆ ಬಾರೋ ಮಾಯಲ ಚೂಳೆ ತಾಲಿಲೆಲ್ಲೇಲಾ
ಮಾಯತ ಚೂಳೆರ ಮಮ್ಮಾಯತಾಟೋ ತಾಲಿಲೆಲ್ಲೇಲಾ
ಈಂಡ ಕೂಡೆ ಬಾರೋ ಒಡ್ಡಡ ತಿಮ್ಮ ತಾಲಿಲೆಲ್ಲೇಲಾ
ತಿಮ್ಮಂಡ ತಿಮ್ಮಿರ ಒಪ್ಪಾರ ನೋಟೊ ತಾಲಿಲೆಲ್ಲೇಲಾ
ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ

ಈಂಡ ಕೂಡೆ ಬಾರೋ ಪಾಲೆ ಕರುಂಬ ತಾಲಿಲೆಲ್ಲೇಲಾ

ಕಮ್ಮಾರಟಪ್ಪನೋ ಚಾಕ್‌ನ ಪಾಲೆ ತಾಲಿಲೆಲ್ಲೇಲಾ

ಅಟ್ಟವು ಬುಟ್ಟವು ನೋಟತೆ ಪಾಲೆ ತಾಲಿಲೆಲ್ಲೇಲಾ

ಇಪ್ಪತ್ತು ಮೂವತ್ತು ಜೋಗಿಯಳೆಲ್ಲ ತಾಲಿಲೆಲ್ಲೇಲಾ

ಒಟ್ಟಿಗೆ ಬಂದಿತ್ ಸಂದು ಕುಣಿರೋ ತಾಲಿಲೆಲ್ಲೇಲಾ

"ಕುಣಿ ಕುಣಿದು ಬಾರೋ ಚಿಕ್ಕಮ್ಮ ಜೋಗಿ ತಾಲಿಲೆಲ್ಲೇಲಾ

ಚಿಕ್ಕಮ್ಮ ಜೋಗಿಯ ಸಿಂಗಾರ ಕುಣಿತ ತಾಲಿಲೆಲ್ಲೇಲಾ

ಪುಟ್ಟ ಪುಟ್ಟ ಮಕ್ಕಳು ಪುಟಾಣಿ ಮಕ್ಕಳು ತಾಲಿಲೆಲ್ಲೇಲಾ

ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ

ಇವರೊಂದಿಗೆ ಬಾರೋ ಬೈರಮ ಜೋಗಿ ತಾಲಿಲೆಲ್ಲೇಲಾ

ನಡುಬಾಡೆಗೆ ಬರುವಾಗ ಬೆನ್ನು ಹಾಕಿ ಬಾರೋ ತಾಲಿಲೆಲ್ಲೇಲಾ

ಪಟ್ಟಣ ಉರಿವಾಗ ಎಲ್ಲಿದ್ದೆ ಜೋಗಿ ತಾಲಿಲೆಲ್ಲೇಲಾ

ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ

ಇದರೊಂದಿಗೆ ಬಾರೋ ಪಾಪರ ಜೋಗಿ ತಾಲಿಲೆಲ್ಲೇಲಾ

ಹತ್ತು ಗುಹೆಯಲ್ಲಿದ್ದೆ ಹಾಲಿನ ಗುಹೆಯಲ್ಲಿದ್ದೆ ತಾಲಿಲೆಲ್ಲೇಲಾ

ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ

ಇವರೊಂದಿಗೆ ಬಾರೋ ಮುದ್ದು ಕೋಡಂಗಿ ತಾಲಿಲೆಲ್ಲೇಲಾ

ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ

ಇವರೊಂದಿಗೆ ಬಾರೋ ಮಾಯತ ಸೂಳೆ ತಾಲಿಲೆಲ್ಲೇಲಾ

ಮಾಯದ ಸೂಳೆಯ ಮಹಾಮಾಯದ ಕುಣಿತ ತಾಲಿಲೆಲ್ಲೇಲಾ

ಇವರೊಂದಿಗೆ ಬಾರೋ ಒಡ್ಡರ ತಿಮ್ಮ ತಾಲಿಲೆಲ್ಲೇಲಾ

ತಿಮ್ಮ ತಿಮ್ಮಿಯ ಅನ್ಯೋನ್ಯತೆಯ ನೋಡಿ ತಾಲಿಲೆಲ್ಲೇಲಾ
ನೀನೊಂದು ಮೂಲೇಲಿ ಕೂತುಕೋ ಜೋಗಿ ತಾಲಿಲೆಲ್ಲೇಲಾ
ಇವರೊಂದಿಗೆ ಬಾರೋ ಪಾಲೆ ಕರುಂಬ ತಾಲಿಲೆಲ್ಲೇಲಾ
ಕಮ್ಮಾರಟಪ್ಪನು ಸಾಕಿದ ಪಾಲೆ ತಾಲಿಲೆಲ್ಲೇಲಾ
ಮೇಲೆ ಕೆಳಗೆ ನೋಡಬೇಡ ಪಾಲೆ ತಾಲಿಲೆಲ್ಲೇಲಾ
ಇಪ್ಪತ್ತು ಮೂವತ್ತು ಜೋಗಿಯರೆಲ್ಲ ತಾಲಿಲೆಲ್ಲೇಲಾ
ಒಟ್ಟಿಗೆ ಬಂದು ಸೇರಿ ಕುಣಿಯಿರೋ ತಾಲಿಲೆಲ್ಲೇಲಾ

ಹೀಗೆ ಸಾಗುವ ಈ ಗೀತೆಗೆ ತಕ್ಕಂತೆ ಒಬ್ಬೊಬ್ಬರಾಗಿ ವೇಷಧಾರಿಗಳು ಬಂದು ನಡುಮನೆಯಲ್ಲಿ ತಮ್ಮ ವಿಶಿಷ್ಟ ಹಾವಭಾವದೊಂದಿಗೆ ನರ್ತಿಸಿ ನಿರ್ಗಮಿಸುತ್ತಾರೆ. ನೃತ್ಯರೂಪಕದಂತಿರುವ ಈ ಕುಣಿತವು ಕೊಡವ ಜನಪದ ನೃತ್ಯಗಳಲ್ಲಿ ಬಹಳ ವಿಶಿಷ್ಟವಾಗಿದೆ.

ಈ ನೃತ್ಯ ಗೀತೆಯ ದ್ವಿತೀಯ ಹಂತದಲ್ಲಿ ಕಮ್ಮರಟಪ್ಪ, ಭದ್ರಕಾಳಿ ದೇವಿಯರೊಂದಿಗೆ ಸರಾಗವಾಗಿ ಒಡನಾಡುತ್ತಾ ಅವರ ಗುಪ್ತಾಂಗಗಳನ್ನು ಕುರಿತು ಹಾಡಲಾಗುತ್ತದೆ. ಹೀಗೆ ಮನುಷ್ಯನ ಶೃಂಗಾರ ರತಿ ಆಸಕ್ತಿಯ ಘಟಕಗಳನ್ನು ಕುರಿತು ನಿಸ್ಸಂಕೋಚವಾಗಿ ಹಾಡಲಾಗುತ್ತದೆ. ಅದುಮಿಟ್ಟ ಭಾವನೆಗಳನ್ನು ವ್ಯಕ್ತಪಡಿಸುವ ಈ ಕ್ರಮವನ್ನು ನಿತ್ಯ ಜೀವನದಲ್ಲಿ ಈಗ ಯಾರೂ ಸಹಿಸುವುದಿಲ್ಲ. ಆದರೆ ಬೋಡ್ ಹಬ್ಬದ ಸಂದರ್ಭದಲ್ಲಿ ಈ ರೀತಿಯ ಸ್ವೇಚ್ಛೆಯನ್ನು, ತುಂಟಾಟವನ್ನು ಸಹಿಸಿಕೊಳ್ಳುವ ಪದ್ಧತಿ ಕೊಡವ ಜನಪದರಲ್ಲಿ ಇಂದಿಗೂ ಉಳಿದುಕೊಂಡಿದೆ.

ಸುಮಾರು ೬೦ ವರ್ಷಗಳ ಹಿಂದೆ ದೇವರಿಗೆ ಹರಕೆ ಹೊತ್ತವರು ಮೌನ ವ್ರತ ಆಚರಿಸಿ ಹರಕೆ ಸಲ್ಲಿಸುವ ಬೋಡಾಟ್‌ಗಳು ಕೆಲವು ದೇವಸ್ಥಾನಗಳಲ್ಲಿ ಇದ್ದು ಇತ್ತೀಚೆಗೆ ಕಣ್ಮರೆಯಾಗಿದೆ. ಸಣ್ಣ ಪುಲಿಕೋಟು ಗ್ರಾಮದ ಭಗವತಿ ದೇವಸ್ಥಾನದಲ್ಲಿ ಈ ರೀತಿಯ ಬೋಡಾಟ್ ಇದ್ದಿತ್ತೆಂದು ಹೇಳಲಾಗಿದೆ. ಹರಕೆ ಹೊತ್ತವರು ವ್ರತಧಾರಿಗಳಾಗಿ ನಿರ್ದಿಷ್ಟ ದಿನದಂದು

ಕಾಡಿನಲ್ಲಿ ಹಲಸಿನ ಮರದ ಕೆಳಗೆ ಮಲಗಿ ಮುಂಜಾನೆ ದೇವರು ಜಳಕ ಮಾಡುವ ನಿರ್ದಿಷ್ಟ ನದಿಯ ನಿರ್ದಿಷ್ಟ ಗುಂಡಿಯಲ್ಲಿ ಜಳಕ ಮಾಡಿ ಬರುತ್ತಾರೆ. ದೇವಸ್ಥಾನದ ಮುಂದೆ ಔಡಲ ಮರದ ಸೌದೆಯನ್ನು ಸುಟ್ಟು ಬೂದಿ ಮಾಡುತ್ತಾರೆ. ಅದರ ಮಸಿಯನ್ನು ಔಡಲ ಎಣ್ಣೆಯಲ್ಲಿ ಕಲಸಿ ಮೈಗೆಲ್ಲಾ ಸವರಿಕೊಳ್ಳುತ್ತಾರೆ. ಉಳಿದ ಬೂದಿಯನ್ನು ಅಕ್ಕಿಯೊಂದಿಗೆ ಬೆರೆಸಿ ಸಣ್ಣ ಪೊಟ್ಟಣಗಳನ್ನಾಗಿ ಮಾಡಿ ಜೋಳಿಗೆಯಲ್ಲಿ ಇರಿಸಿಕೊಳ್ಳುತ್ತಾರೆ.

ವ್ರತಧಾರಿಗಳು ಸೊಂಟದ ಸುತ್ತ ಬಾಳೆಯ ಎಲೆಗಳನ್ನು ಕಟ್ಟಿಕೊಳ್ಳುತ್ತಾರೆ. ತಲೆಗೆ ಬಾಳೆಯ ತರಗಿನ ಉದ್ದನೆಯ ಕೋಡಂಗಿ ಟೊಪ್ಪಿಯನ್ನು ಧರಿಸಿರುತ್ತಾರೆ. ದೇವಸ್ಥಾನದ ಮುಂದೆ ಸೇರಿದ ವೇಷಧಾರಿಗಳು ನರ್ತಿಸುತ್ತಾರೆ. ಹೀಗೆ ನರ್ತಿಸುತ್ತಾ ತಮ್ಮ ಜೋಳಿಗೆಯಿಂದ ಬೂದಿ ಮಿಶ್ರಿತ ಅಕ್ಕಿಯ ಪೊಟ್ಟಣಗಳನ್ನು ಭಕ್ತಾದಿಗಳತ್ತ ಎರಚುತ್ತಾ ೩ ರಿಂದ ೭ ಸುತ್ತು ನರ್ತಿಸುತ್ತಾರೆ. ಅದನ್ನು ಸ್ವೀಕರಿಸಿದ ಜನರು ತಮ್ಮ ಮನೆಯ ಮುಂಭಾಗ ಹಾಗೂ ದನಗಳ ಕೊಟ್ಟಿಗೆಗೆ ಕಟ್ಟುತ್ತಾರೆ. ಇದು ಶ್ರೀರಕ್ಷೆ ಇದ್ದಂತೆ ಎಂಬ ನಂಬಿಕೆ ಅಲ್ಲಿನ ಜನಪದರದು.[೧೧] ಇತ್ತೀಚೆಗೆ ಇದು ಕಣ್ಮರೆಯಾಗಿದೆ.

ವಿರಾಜಪೇಟೆ ಸಮೀಪದ ಚೆಂಬೆಬೆಳ್ಳೂರಿನ ಭದ್ರಕಾಳಿ ದೇವಿಯ ದೇವಸ್ಥಾನದಲ್ಲಿ ಬೋಡ್ ನಮ್ಮೆಯ ಸಂದರ್ಭದಲ್ಲಿ ಬೋಡ್ ಕಳಿಯನ್ನು ನರ್ತಿಸುತ್ತಾರೆ. ಇಲ್ಲಿ ವಿಭಿನ್ನ ವೇಷಧಾರಿಗಳು ನರ್ತಿಸಿ ರಂಜಿಸುತ್ತಾರೆ. ಪೊನ್ನಂಪೇಟೆ ಸಮೀಪದ ಬೆಕ್ಕೆ ಸೊಡ್ಲೂರ್‌ನ ಮಂದತವ್ವ ದೇವಸ್ಥಾನದಲ್ಲಿ ನಡೆಯುವ ಮಂದತವ್ವನ ಬೋಡ್‌ಹಬ್ಬದಲ್ಲಿನ ಬೋಡ್ ಕಳಿ ಮತ್ತಷ್ಟು ವಿಶಿಷ್ಟತೆಯಿಂದ ಕೂಡಿದೆ. ಇತರ ಬೋಡ್ ಹಬ್ಬಗಳಲ್ಲಿ ವೇಷಧಾರಿಗಳು ಮನೆ ಮನೆಗೆ ಹೋಗಿ ನರ್ತಿಸಿದರೆ ಇಲ್ಲಿ ದೇವಸ್ಥಾನದ ಹೊರ ಆವರಣದಲ್ಲಿ ಬೆಂಕಿಯ ಕೊಂಡವನ್ನು ನಿರ್ಮಿಸಿ ಅದರ ಮುಂದೆ ನರ್ತಿಸಲಾಗುತ್ತದೆ. ಒಡ್ಡ, ಪಠಾಣಿ, ಕೌಡಿಕಾರ ಹೀಗೆ ವಿಭಿನ್ನ ವೇಷಧಾರಿಗಳು ಬೆಳಗಿನ ಜಾವದವರೆಗೂ ನರ್ತಿಸುತ್ತಾರೆ. ವಿಶಿಷ್ಟವಾದ ಜಾನಪದ ಸೊಗಡನ್ನು ಹೊಂದಿರುವ ಬೋಡ್ ಹಬ್ಬ ಹಾಗೂ ಬೋಡ್‌ಕಳಿ ಹಲವು ಬದಲಾವಣೆಗಳನ್ನು ಒಳಗೊಂಡು ಕೊಡಗಿನಲ್ಲಿ ಇಂದಿಗೂ ಬಹಳ ಸಂಭ್ರಮದಿಂದ ಆಚರಿಸಲ್ಪಡುತ್ತದೆ.

ಊ) ಜೋಂಯಿಕಳಿ :-

ಜೋಂಯಿಕಳಿ ಅಥವಾ ಜೋಗಿ ಕುಣಿತ ಹುತ್ತರಿ ಹಬ್ಬದ ಸಂದರ್ಭದಲ್ಲಿ ನರ್ತಿಸುವ ನೃತ್ಯವಾಗಿದೆ. ಬೋಡ್ ಕಳಿಯಂತೆ ಈ ನೃತ್ಯದಲ್ಲೂ ವೇಷಧಾರಿಗಳ ಪಾತ್ರ ಪ್ರಮುಖವಾಗಿದ್ದರೂ; ದೈವಿಕ ಹಿನ್ನಲೆ ಪ್ರಮುಖ ಪಾತ್ರವಹಿಸುತ್ತದೆ. ಹುತ್ತರಿ ಹಬ್ಬದ ಸಂದರ್ಭದಲ್ಲಿ ಊರಿನ ಮಂದ್(ಮೈದಾನ)ನಲ್ಲಿ ಊರ ಜನರೆಲ್ಲರೂ ಸೇರಿ ಹುತ್ತರಿ ಕೋಲಾಟ, ಪರೆಯಕಳಿ ನೃತ್ಯಗಳನ್ನು ನರ್ತಿಸಿದ ನಂತರ ಜೋಂಯಿಕಳಿಯಲ್ಲಿ ಭಾಗವಹಿಸುತ್ತಾರೆ. ಇಲ್ಲಿ ಭಾಗವಹಿಸುವ ಕಲಾವಿದರು ಸೊಂಟದ ಸುತ್ತ ಬಾಳೆಲೆಯ ಒಣ ತರಗುಗಳನ್ನು ಕಟ್ಟಿಕೊಳ್ಳುತ್ತಾರೆ. ದೊಡ್ಡ ಮೀಸೆ, ಕೊರಳಿಗೆ ಚೆಂಡು ಹೂವಿನ ಮಾಲೆ ಧರಿಸಿರುತ್ತಾರೆ. ತಲೆಗೆ ಹರಿದ ಚಾಪೆಯಿಂದ ತಯಾರಿಸಿದ ಉದ್ದನೆಯ ಟೊಪ್ಪಿಯನ್ನು ಧರಿಸಿರುತ್ತಾರೆ. ಭುಜದಲ್ಲಿ ಬೂದಿ ತುಂಬಿದ ಚೀಲವನ್ನು ನೇತು ಹಾಕಿಕೊಂಡಿರುತ್ತಾರೆ. ಕೈಯಲ್ಲಿ 'ಗಿಡಅಂಗರೆ' (ಚರ್ಮಕ್ಕೆ ತಾಗಿದರೆ ತುರಿಕೆಯನ್ನುಂಟುಮಾಡುವ ಒಂದು ಬಗೆಯ ಸಸ್ಯ)ಯ ಹೂಗಳ ಗೊಂಚಲನ್ನು ಹಿಡಿದುಕೊಂಡಿರುತ್ತಾರೆ. ಈ ಜೋಂಯಿಗಳೊಂದಿಗೆ ಜೋಂಯಿಯ ಜೊತೆಗಾರ್ತಿ 'ಜೋಂಯಿ ಸೂಳೆ' ('ಮಾಂಯದ ಸೂಳೆ' ಎಂದು ಕರೆಯಲಾಗುತ್ತದೆ.) ಇರುತ್ತಾಳೆ. ಆಕೆ ಕೆಂಪುಬಣ್ಣದ ಸೀರೆ ಹಾಗೂ ವಸ್ತ್ರವನ್ನು ಧರಿಸಿ ಕೈಯಲ್ಲಿ ಕಂಚಿನ ತಾಳವನ್ನು ಹಿಡಿದಿರುತ್ತಾಳೆ. ಜೋಂಯಿ ವೇಷಧಾರಿಗಳನ್ನು ಜೋಂಯಿಮಕ್ಕ (ಜೋಂಯಿಯ ಮಕ್ಕಳು) ಎಂದು ಕರೆಯುತ್ತಾರೆ. ಈ ಎಲ್ಲಾ ವೇಷಗಳನ್ನು ಯುವಕರೇ ಧರಿಸುತ್ತಾರೆ.

ಜೋಂಯಿಕಳಿಯ ನೃತ್ಯಗೀತೆಯನ್ನು 'ಜೋಂಯಿಪಾಟ್' ಎಂದು ಕರೆಯಲಾಗುತ್ತದೆ. 'ತಾಲಿಲೆಲ್ಲೇ ಲೆಲ್ಲೇಲಾ' ಎಂಬ ಸೊಲ್ಲಿನೊಂದಿಗೆ ಆರಂಭವಾಗುವ ಈ ಗೀತೆಗೆ 'ತಾಲಿಪಾಟ್' ಎಂಬ ಹೆಸರು ಇದೆ. ಕೊಡವ ಸಾಂಪ್ರದಾಯಿಕ ಉಡುಪನ್ನು ಧರಿಸಿದ ಎರಡರಿಂದ ಮೂರು ಮಂದಿ ಹಿರಿಯರು ದುಡಿಯನ್ನು ಬಾರಿಸುತ್ತಾ ಈ ನೃತ್ಯಗೀತೆಯನ್ನು ಹಾಡುತ್ತಾರೆ. ಅದಕ್ಕೆ ಅನುಗುಣವಾಗಿ ಜೋಂಯಿ ವೇಷಧಾರಿಗಳು ಹಿಂದಕ್ಕೂ ಮುಂದಕ್ಕೂ ಸಾಗುತ್ತಾ, ಚಪ್ಪಾಳೆ ತಟ್ಟುತ್ತಾ ನರ್ತಿಸುತ್ತಾರೆ. ಸೂಳೆ ವೇಷಧಾರಿಯು ತಾಳವನ್ನು ತಟ್ಟುತ್ತಾ ನರ್ತಿಸುತ್ತಾನೆ. ಈ ನೃತ್ಯದಲ್ಲಿ

ಹೀಗೆ ನರ್ತಿಸಬೇಕೆಂಬ ನಿರ್ದಿಷ್ಟ ವಿನ್ಯಾಸಗಳಿಲ್ಲ.

'ತಾಲಿಲೆಲ್ಲೆ ಲೆಲ್ಲೇಲವ್ವ ತಾಲಿಲೆಲ್ಲೇ ಲೆಲ್ಲೇಲಾ' ಎಂಬ ಪಲ್ಲವಿಯೊಂದಿಗೆ ಪ್ರಾರಂಭವಾಗುವ ತಾಲಿಪಾಟ್,ಜೋಯಿಪಾಟ್ ಎಂದು ಕರೆಯಲ್ಪಡುವ ಈ ನೃತ್ಯ ಗೀತೆಯ ಒಂದು ಮಾದರಿ ಹೀಗೆದೆ.

"ತಾಲಿಯಡೆಂಬದ್ ಎನ್ನತ ತಾಲಿ?
ತಾಲಿ ಪುಳಿಯೆಲ್ಲ ಬೈರಿಮರತ
ತಾಲಿಯಡೆಂಬದ್ ಪಿಚ್ಚೋಳೆ ತಾಲಿ

....

ಅಮ್ಮಕೊಡವಕ್ ತಾಲಿಲ್ಲೆ ಕೇಳೋ
ಆರಜಿ ಬೋಟೋಳಿ ಎನ್ನ ಪುದುಮೆ
ಆರಜಿ ಬೋಟೋಳಿ ಚಂದಪಂಡಾಕ
ಚಂದಪಂಡಾಕತ್ ಇಂಡ್'ಡ ಸೂರೆ
ಮೂಪಾನಿ ಇಂಡೆಲ್ಲ ಏರಿ ಮರ್'ಂಜ
ಓರೋರ ಅಳೆಲ್ ಐಯ್ಯಂಜಿ ಇಂಡ್
ಐಯ್ಯಂಜಿ ಇಂಡ್'ಕ್ ಪವುಪತ್ತ್ ಕೊಂಬ್
ಕಕ್ಕಳೆ ಇಂಡ್'ಕ್ ಪಿಚ್ಚೋಳೆ ಕೊಂಬ್
ಪಿಚ್ಚೋಳೆ ಕೊಂಬ್'ಕ್ ಬೊಳ್ಳಿಡ ಗೆಜ್ಜೆ
ಬೊಳ್ಳಿಡ ಗೆಜ್ಜೆಕ್ ಪೊನ್ನ್ ಮುರ್'ವು
ಗೆಜ್ಜೆ ಕುಲ್'ಕಿಯಂಡಾಡುವ ಇಂಡ್"...

ಹೀಗೆ ಸಾಗುವ ಈ ಗೀತೆಯಲ್ಲಿ ಪ್ರಕೃತಿಯ ಪ್ರತಿಯೊಂದು ಘಟಕಗಳ ಸೂಕ್ಷ್ಮ ಅವಲೋಕನ ಬಹಳ ಸುಂದರವಾಗಿ ಮೂಡಿಬಂದಿದೆ. ಚಂದಪಂಡ ಕುಟುಂಬಕ್ಕೆ ಸೇರಿದ ದೊಡ್ಡ ಗದ್ದೆಯಲ್ಲಿ ಏಡಿಗಳ ಸಮೂಹವಿದೆ. ಗದ್ದೆಯ ಒಂದೊಂದು ಬಿಲದಲ್ಲೂ ಐದೈದು ಏಡಿಗಳಿದ್ದು ಅವುಗಳಿಗೆ ಹತ್ತತ್ತು ಕೊಂಬುಗಳಿವೆ. ಕಕ್ಕಳೆ(ಒಂದು ವಿಧದ ದೊಡ್ಡ ಏಡಿ) ಏಡಿಗೆ ಹಿತ್ತಾಳೆಯ ಕೊಂಬಿದ್ದು; ಆ ಕೊಂಬಿಗೆ ಬೆಳ್ಳಿ ಹಾಗೂ ಚಿನ್ನದ ಗೆಜ್ಜೆಗಳಿವೆ. ಅವುಗಳನ್ನು

ಕುಲುಕುತ್ತಾ ಏಡಿಗಳು ಸಂತೋಷದಿಂದ ನರ್ತಿಸುತ್ತವೆ. ಇಲ್ಲಿ ಹಬ್ಬದ ಸಂದರ್ಭದಲ್ಲಿ ಮನುಷ್ಯ ಮಾತ್ರವಲ್ಲದೆ ಗದ್ದೆಯ ಏಡಿಗಳು ಸಂಭ್ರಮದಿಂದ ಪಾಲ್ಗೊಂಡು ನರ್ತಿಸುವ ಜನಪದರ ಕಲ್ಪನೆ ಅದ್ಭುತವಾದದು. ಮುಂದುವರಿಯುತ್ತಾ ಕಲಿಯುಗದಲ್ಲಿ ಉಂಟಾಗಬಹುದಾದ ನೈಸರ್ಗಿಕ ವಿಕೋಪಗಳ ಬಗ್ಗೆ ಜ್ಯೋತಿಷಿಗಳಂತೆ ಹಾಡಲಾಗುತ್ತದೆ. ಈ ಕಾರಣದಿಂದ ಇದನ್ನು 'ಜ್ಯೋತಿಷ್ಯ ಹಾಡು' ಎಂದು ಕರೆಯಲಾಗುತ್ತದೆ. ಊರಿನ ಎಲ್ಲಾ ಸಂಕಷ್ಟಗಳನ್ನು ಪರಿಹರಿಸಲೆಂದು ಈ ಜೋಗಿಗಳು ಬರುವರು ಎಂಬ ಕಲ್ಪನೆ ಜನಪದರಲ್ಲಿದೆ. ಹಿಂದೆ ಕೊಡಗಿನೆಲ್ಲೆಡೆಯಲ್ಲಿ ಚಾಲ್ತಿಯಲ್ಲಿದ್ದ ಈ ನೃತ್ಯ ಪ್ರಸ್ತುತ ಕೊಡಗಿನ ಮಡಿಕೇರಿ ತಾಲೂಕಿನ ಕಾಲೂರು ಮತ್ತು ಮುಕ್ಕೋಡ್ಲು ಗ್ರಾಮಗಳಲ್ಲಿ ಆಚರಣೆಯಲ್ಲಿದೆ.

ಕಾಲೂರು ಗ್ರಾಮದಲ್ಲಿ ಹರಕೆ ಒಪ್ಪಿಸುವ ಸಂಪ್ರದಾಯದಂತೆ, ದೈವೀ ಆರಾಧನೆಯ ಹಿನ್ನಲೆಯಲ್ಲಿ ಈ ನೃತ್ಯ ಇಂದಿಗೂ ಉಳಿದುಕೊಂಡಿದೆ. ಏಳರಿಂದ ಹದಿನೆಂಟು ವರ್ಷಗಳ ಗಂಡು ಮಕ್ಕಳು ಹರಕೆ ಮಾಡಿಕೊಂಡ ಅನ್ವಯ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಿ ನಿಡುವಟ್ಟು ಭದ್ರಕಾಳಿಯ ಆರಾಧನೆಯ ಅಂಗವಾಗಿ ಜೋಯಿಕಳಿಯಲ್ಲಿ ನರ್ತಿಸುವುದರ ಮೂಲಕ ತಮ್ಮ ಹರಕೆಯನ್ನು ಒಪ್ಪಿಸುತ್ತಾರೆ. ಬದುಕಿನಲ್ಲಿ ಹಲವು ತೊಂದರೆ – ತಾಪತ್ರೆ, ಕಾಯಿಲೆ – ಕಸಾಲೆಗಳು ಎದುರಾದ ಸಂದರ್ಭದಲ್ಲಿ ಅವುಗಳಿಂದ ಪಾರಾಗುವ ದಾರಿ ಎಂಬಂತೆ ಈ ಹರಕೆಯನ್ನು ಮಾಡಿಕೊಳ್ಳಲಾಗುತ್ತದೆ. ಹರಕೆ ಒಪ್ಪಿಸಿದ ನಂತರ ಆ ಮಕ್ಕಳು ಉತ್ತಮ ಆರೋಗ್ಯವನ್ನು ಹೊಂದುವರೆಂಬ ನಂಬಿಕೆ ಊರ ಜನರಲ್ಲಿದೆ.

ಕೊಡವರ ಪ್ರಮುಖ ಹಬ್ಬವಾದ ಹುತ್ತರಿಯ ಸಂದರ್ಭದಲ್ಲಿ ಈ ಸಾಂಪ್ರದಾಯಿಕ ನೃತ್ಯ ನಡೆಯುತ್ತದೆ. ಈ ನೃತ್ಯದಲ್ಲಿ ಭಾಗವಹಿಸುವ ಯುವಕರು ಸತತವಾಗಿ ಮೂರು ವರ್ಷಗಳವರೆಗೆ ಭಾಗವಹಿಸಿ ನಾಲ್ಕನೆಯ ವರ್ಷ ಜೋಯಿಸೂಳೆಯ ವೇಷವನ್ನು ಹಾಕುವುದರೊಂದಿಗೆ ತಮ್ಮ ಹರಕೆಯನ್ನು ಪೂರೈಸುತ್ತಾರೆ. ಸಾಂಪ್ರದಾಯಿಕ ಹಾಗೂ ಧಾರ್ಮಿಕ ಹಿನ್ನಲೆಯ ಈ ನೃತ್ಯದಲ್ಲಿ ಪಾಲ್ಗೊಳ್ಳುವ ಮಕ್ಕಳು ಕಠಿಣ ನಿಯಮಗಳನ್ನು, ಮಡಿಯನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಮನೆಯ ಹೊರಭಾಗದಲ್ಲಿ ಬರೀ ನೆಲದಲ್ಲಿ

ಮಲಗುವುದು, ಮಾಂಸಾಹಾರದ ವರ್ಜನೆ, ಹುತ್ತರಿ ಹಬ್ಬದ ವಿಶೇಷ ಉಣಿಸಾದ ತಂಬಿಟ್ಟಿನ ಸೇವನೆಯಂತಹ ನಿಯಮಗಳನ್ನು ಪಾಲಿಸಬೇಕಾಗುತ್ತದೆ.

ಹಬ್ಬದ ದಿನದಂದು ಜೋಯಿಕಳಿಯಲ್ಲಿ ಭಾಗವಹಿಸುವ ನೃತ್ಯಗಾರರು ಮೊದಲೇ ನಿಗಧಿತವಾಗಿರುವ ಒಂದು ಮನೆಯಲ್ಲಿ ಸೇರುತ್ತಾರೆ. ಆ ಮನೆಯಿಂದಲೇ 'ಎತ್ತ್‌ಪೋರಾಟ'[1] ಹೊರಡುತ್ತದೆ. ತಮ್ಮ ವೇಷ ಭೂಷಣಗಳನ್ನು ಆ ಮನೆಯಲ್ಲಿಯೇ ಧರಿಸಿ ಸಿದ್ಧವಾಗುತ್ತಾರೆ.

ಜೋಯಿಕಳಿಯಲ್ಲಿ ಭಾಗವಹಿಸುವ ನೃತ್ಯಗಾರರ ವೇಷಭೂಷಣಗಳು ವಿಶಿಷ್ಟವಾಗಿರುತ್ತದೆ. ಮೈಗೆಲ್ಲಾ ಮಸಿ ಬಳಿದುಕೊಂಡು ಸೊಂಟದ ಸುತ್ತಲೂ ಬಾಳೆಯ ಒಣ ತರಗುಗಳ ಗೊಂಚಲನ್ನು ಕಟ್ಟಿಕೊಂಡಿರುತ್ತಾರೆ. ಕಾಡು ಬೆಕ್ಕಿನ ರೋಮಗಳಿಂದ ಮೀಸೆಯನ್ನು ಮಾಡಿ ಅಂಟಿಸಿಕೊಳ್ಳುತ್ತಾರೆ. ಹರಿದ ಚಾಪೆಯ ಚೂರುಗಳನ್ನು ಬಳಸಿ ತಯಾರಿಸಿದ ಉದ್ದನೆಯ ಕೋಡಂಗಿ ಟೋಪಿಯನ್ನು ಧರಿಸಿರುತ್ತಾರೆ. ಕೊರಳಿನಲ್ಲಿ ಚೆಂಡು ಹೂವಿನ ಮಾಲೆಯನ್ನು ಧರಿಸಿರುತ್ತಾರೆ. ಭುಜದಲ್ಲಿ ಚೀಲ ಒಂದನ್ನು ನೇತು ಹಾಕಿಕೊಂಡು ಅದರಲ್ಲಿ ಭಸ್ಮವನ್ನು ತುಂಬಿಸಿಕೊಂಡಿರುತ್ತಾರೆ. ಮೈಗೆ ತಾಗಿದರೆ ತುರಿಕೆಯನ್ನುಂಟುಮಾಡುವ ಅಂಗರೆ ಗಿಡದ ಹೂವಿನ ಗುಚ್ಛವನ್ನು ಕೈಯಲ್ಲಿ ಹಿಡಿದುಕೊಂಡಿರುತ್ತಾರೆ.

ಇದಿಷ್ಟು ಜೋಯಿಯ ವೇಷಭೂಷಣಗಳಾದರೆ; ಜೋಯಿಯ ಜೊತೆಗಾರ್ತಿಯಾದ ಜೋಯಿ ಸೂಳೆ ಕೆಂಪುಬಣ್ಣದ ಸೀರೆ, ರವಿಕೆಯನ್ನು ತೊಟ್ಟು, ತಲೆಗೆ ಕೆಂಪು ವಸ್ತ್ರವನ್ನು ಕಟ್ಟಿರುತ್ತಾಳೆ. ಕೈಯಲ್ಲಿ ಅಂಗರೆಯ ಗುಚ್ಛವೂ ಇರುತ್ತವೆ. ಕೈಯಲ್ಲಿ ಕಂಚಿನ ತಾಳವನ್ನು ಹಿಡಿದುಕೊಂಡಿರುತ್ತಾಳೆ. ಜೋಯಿ ಕಳಿಯ ನೃತ್ಯಗಾರರ ಗುಂಪನ್ನು ಕೊಡವ ಭಾಷೆಯಲ್ಲಿ ಜೋಯಿಮಕ್ಕ (ಜೋಯಿಯ ಮಕ್ಕಳು) ಎಂದು ಕರೆಯಲಾಗುತ್ತದೆ.

ಎತ್ತ್ ಪೋರಾಟದೊಂದಿಗೆ ಜೋಯಿಮಕ್ಕಳು ನಿಡುವಟ್ಟು ಮುತ್ತ್‌ನಾಡ್ ಮಂದ್‌ಗೆ ತೆರಳುತ್ತಾರೆ. ಹುತ್ತರಿ ಹಬ್ಬದ ಸಂದರ್ಭದಲ್ಲಿ ನರ್ತಿಸಲ್ಪಡುವ ಪುತ್ತರಿ ಕೋಲಾಟ್, ಪರೆಯಕಳಿಯ ನಂತರ ಜೋಯಿಕಳಿ ನೃತ್ಯ

ಈ ನೃತ್ಯದಲ್ಲಿ ಹಿಮ್ಮೇಳವಾಗಿ ಜೋಯಿಪಾಟನ್ನು ಸಾಂಪ್ರದಾಯಿಕ

ಉಡುಪನ್ನು ಧರಿಸಿದ ಹಿರಿಯ ಕೊಡವ ಜನಪದ ಗಾಯಕರು ದುಡಿವಾದ್ಯವನ್ನು ಬಾರಿಸುತ್ತಾ ಹಾಡುತ್ತಾರೆ. ಹಿಮ್ಮೇಳದ ತಾಳಕ್ಕೆ ತಕ್ಕಂತೆ ನೃತ್ಯಗಾರರು ಹಿಂದಕ್ಕೂ ಮುಂದಕ್ಕೂ ಸಾಗುತ್ತಾ ಜೋರಾಗಿ ಚಪ್ಪಾಳೆ ತಟ್ಟುತ್ತಾ ನರ್ತಿಸುತ್ತಾರೆ.

ಜೋಯಿಕಳಿ ನೃತ್ಯಕ್ಕೆ ನಿಗಧಿತವಾದ ಹೆಜ್ಜೆಯ ವಿನ್ಯಾಸಗಳೇನು ಇಲ್ಲ. ಜೋಯಿಗಳೊಂದಿಗೆ ಜೋಯಿ ಸೂಳೆಯು ಕಂಚಿನ ತಾಳಗಳನ್ನು ತಟ್ಟುತ್ತಾ ನರ್ತಿಸುತ್ತಾಳೆ. ವೀಕ್ಷಕರು ನೃತ್ಯಗಾರರನ್ನು ಸುತ್ತುವರಿದು ವೀಕ್ಷಿಸುತ್ತಾರೆ.

ಸುದೀರ್ಘವಾದ ತಾಲಿಪಾಟ್ ನೃತ್ಯಗೀತೆಯ ಮೊದಲ ಭಾಗ ಕೊಡಗಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿವರಣೆಯನ್ನು ಒಳಗೊಂಡಿರುತ್ತದೆ. ಎರಡನೆಯ ಭಾಗ ನೃತ್ಯಗಾರರಾದ ಜೋಯಿಗಳ ಬಗ್ಗೆ ವಿವರಿಸುತ್ತದೆ. ತಾಲಿಯೆಂಬುದು ಯಾವ ತಾಲಿ? ಎಂಬ ಪ್ರಶ್ನೆಯೊಂದಿಗೆ ಹಾಡುವ ಈ ಗೀತೆಯು ವಿವಿಧ ರೀತಿಯ ತಾಲಿಗಳನ್ನು ವಿವರಿಸುತ್ತಾ ಅವುಗಳು ವಿವಿಧ ಜನಾಂಗಗಳಿಗೆ ನಿಗಧಿಯಾಗಿರುವುದನ್ನು ಕುರಿತು ಹೇಳುತ್ತದೆ. ಹಿತ್ತಾಳೆತಾಲಿ ಬುಡಕಟ್ಟು ಜನಾಂಗದ ಹೆಣ್ಣಿಗಾದರೆ; ಬೆಳ್ಳಿಯ ತಾಲಿ ಬಡ ಹೆಣ್ಣು ಮಗಳಿಗಾಗಿದೆ. ಚಿನ್ನದ ತಾಲಿ ಬ್ರಾಹ್ಮಣ ಹೆಣ್ಣಿಗಾದರೆ; ವಜ್ರದ ತಾಲಿ ಅರಮನೆಯ ರಾಣಿಗಿದೆ. ಕೊಡವ ಹೆಣ್ಣಿಗೆ ತಾಲಿ ಎಂಬುದೇ ಇಲ್ಲ ಎಂದು ಹಾಡಲಾಗುತ್ತದೆ. ಇಲ್ಲಿ ತಾಲಿಯೆಂಬುದು ವಿವಿಧ ಸಾಮಾಜಿಕ ಸ್ತರಗಳನ್ನು ಸಾಂಕೇತಿಸುತ್ತದೆ.

ಹಾಡಿನ ದ್ವಿತೀಯ ಭಾಗದಲ್ಲಿ ವ್ಯವಸಾಯದ ಸಂದರ್ಭದಲ್ಲಿ ಕಾಣುವ ಗದ್ದೆಯಲ್ಲಿ ಕಾಣುವ ಕಪ್ಪೆ, ಪಕ್ಷಿಗಳು, ಏಡಿಗಳು ಹಾಗೂ ಅವುಗಳ ವರ್ಣನೆಯೊಂದಿಗೆ ಸಾಗುತ್ತದೆ. (ಇದರ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ)

ನಂತರದ ಭಾಗದಲ್ಲಿ ದನಗಾಹಿ ಹುಡುಗರು ಆಡಿದ ಆಟದ ವರ್ಣನೆಯಿದೆ. ಅದನ್ನು ಕುರಿತ ಗೀತೆ ಹೀಗಿದೆ.

ಬೋಟೋಳಿ ನಾಡೋಂಡ ಬೋಂಡಮೆ ಕೇಳೋ
ತಾಲಿ ಲೆಲ್ಲೇ ಲೆಲ್ಲೇಲಾ
ಅತ್ತಕಾರ ಮಕ್ಕ ಮಾಂಗೆ ಕಲ್‌ಚ

ತಾಲಿ ಲೆಲ್ಲೇ ಲೆಲ್ಲೇಲಾ

ಮಾಂಗೆ ಕನಿಕಣೆ ಬುದ್ದೋರ್ ಮಾಂಗೆ ತಾಲಿ ಲೆಲ್ಲೇ ಲೆಲ್ಲೇಲಾ

ಬುದ್ದೋರ್ ಮಾಂಗೆನ ಮಕ್ಕೆಲ್ಲಾ ತಿಂದ ತಾಲಿ ಲೆಲ್ಲೇ ಲೆಲ್ಲೇಲಾ

ಮಾಂಗೆ ಕೊರಂಡಿನ ದೇವರು ಮಾಡಿ ತಾಲಿ ಲೆಲ್ಲೇ ಲೆಲ್ಲೇಲಾ

ಕೊಟ್ಟ್ ಮುಡಿಚನ್ ದೇವರೆಡ್‌ತ್ ತಾಲಿ ಲೆಲ್ಲೇ ಲೆಲ್ಲೇಲಾ

ಕುಪ್ಪಟ್ಟಿ ಪೋಕೆನ ಮುಕ್ಕಾಟಿ ಮಾಡಿ ತಾಲಿ ಲೆಲ್ಲೇ ಲೆಲ್ಲೇಲಾ

ಕುಪ್ಪಟ್ಟಿ ಕೇಚಿನ ನಂಬ್‌ಡಿ ಮಾಡಿ ತಾಲಿ ಲೆಲ್ಲೇ ಲೆಲ್ಲೇಲಾ

ಕಾಕಳಿ ಚಿಟ್ಟೆನ ಕಾರ್ಯಕಾರ ಮಾಡಿ ತಾಲಿ ಲೆಲ್ಲೇ ಲೆಲ್ಲೇಲಾ

ಚೇರುಳಿ ಚಿಟ್ಟೆ ಚೀನಿ ಉರುಪುವ ತಾಲಿ ಲೆಲ್ಲೇ ಲೆಲ್ಲೇಲಾ

ಮರಕೊಟ್ಟ ಪಕ್ಕಿಯು ಚೆಂಡೆ ಬಡಿಪ ತಾಲಿ ಲೆಲ್ಲೇ ಲೆಲ್ಲೇಲಾ

ಬಾಲಾಟಿ ಮೊಣ್ಣಿ ತಿರುವಾಳಕಾರ ತಾಲಿ ಲೆಲ್ಲೇ ಲೆಲ್ಲೇಲಾ

ಅನ್ನನೆ ನಮ್ಮೆ ಕಯಿಚೋರ್ ನಾಡ್ ತಾಲಿ ಲೆಲ್ಲೇ ಲೆಲ್ಲೇಲಾ

ಈ ಗೀತೆಯು ದನಗಾಹಿ ಯುವಕರು ಹಬ್ಬವನ್ನು ಆಚರಿಸಿದ ಸಂಭ್ರಮವನ್ನು ವರ್ಣಿಸುತ್ತದೆ. ಮರದಿಂದ ಬಿದ್ದ ಮಾವಿನ ಹಣ್ಣನ್ನು ತಿಂದ ಬೋಟೋಳಿ ನಾಡಿನ ಯುವಕರು ಅದರ ಓಟೆಯನ್ನು ದೇವರ ಮೂರ್ತಿಯನ್ನಾಗಿಸಿದರು. 'ಕೊಟ್ಟ್‌ಮುಡಿಚ' (ಬುಲ್ ಬುಲ್) ಹಕ್ಕಿ ದೇವರನ್ನು ಹೊರುವ[೧೩] ಕಾರ್ಯವನ್ನು ಮಾಡಿತು. 'ಕುಪ್ಪಟಿ ಪೋಕೆ' (ಕಪ್ಪೆ) 'ಮುಕ್ಕಾಟಿ'[೧೪]ಯ ಕೆಲಸವನ್ನು 'ಕೇಚಿಞಂಡ್' ಎಂಬ ಕಪ್ಪು ಬಣ್ಣದ ಏಡಿ ಪೌರೋಹಿತ್ಯವನ್ನು ವಹಿಸಿತು. 'ಕಾಕಳಿಚಿಟ್ಟೆ' ಎಂಬ ಪಕ್ಷಿ ಕಾರ್ಯಕಾರನಾಗಿಯೂ, 'ಚೇರುಳಿ ಚಿಟ್ಟೆ' ಎಂಬ ಹಕ್ಕಿ 'ಚೀನಿ' ವಾದ್ಯವನ್ನು ನುಡಿಸುತ್ತಿತ್ತು. ಮರಕುಟಿಗ ಹಕ್ಕಿ ತನ್ನ ಶಕ್ತಿ ಶಾಲಿ ಕೊಕ್ಕುಗಳಿಂದ ಮರಗಳನ್ನು ಕುಟುಕುವಾಗ ಆಗುವ ಶಬ್ದವನ್ನು ದೇವತಾ ಉತ್ಸವದಲ್ಲಿ ಬಾರಿಸುವ 'ಚೆಂಡೆ' (ವಾದ್ಯ ಪರಿಕರ) ಯ ನಾದಕ್ಕೆ ಹೋಲಿಸಿ ಮರಕುಟಿಗ ಚೆಂಡೆಯನ್ನು ಬಾರಿಸುತ್ತಿತ್ತು ಎಂದು ಹಾಡುತ್ತಾರೆ. ತನ್ನ ಬಾಲವನ್ನು ಅಲ್ಲಾಡಿಸುತ್ತಾ ಇಡೀ ಮೈಯನ್ನು ಕುಣಿಸುವ 'ಬಾಲಾಟಿ ಮೊಣ್ಣಿ' ಎಂಬ ಹಕ್ಕಿಯನ್ನು 'ತಿರುವಳಕಾರ' (ಮೈಮೇಲೆ ದೇವರು ಬರುವವನು) ಆಗಿ ಉತ್ಸವವನ್ನು ಆಚರಿಸಲಾಯಿತು

ಎಂದು ವರ್ಣಿಸುವ ರೀತಿ ಅಪೂರ್ವವಾದದು. ನಂತರದ ಹಂತದಲ್ಲಿ ಪೊದ್ದ್ ಪೊದವಾಡದ ಚೋರಂಗೆಮಾನಿ ಎಂಬಲ್ಲಿ ಕೋತಿಯೊಂದು ನಡೆಸಿದ ಚೇಷ್ಟೆಯ ವರ್ಣನೆಯಿದೆ.

ನಂತರದ ಗೀತೆಯಲ್ಲಿ ಕಲಿಯುಗದಲ್ಲಿ ಸಂಭವಿಸಬಹುದಾದ ವೈಪರೀತ್ಯಗಳನ್ನು ವರ್ಣಿಸಲಾಗುತ್ತದೆ.

ಕಾಲ ಕಲಿಜೀಯ ಲೇಲಕ್ಕ ಮಾವಿ ತಾಲಿ ಲೆಲ್ಲೇ ಲೆಲ್ಲೇಲಾ
ಕಾಲ ಕಲಿಯುಗ ನಾನಿಕ್ಕ ಕಂಡ ...... " " "
ಮಾವುಲ್ ಚೆಕ್ಕೆ, ಪಲಚಿಲ್ ಮಾಂಗೆ ..... " " "
ಕುಂಡೋಣಿ ಕಲ್ಲೆಲ್ಲಾ ತೆಂಗೆ ಮರ್ಂಜ..... " " "

....

ಮಲ್ಲ ಕೋಳಿ ಕೂವ ಮಾಲೋಕತುಳ್ಳ....... " " "
ಪೋಡೆ ಕೋಳಿ ಕೂವ ಕಣ್ಣಾರೆ ಕಂಡ....... " " "

"ಕಲಿಯುಗದಲ್ಲಿ ಮಾವಿನ ಮರದಲ್ಲಿ ಹಲಸು, ಹಲಸಿನ ಮರದಲ್ಲಿ ಮಾವಿನ ಫಲವನ್ನು ಕಂಡೆ; ಹುಂಜ ಕೂಗುವುದು ಲೋಕಾರೂಢಿ ಆದರೆ ಇಲ್ಲಿ ಹೇಂಟೆಯೇ ಕೂಗಿ ಎಚ್ಚರಿಸುತ್ತಿದೆ. ಇದು ಕಲಿಯುಗದ ಮಹಿಮೆ" ಎನ್ನಲಾಗುತ್ತದೆ.

ಮುಂದಿನ ಭಾಗದಲ್ಲಿ ತಾನೂ ಮಾಣಿ ಮಲೆನಾಡ್(ಕೇರಳ)ದಿಂದ ಕೊಡಗಿನ ಹುತ್ತರಿ ಹಬ್ಬವನ್ನು ನೋಡಲು ಬಂದೆ ಎಂದು ಹೇಳುವ ಜೋಗಿ ತನ್ನನ್ನು ಹೊಡೆಯಬೇಡಿ, ಬಯ್ಯಬೇಡಿ ಎಂದು ಬೇಡಿಕೊಳ್ಳುತ್ತಾನೆ. ಜೋಗಿಯನ್ನು ಹೊಡೆದರೆ ಪ್ರಯೋಜನ ಇಲ್ಲ. ಬೂದಿ ಮಾತ್ರ ಹಾರುವುದು ಎನ್ನುತ್ತಾನೆ.

ನಂತರದ ಗೀತ ಬಾಹ್ಯ ಸೌಂದರ್ಯಕ್ಕೆ ಆಕರ್ಷಿತಳಾದ ಹೆಣ್ಣಿನ [illegible] ತ್ತದೆ. ಇಲ್ಲಿ ಬರುವ ಹೆಣ್ಣನ್ನು ಮುಂಡ್ಯೋಳ್ ಮಾಯ ಎಂದು ಕರೆಯಲಾಗುತ್ತದೆ.

ಚೇಪೆ ಚೂಳೆ ಮಾಯ ಪೊಂಜೂಳೆ ಮಾಯ ತಾಲಿಲೆಲ್ಲೇ ಲೆಲ್ಲೇಲಾ

ಪೊಂಜೂಳೆ ಮಾಯನ ಬಾಕೆ ಪರೆವ ತಾಲಿಲೆಲ್ಲೇ ಲೆಲ್ಲೇಲಾ

ಬೊಳ್ಳ್ ಮಾಟೂರೋಂಡ ಮಾತನ್ ಕೇಪ ತಾಲಿಲೆಲ್ಲೇ ಲೆಲ್ಲೇಲಾ

ಮಾತಂಡ ಮೇಜಾಲೆ ಕೂತನೂ ಕೇಪ ತಾಲಿಲೆಲ್ಲೇ ಲೆಲ್ಲೇಲಾ

....

ಚೋನ ಪುಲಿಯಾಟ್ ಚೇನಂಗ್ ತಪ್ಪ ತಾಲಿಲೆಲ್ಲೇ ಲೆಲ್ಲೇಲಾ

ಚಾತಂಡ ಚೆಟ್ಟಿರ ಕೆಂದ ತೊಡೆಯೊ ತಾಲಿಲೆಲ್ಲೇ ಲೆಲ್ಲೇಲಾ

ಕೆಂದ ತೊಡೆ ಕಂಡ್ ಕಮ್ಮೊರಿ ಕಂಡ್ ತಾಲಿಲೆಲ್ಲೇ ಲೆಲ್ಲೇಲಾ

....

ಬೀರಾಳಿ ಪಟ್ಟುಡ್‌ಪಿಂಜ ನಾನ್ ತಾಲಿಲೆಲ್ಲೇ ಲೆಲ್ಲೇಲಾ

ಅಂಗರೆ ದಟ್ಟಕೆರಣಾಚಿ ನಾಕ್ ತಾಲಿಲೆಲ್ಲೇ ಲೆಲ್ಲೇಲಾ

ಆ ಬಾಕೆ ಕೂಡಿತ್ ಬಾಳತೆ ಪೋಡ್ ತಾಲಿಲೆಲ್ಲೇ ಲೆಲ್ಲೇಲಾ

ಹೀಗೆ ಹಾಡುವ ಈ ಗೀತೆಯಲ್ಲಿ ಬರುವ ಕಥಾ ನಾಯಕಿಗೆ ಕೊಡಗಿನ ಹಲವು ಊರಿನ ಮನೆತನಗಳಾದ ಮಾತಂಡ, ಮುಂಡಂಡ, ಚೇನಂಡ ಕುಟುಂಬದ ಗಂಡುಗಳ ಸಂಬಂಧ ಬರುತ್ತದೆ. ಇವೆಲ್ಲವನ್ನೂ ಒಂದೊಂದು ಕಾರಣ ನೀಡಿ ತಿರಸ್ಕರಿಸಿದ ಆಕೆ ಚಾತಂಡ ಚೆಟ್ಟಿ ಎಂಬ ಯುವಕನ ಅಂದಕ್ಕೆ, ಆತನ ಕೆಂಪು ತೊಡೆಗಳ ಮಾಟಕ್ಕೆ ಮಾರುಹೋಗಿ ವರಿಸುತ್ತಾಳೆ. ಆದರೆ ಆಕೆಯ ವೈವಾಹಿಕ ಬದುಕು ಹಳಿತಪ್ಪುತ್ತದೆ. ಕೇರೆ ಹಾವನ್ನು ಹೊಡೆಯುವಂತೆ ಆತ ತನ್ನನ್ನು ಹೊಡೆಯುತ್ತಿದ್ದ ಎಂದು ದು:ಖಿಸುತ್ತಾಳೆ. ಪಟ್ಟೆ ಸೀರೆ ಉಡುತ್ತಿದ್ದ ತಾನು ತನ್ನ ಮೂರ್ಖತನದಿಂದ ಅಂಗರೆ ಗಿಡದ ರೆಂಬೆಗಳನ್ನು ಹಿಡಿದುಕೊಳ್ಳುವಂತಾಯಿತೆಂದು ಪರಿತಪಿಸುತ್ತಾಳೆ.

ಮೇಲಿನ ಈ ಗೀತೆಗೆ ಸೂಳೆ ವೇಷಧಾರಿಯು ನರ್ತಿಸಿದ ನಂತರ ಜೋಯಿಕಳಿ ಕೊನೆಗೊಳ್ಳುತ್ತದೆ. ಜೋಯಿ ಮಕ್ಕಳು ಕೈಯಲ್ಲಿ ಬಟ್ಟಲೊಂದನ್ನು

ಹಿಡಿದುಕೊಂಡು ಬರುತ್ತಾರೆ. ವೀಕ್ಷಕರು ಶಕ್ತ್ಯಾನುಸಾರ ಹಣವನ್ನು ಉಡುಗೊರೆಯಾಗಿ ಕೊಡುತ್ತಾರೆ.

ತದನಂತರ ಕಾರೇರ (ಕಾಲೂರಿನಲ್ಲಿ ನೆಲೆಸಿರುವ ಕೊಡವ ಕುಟುಂಬ) ಮನೆಗೆ ಹಿಂದಿರುಗುವ ಜೋಯಿಗಳು ಅಲ್ಲಿ 'ತಂಬುಟ್ಟ್' ತಿಂದು ಮಂದ್‌ಗೆ ತೆರಳುತ್ತಾರೆ. ಅಲ್ಲಿ 'ತೆಂಗೆಬೊಡಿ' (ತೆಂಗಿನ ಕಾಯಿಗೆ ಗುಂಡು ಹೊಡೆಯುವ ಆಟ) ನಡೆಯುತ್ತದೆ. ನಂತರ ಜನರೊಡನೆ ಮೆರವಣಿಗೆಯಲ್ಲಿ ನಿಡುವಟ್ಟು ಭದ್ರಕಾಳಿ ದೇವಸ್ಥಾನಕ್ಕೆ ಜೋಯಿಕಳಿ ನೃತ್ಯಗಾರರು ತೆರಳುತ್ತಾರೆ. ಅಲ್ಲಿ ಪುತ್ತರಿ ಕೋಲಾಟ್, ಪರೆಯಕಳಿ, ತೆಂಗೆಪೋರ್ ಮತ್ತು ಜೋಯಿಕಳಿ ನೃತ್ಯಗಳು ನಡೆಯುತ್ತವೆ. ಇಲ್ಲಿ ನರ್ತಿಸಿದ ನಂತರ ನೃತ್ಯಗಾರರು ತಮ್ಮ ವೇಶವನ್ನು ಕಳಚಿ ದೇವಸ್ಥಾನದ ಸ್ಮೀಪವಿರುವ ಮರದ ಕೆಳಗೆ ನಿಗದಿತ ಸ್ಥಳದಲ್ಲಿ ಇಡುತ್ತಾರೆ. ಇವುಗಳನ್ನು ಮತ್ತೆ ಬಳಸುವುದಿಲ್ಲ. ಇದರೊಂದಿಗೆ ಜೋಯಿಕಳಿ ನೃತ್ಯ ಕೊನೆಗೊಳ್ಳುತ್ತದೆ.

ಕೊಡವ ಜನಪದರು ಜೋಯಿ ಮಕ್ಕಳನ್ನು ಪ್ರೀತಿ ಮತ್ತು ಗೌರವಗಳಿಂದ ಕಾಣುತ್ತಾರೆ. ಜೋಯಿಕಳಿಯ ವೇಷಧಾರಿಗಳು ದೇವರ ಮಕ್ಕಳು, ಹಿಂಬಾಲಕರೂ ಆಗಿದ್ದು ದುಷ್ಟ ಶಕ್ತಿಗಳನ್ನು ಹೊಡೆದೋಡಿಸುವ ಶಕ್ತಿ ಅವರಿಗಿದೆ ಎಂದು ನಂಬಲಾಗಿದೆ.

ಹಿಂದೆ ಕೊಡಗಿನೆಲ್ಲೆಡೆ ನರ್ತಿಸಲ್ಪಡುತ್ತಿದ್ದ ಈ ನೃತ್ಯ ಇಂದು ಕಾಲೂರು ಮತ್ತು ಅದರ ಸುತ್ತಲಿನ ಪ್ರದೇಶಗಳಿಗೆ ಸೀಮಿತಗೊಂಡಿದೆ. ಈ ಊರಿನ ಸಮೀಪದ ಮುಕ್ಕೋಡ್ಲು ಗ್ರಾಮದಲ್ಲಿ ಅರಮನೆ ಪಾಲೆ ಜನಾಂಗದವರು ಹುತ್ತರಿ ಹಬ್ಬದ ಸಂದರ್ಭದಲ್ಲಿ ಇದೇ ರೀತಿಯ ಜೋಯಿ ಹಾಗೂ ಜೋಯಿಚೂಳೆ ವೇಷಧಾರಿಗಳಾಗಿ ಮನೆಮನೆಗೆ ಹೋಗಿ ನರ್ತಿಸುತ್ತಾರೆ. ಇಲ್ಲೂ ದುಡಿವಾದ್ಯ ಹಾಗೂ ಹಾಡಿನ ಹಿಮ್ಮೇಳವಿರುತ್ತದೆ. ಹೀಗೆ ಬರುವ ಜೋಯಿಗಳಿಗೆ ಮನೆಯಲ್ಲಿರುವ ಪುಟ್ಟ ಮಕ್ಕಳು ಕಾಯಿಲೆಯಿಂದ ನರಳುತ್ತಿದ್ದರೆ ಅಂತವರನ್ನು ಮುಂಬಾಗಿಲಿನ ಮೂಲಕ ನೀಡುತ್ತಾರೆ. ಮಗುವನ್ನೆತ್ತಿಕೊಂಡು ನರ್ತಿಸಿದ ಜೋಯಿಕಳಿ ನೃತ್ಯಗಾರರು ಹಿಂಬಾಗಿಲಿನ ಮೂಲಕ ನೃತ್ಯಗಾರರಿಗೆ ಮಗುವನ್ನು ಮನೆಯವರಿಗೆ ಒಪ್ಪಿಸುತ್ತಾರೆ. ಹೀಗೆ ಕೊಟ್ಟ ಮಗುವಿಗೆ ಭವಿಷ್ಯದಲ್ಲಿ

ಯಾವುದೇ ತೊಂದರೆಗಳು ಉಂಟಾಗುವುದಿಲ್ಲ ಎಂಬ ನಂಬಿಕೆ ಆ ಊರಿನವರಲ್ಲಿದೆ.

ತುಳು ನಾಡಿನ ನಲ್ಕೆ ಜನಾಂಗದವರ ಜನಪದ ನೃತ್ಯವಾದ ಸುಣ್ಣದ ಜೋಗಿ ನೃತ್ಯ ಹಾಗೂ ಜೋಯಿಕಳಿ ನೃತ್ಯದಲ್ಲಿ ಸಾರೂಪ್ಯತೆ ಇದೆ ಎನ್ನುವುದನ್ನು ಗುರುತಿಸಲಾಗಿದೆ.[೧೫] ಹೀಗೆ ವಿಭಿನ್ನ ಸಾಂಪ್ರದಾಯಿಕ, ಧಾರ್ಮಿಕ ಹಿನ್ನಲೆಯನ್ನು ಹೊಂದಿರುವ ಜೋಯಿಕಳಿ ನೃತ್ಯವು ಕೊಡವ ಜನಪದ ನೃತ್ಯಗಳಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ.

೩೬. ತೇನಾಟ್ :-

ವಿರಾಜಪೇಟೆಯ ೨ ನೇ ರುದ್ರುಗುಪ್ಪೆ ಗ್ರಾಮದ ಜೋಡು ಭಗವತಿ ದೇವಸ್ಥಾನದಲ್ಲಿ ಜರುಗುವ ಉತ್ಸವದ ಸಂದರ್ಭದಲ್ಲಿ 'ತೇನಾಟ್' ಎಂಬ ವಿಶೇಷ ನೃತ್ಯ ನರ್ತಿಸಲ್ಪಡುತ್ತದೆ. ಈ ಜನಪದ ನೃತ್ಯವು ಕೊಡಗಿನ ಈ ದೇವಸ್ಥಾನದಲ್ಲಿ ಮಾತ್ರ ನಡೆಯುತ್ತದೆ. ಇಲ್ಲಿ ನಾಲ್ಕು ಮಂದಿ ಹಾಡುಗಾರರು ಕೊಡವ ಸಾಂಪ್ರದಾಯಿಕ ಉಡುಪಾದ ಕುಪ್ಯಚೇಲೆಯನ್ನು ಧರಿಸಿ ದುಡಿಯನ್ನು ಬಾರಿಸುತ್ತಾ 'ತೇನ್‌ಪಾಟ್'ನ್ನು ಹಾಡುತ್ತಾರೆ. ಈ ಹಿಮ್ಮೇಳಕ್ಕೆ ತಕ್ಕಂತೆ ನರ್ತಿಸುವವರು ತೋಳುಗಳನ್ನು ಮುಂದಕ್ಕೂ ಹಿಂದಕ್ಕೂ ಬೀಸುತ್ತಾ, ಮುಂದಕ್ಕೂ ಹಿಂದಕ್ಕೂ ಹೆಜ್ಜೆ ಇಡುತ್ತಾ ದೇವಸ್ಥಾನದ ಮೂರು ಸುತ್ತು ನರ್ತಿಸುತ್ತಾರೆ. ತೇನಾಟ್ ನೃತ್ಯದ ನೃತ್ಯಗೀತೆ 'ತೇನ್‌ಪಾಟ್' ಈ ಕೆಳಗಿನಂತಿದೆ.

ತೇನಯ್ಯಾ ತೇನಯ್ಯಾ ತೇನಯ್ಯಾ ತೇನೋ
ತೇನಯ್ಯಾ ತೇನಯ್ಯಾ ತೇನಯ್ಯಾ ತೇನೋ
ತೇನ್‌ರ ಕೂಟ್‌ಲ್ ಪೊಂದೇನ್ ತೇನೋ
ತೇನಯ್ಯಾ ತೇನಯ್ಯಾ ತೇನಯ್ಯಾ ತೇನೋ
ಕಬ್ಬ ಮರತ್‌ಲ್ ತೇನುಂಡ್ ತೇನೋ ||ತೇ||
ಪೋರಿರ ಕೊಂಬ್‌ಲ್ ಮೂಲಿ ತೇನುಂಡ್ ||ತೇ||
ತೇನ್‌ರ ಕೂಟ್‌ಲ್ ಕಾಡ್‌ತೇನ್ ನಂದ್ || ತೇ||
ತೇನ್‌ರ ಕೂಟ್‌ಲ್ ಕಲತೇನ್ ನಂದ್ ||ತೇ||

ಜಾತಿನಲ್ಲ ತೇನುಂಡ್ ಕೋತೇನೋ ತೇನ್ ||ತೇ||
ದೇವಡ ಕಾಡ್‌ಲ್ ತೇನ್ ಮೊರೆವೊ ||ತೇ||
ಏಂಗೊಂಡು ತೊಂಡೆ ಕೊರತಂಡು ನಾವು ||ತೇ||
ಏಂಗ್ವೇಂಗಿ ನಲ್ಲೋರ್ ತೇಂಬೋಂಡು ತೇನೋ ||ತೇ||
ಕಾಡ್‌ಲ್ ನಲ್ಲ ಪುತ್ತ್‌ತೇನುಂಡ್ ||ತೇ||
ಪುತ್ತ್‌ಲ್ ತೇನ್ ಮದ್ದ್‌ಕ್ ನಂದ್ ||ತೇ||
ಏಳ್ ಮೊದ್‌ರತ್ ಕೂತಪ್ಪಿ ತೊಂಡೆ ||ತೇ||
ಕೊಲ್ಲಿತೇಂಗೂಟಿ ಕೋತೇನ್ ಕೂಟಿ ||ತೇ||
ಪುತ್ತ್ ತೇನ್ ಕೂಟಿ ಕಲತೇನ್ ಕೂಟಿ ||ತೇ||

....

....

ಲೇಲಯ್ಯಾ ಲೇಲಯ್ಯಾ ಲೇಲಯ್ಯಾ ಲೇಲೋ
ಲೇಲಯ್ಯಾ ಲೇಲಯ್ಯಾ ಲೇಲಯ್ಯಾ ಲೇಲೋ
ಲೇಲಯ್ಯಾ ಲೇಲಯ್ಯಾ ಪಾಡಿತೇ ಪೋಕ
ಲೇಲಯ್ಯಾ ಪಾಡ್‌ವದ್ ಕೇಟಿತೇ ಪೋಕ ||ಲೇ||
ಕಟ್ಪೋಳೆ ಕಂಡಿಲ್ ಪೂಳೆ ಮುರ್‌ಕ್
ಪೂಳೆ ಮುರ್‌ಕ್‌ಲ್ ಸಣ್ಣ ಕೊಡಿಯೋ
ಸಣ್ಣ ಕೊಡಿ ತಿಂದ ನಾವು ತರಿಪೊ ||ಲೇ||

....

ತೇನಯ್ಯಾ ತೇನಯ್ಯಾ ತೇನಯ್ಯಾ ತೇನೋ ಎಂಬ ಸೊಲ್ಲಿನೊಂದಿಗೆ ಆರಂಭವಾಗುವ ಈ ಗೀತೆಯಲ್ಲಿ 'ತೇನ್' (ಜೇನು)ನ ವರ್ಣನೆಯನ್ನು ಮಾಡಲಾಗಿದೆ. ಕೊಡಗಿನ ಕಾಡಿನಲ್ಲಿ ಸಿಗುವ ವಿವಿಧ ರೀತಿಯ ಜೇನುಗಳಾದ ಮೊಂದೇನ್, ಕೋತೇನ್, ಮೂಲಿತೇನ್, ಕಲತೇನ್ .... ಇತ್ಯಾದಿಗಳ ವರ್ಣನೆ

ಮಾಡಲಾಗುತ್ತದೆ. ಸುಶ್ರಾವ್ಯ ಶಾರೀರಕ್ಕಾಗಿ ಜೇನಿನ ಸೇವನೆ ಅತೀ ಮುಖ್ಯ. ಇದನ್ನು ಸೇವಿಸಿ ನೀನು ಚೆನ್ನಾಗಿ ಹಾಡಬೇಕು ಎಂದು ಹಾಡುಗಾರ ಕಂಠಕ್ಕೆ ಹೇಳುತ್ತಾನೆ. ಹೀಗೆ ಹಾಡುತ್ತಾ ಕೊನೆಗೆ ಲೇಲಯ್ಯಾ ಲೇಲಯ್ಯಾ ಲೇಲಯ್ಯಾ ಲೇಲೋ ಎಂದು ಹಾಡುತ್ತಾ ಹಾಡನ್ನು ಸಮಾಪ್ತಿಗೊಳಿಸಲಾಗುತ್ತದೆ.

೩. ಗೀತ ಪ್ರಧಾನ ನೃತ್ಯಗಳು

ಈ ವಿಭಾಗದಲ್ಲಿ ನೃತ್ಯ ಗೀತೆಗಳು ಪ್ರಧಾನ ಪಾತ್ರ ವಹಿಸುವ ಜನಪದ ನೃತ್ಯಗಳನ್ನು ವಿವೇಚಿಸಲಾಗಿದೆ. ಇಲ್ಲಿ ಕಂಡು ಬರುವ ಏಕೈಕ ಜನಪದ ನೃತ್ಯ ಉಮ್ಮತ್ತಾಟ್.

ಅ) ಉಮ್ಮತ್ತಾಟ್ :-

ಕೊಡವ ಜನಪದರಲ್ಲಿ ಕಂಡುಬರುವ ಏಕೈಕ ಗೀತಪ್ರಧಾನ ನೃತ್ಯ ಉಮ್ಮತ್ತಾಟ್. ಇದು ಕೊಡವ ಹೆಣ್ಣು ಮಕ್ಕಳು ಪಾಲ್ಗೊಳ್ಳುವ ನೃತ್ಯವಾಗಿದೆ. ಇಲ್ಲಿ ಹೆಣ್ಣುಮಕ್ಕಳು ಕಂಚಿನ ತಾಳಗಳನ್ನು ಕೈಯಲ್ಲಿ ಹಿಡಿದು ನೃತ್ಯಗೀತೆಗೆ ಸರಿಯಾಗಿ ಬಾರಿಸುತ್ತಾ 'ಕುತ್ತ್ಂಬೊಳ್ಚ' (ದೀಪಸ್ತಂಭ)ದ ಸುತ್ತ ವೃತ್ತಾಕಾರವಾಗಿ ನರ್ತಿಸುತ್ತಾರೆ. ಒಮ್ಮೆ ಒಬ್ಬೊಬ್ಬರೇ ತಾಳ ಹಾಕುತ್ತಾ, ಮತ್ತೊಮ್ಮೆ ಇಬ್ಬಿಬ್ಬರು ಎದುರು ಬದುರಾಗಿ ತಾಳಕ್ಕೆ ತಾಳ ಕೊಡುತ್ತಾರೆ. ಮಗದೊಮ್ಮೆ ಬಲಕ್ಕೆ-ಎಡಕ್ಕೆ ತಿರುಗಿ ಕೆಲವರು ನಿಂತು, ಕೆಲವರು ಕುಳಿತು ತಾಳ ಬಾರಿಸುತ್ತಾ ನರ್ತಿಸುತ್ತಾರೆ.

ಇಲ್ಲಿ ಇಂತಿಷ್ಟೇ ಜನರು ಇರಬೇಕೆಂಬ ನಿಯಮವಿಲ್ಲ. ಆದರೆ ಭಾಗವಹಿಸುವವರು ಸಮ ಸಂಖ್ಯೆಯಲ್ಲಿರಬೇಕು. ನೃತ್ಯ ಗೀತೆಯನ್ನು ಹಾಡುವ ಹೆಣ್ಣುಮಕ್ಕಳು ತುಸು ಮಗ್ಗುಲಲ್ಲಿ ನಿಂತು ಹಾಡುತ್ತಾರೆ.

ಕಂಚಿನ ತಾಳಕ್ಕೆ 'ಉಮ್ಮತ್ತ್' ಎಂಬ ಹೆಸರಿದ್ದು ತಾಳವನ್ನು ತಟ್ಟಿ ಕುಣಿವ ಕಾರಣ 'ಉಮ್ಮತ್ತಾಟ್' ಎಂದು ಕರೆಯುತ್ತಾರೆಂಬ ಅಭಿಪ್ರಾಯವಿದೆ. ಇದು ಭಸ್ಮಾಸುರ ಮೋಹಿನಿಯ ನೃತ್ಯ, ಉಮಾದೇವಿಯ ನೃತ್ಯ ಎನ್ನುವ ನಂಬಿಕೆ ಕೊಡವ ಜನಪದರಲ್ಲಿದೆ."ಅವಿಭಕ್ತ ಕುಟುಂಬ ಪದ್ಧತಿ ಆಚರಣೆಯಲ್ಲಿದ್ದ ಕೊಡವರಲ್ಲಿ ಎಲ್ಲಾ ಶುಭ ಸಮಾರಂಭಗಳಲ್ಲಿ ನೆಂಟರಿಷ್ಟರು ಬಂದಾಗ ಅವರನ್ನು ರಂಜಿಸಲು ಈ ನೃತ್ಯವನ್ನು ಆಡುತ್ತಿದ್ದರು".[೧೭] ಎಂಬ ಅಭಿಪ್ರಾಯವೂ ಇದೆ.

ಈ ಸೌಮ್ಯ ಕುಣಿತದ ಹಿನ್ನಲೆಯಲ್ಲಿ ಸಮುದ್ರ ಮಂಥನದ ಕಥೆಯಿದೆ. ಸಮುದ್ರ ಮಥನ ಕಾಲದಲ್ಲಿ ಹುಟ್ಟಿದ ಅಮೃತವನ್ನು ರಾಕ್ಷಸರಿಗೆ ದಕ್ಕದಂತೆ ಮಾಡಲು ಮೋಹಿನಿ ರೂಪ ತಾಳಿದ ವಿಷ್ಣು ತನ್ನ ಬಗೆ ಬಗೆಯ ನೃತ್ಯಗಳಿಂದ ಅಸುರರನ್ನು ಬೆರಗುಗೊಳಿಸಿ ಸುರರಿಗೆ ಅಮೃತವನ್ನು ಹಂಚಿದ ಕಥೆಯೇ ಈ ನೃತ್ಯಕ್ಕೆ ಮೂಲ ಎನ್ನಲಾಗಿದೆ. ಇದೆಲ್ಲದಕ್ಕಿಂತಲೂ ಹೆಚ್ಚಾಗಿ ಉಮ್ಮತ್ತಾಟ್ ಕೊಡವರ ಕುಲದೇವಿಯಾದ ಕಾವೇರಮ್ಮೆಯ ಆರಾಧನೆಯೂ ಹೌದು

ಕೊಡವ ಹೆಣ್ಣುಮಕ್ಕಳು ಕೆಂಪು ಬಣ್ಣದ 'ಬೊಟ್ಟ್ ಪೊಡೆಯ' (ಪಟ್ಟೆ ಸೀರೆ)ವನ್ನು ಹಿಂದಕ್ಕೆ ನೆರಿಗೆಯಿಟ್ಟು, ಬಲಭಾಗಕ್ಕೆ ಸೆರಗನ್ನು ಕಟ್ಟುವ ವಿಶಿಷ್ಟ ಸಾಂಪ್ರದಾಯಿಕ ವಿಧಾನದಲ್ಲಿ ಸೀರೆ ಉಡುತ್ತಾರೆ. ತಲೆಗೆ ಕೆಂಪು ವಸ್ತ್ರ, ತುಂಬು ತೋಳಿನ ರವಿಕೆ, ಕೊರಳಿನಲ್ಲಿ ಜೋಮಾಲೆ, ಕೊಕ್ಕೆತಾತಿ ಮುಂತಾದ ಸಾಂಪ್ರದಾಯಿಕ ಆಭರಣಗಳನ್ನು ತೊಡುತ್ತಾರೆ. ಕೈಗಳಲ್ಲಿ ಬಳೆ, ಹಣೆಯಲ್ಲಿ ಕುಂಕುಮ ಧರಿಸಿದ ಹೆಣ್ಣುಮಕ್ಕಳು ಬಹಳ ಸೌಮ್ಯವಾಗಿ ನರ್ತಿಸುತ್ತಾರೆ.

ಪ್ರಸ್ತುತ ಉಮ್ಮತ್ತಾಟ್ ಹಾಡುಗಳಲ್ಲಿ ಕೊಡಗಿನ ಕುಲದೇವಿ ಕಾವೇರಿಯ ಸ್ತುತಿ, ಪುರಾಣ, ಅತಿಥಿ ಸತ್ಕಾರ, ಪ್ರಕೃತಿ ಸಂಪತ್ತು, ಕಾವೇರಿ ತೀರ್ಥದ ಮಹಿಮೆ, ಕಾಯಕದ ಮಹಿಮೆಯನ್ನು ಸಾರುವ ಗೀತೆಗಳಿವೆ.

ಕಾವೇರಮ್ಮೆ ದೇವಿ ತಾಯಿ ಕಾಪಾಡೆಂಗಳಾ

ಬಾವ ಬಟ್ಟೆ ಕಾಟಿತಂದ್ ಚಾಕ್ ದೇವಿ ನೀ

("ಕಾವೇರಮ್ಮೆ ದೇವಿ ತಾಯಿ ಕಾಪಾಡೆಮ್ಮನು

ಬಾಳಿನ ದಾರಿಯ ತೋರಿ ಸಲಹು ದೇವಿ ನೀ") ಎಂಬ ಗೀತೆಯಲ್ಲಿ ಕಾವೇರಮ್ಮೆ ನಮಗೆಲ್ಲರಿಗೂ ಬದುಕಿ ಬಾಳುವ ಹಾದಿಯನ್ನು ತೋರಲಿ ಎಂಬ ಪ್ರಾರ್ಥನೆಯಿದೆ.

"ಸಮುದ್ರ ಮಂಥನದಿಂದ ಹುಟ್ಟಿದ ಅಮೃತವನ್ನು ಮಹಾವಿಷ್ಣುವು ಮೋಹಿನಿಯ ರೂಪದಲ್ಲಿ ಉಮೆಯ ನೃತ್ಯವನ್ನು ಅನುಕರಿಸಿ ಅಸುರರನ್ನು ಬೆರಗುಗೊಳಿಸಿ, ಉಪಾಯವಾಗಿ ಸುರರಿಗೆ ಹಂಚಿದ ಸಂದರ್ಭದಲ್ಲಿ ನರ್ತಿಸಿದಂತೆ ನರ್ತಿಸುವಾ" ಎಂದು ಹಾಡುತ್ತಾ ನರ್ತಿಸಲಾಗುತ್ತದೆ.

ಅತಿಥಿ ಸತ್ಕಾರ ಕೊಡವ ಸಂಸ್ಕೃತಿಯಲ್ಲಿ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಮನೆಗೆ ಬಂದ ಅತಿಥಿಗಳನ್ನು ಮನೆಯಾಕೆ ಒಂದು ಚೆಂಬು ನೀರನ್ನು ತಂದಿಟ್ಟು 'ಬಂದಿರಾ' (ಸ್ವಾಗತ ನುಡಿ) ಎಂದು ಸ್ವಾಗತಿಸುತ್ತಾಳೆ. ಇದು ಕೊಡವ ಜನಪದರ ವಿಶಿಷ್ಟ ರೀತಿಯ ಸ್ವಾಗತ. ಅತಿಥಿ ಸತ್ಕಾರವನ್ನು ಬಿಂಬಿಸುವ ಗೀತೆಯು ಉಮ್ಮತ್ತಾಟ್ ಗೀತೆಗಳಲ್ಲಿದೆ.

"ಬಂದಿರಾ ಬೆಂದ್‌ಕೆಲ್ಲಾ । ನಿಂಗೆಲ್ಲಾ ಚಾಯಿಲ್ ಉಳ್ಳಿರಲ್ಲಾ ।

ಬಂದಿರಾ ಇಲ್ಲಿಕೆಲ್ಲಾ । ದೇವಡ ನಮ್ಮೆಯೊ ಚಾಯುಂಡಲ್ಲಾ ।

ಮನೆಲ್ ಮಕ್ಕ್‌ತ್‌ೕರ । ನಿಂಗಡ ಚಾಯಿಲ್ ಬಾವಳಲ್ಲಾ ।

ಬೇಲುವು ಬಾಣೆ ತ್‌ೕರಾ । ಎಲ್ಲಡೋ ತುಂಬಿ ತುಳುಕುವಲ್ಲಾ....."

"ಅತಿಥಿಗಳೇ ನಿಮಗೆ ಸ್ವಾಗತ, ನೀವೆಲ್ಲರೂ ಆರೋಗ್ಯವೇ? ಇಲ್ಲಿನ ದೇವರ ಹಬ್ಬ ಚೆನ್ನಾಗಿದೆಯಲ್ಲವೇ? ಮನೆಯ್ಯಲ್ಲಿ ಮಕ್ಕಳೆಲ್ಲರೂ ಚೆನ್ನಾಗಿ ಬಾಳುತ್ತಿದ್ದಾರೆಯೇ? ಗದ್ದೆ ತೋಟಗಳು ಫಸಲಿನಿಂದ ತುಂಬಿ ತುಳುಕುತ್ತಿವೆಯೇ?"– ಹೀಗೆ ಸಾಗುವ ಹಾಡು ಕೊಟ್ಟಿಗೆಯಲ್ಲಿನ ದನಕರುಗಳು, ಮನೆಯ ಆಳುಗಳು, ಮನೆಯ ಸದಸ್ಯರೆಲ್ಲರ ಯೋಗಕ್ಷೇಮವನ್ನು ಪ್ರಶ್ನಿಸುತ್ತಾ ಸತ್ಕರಿಸುವ ರೀತಿಯನ್ನು ವರ್ಣಿಸುತ್ತದೆ.

ಕೊಡಗಿನ ಪ್ರಾಕೃತಿಕ ಸಂಪತ್ತಿನ ವರ್ಣನೆ, ಕಾಡಿನಲ್ಲಿ ಸಿಗುವ ವಿವಿಧ ರೀತಿಯ ಜೇನುಗಳಾದ ಕೋತೇನ್, ಪೊಂದೇನ್, ಪೊಟ್ಟಿತೇನ್, ಮೂಲಿತೇನ್ ಇವುಗಳ ವರ್ಣನೆಯೂ ಉಮ್ಮತ್ತಾಟ್ ಗೀತೆಗಳಲ್ಲಿವೆ. ಕಾವೇರಿ ತೀರ್ಥದ ಮಹಿಮೆಯನ್ನು ಕೊಂಡಾಡುವ ಇಗ್ಗ್‌ತಪ್ಪ, ಬೈತೂರಪ್ಪ ಹೀಗೆ ತಮ್ಮ ದೈವಗಳನ್ನು ಸ್ತುತಿಸುವ ಗೀತೆಗಳು ಇವೆ.

ಕಾಯಕಕ್ಕೆ ಹೆಚ್ಚಿನ ಮಹತ್ವವನ್ನು ಕೊಡುವವರು ಜನಪದರು. ಕೊಡವ ಜನಪದೀಯ ಹೆಣ್ಣುಮಗಳು ಬೆಳಗೆದ್ದು ಬಾಡೆಮನೆ(ನಡುಮನೆ)ಯನ್ನು ಗುಡಿಸಿ, ಸಗಣಿ ನೀರನ್ನು ಪ್ರೋಕ್ಷಿಸಿ ದೀಪ ಹಚ್ಚುವುದರೊಂದಿಗೆ ತನ್ನ ಕೆಲಸವನ್ನು ಪ್ರಾರಂಭಿಸುವಳು.

"ನೀನೆಲ್ಲಿಂಜ ಬಂದ ಮಾಯತ ದೇವಿ

ಮಾಯತ ದೇವಿರ ಮಮ್ಮಾಯತಾಟ್

ಎಲ್ಲಾ ತರಾಟೊಮ್ಮ ಆಡೊಮ್ಮ ದೇವಿ

ಬೊಳ್ಳಿ ತಾಳ ಕೊಟ್ಟಿ ತಾಡೊಮ್ಮದೇವಿ

ಬಾಡೆ ಒಡ್‌ಕಿ ಕೊಂಡಾಡೊಮ್ಮ ದೇವಿ

ಮೋರ್ ಕಲಕಿ ಕೊಂಡಾಡೊಮ್ಮ ತಾಯಿ"

ಹೀಗೆ ಸಾಗುವ ಈ ಗೀತೆಯ ಅರ್ಥ ಹೀಗಿದೆ.

"ಮಾಯದ ದೇವಿಯೇ ನೀನೆಲ್ಲಿಂದ ಬಂದೆ? ಎಲ್ಲಾ ತರಹದ ಮಹಾಮಾಯೆಯ ನೃತ್ಯವನ್ನು ಮಾಡಿ ನಮಗೆ ತೋರಿಸು. ಬೆಳ್ಳಿ ತಾಳವನ್ನು ತಟ್ಟಿ ನರ್ತಿಸು. ಬಾಡೆಮನೆಯನ್ನು ಗುಡಿಸುತ್ತಾ, ಮೊಸರು ಕಡೆಯುತ್ತಾ, ಹಾಲು ಕರೆಯುತ್ತಾ, ಕೊಟ್ಟಿಗೆಯನ್ನು ಶುಚಿಗೊಳಿಸುತ್ತಾ ಸೆಗಣಿ ಗೋರುತ್ತಾ, ಸೌದೆ ಹೊರುತ್ತಾ ನರ್ತಿಸು ತಾಯಿ" ಎಂದು ಹಾಡುವ ಹಾಡಿಗೆ ನರ್ತಿಸಲಾಗುತ್ತದೆ. ಹೀಗೆ " ಉಮ್ಮತ್ತಾಟ್ ಹಾಡುಗಳಲ್ಲಿ ಕಾವೇರಿ ಮಾತೆಯ ಆರಾಧನೆಯಿದೆ. ಉಮೆ ವಿಷ್ಣುವಿನ ಕತೆ ಇರುವ ಕಾರಣ ಶಿಷ್ಟಪದಗೊಂಡಿದೆ"[೧೮] ಅದಲ್ಲದೆ ಕಾವೇರಿ ತೀರ್ಥ ಸ್ನಾನದ ಮಹಿಮೆ, ಪ್ರಕೃತಿ ಸಂಪತ್ತಿನ ವರ್ಣನೆ, ಅತಿಥಿಸತ್ಕಾರ, ಕಾಯಕದ ಮಹಿಮೆ ಇವೆಲ್ಲವೂ ಮುಪ್ಪುರಿಗೊಂಡಿವೆ. ಉಮ್ಮತ್ತಾಟ್‌ನಲ್ಲಿ ಸುಮಾರು ಬಿಡಿ ನೃತ್ಯಗೀತೆಗಳಿವೆ. ಒಂದೊಂದು ಗೀತೆಯ ನೃತ್ಯಕ್ಕೂ ಅದರದ್ದೇ ಆದ ಹಾವಭಾವ, ಭಂಗಿ, ವಿಭ್ರಮ ವಿಲಾಸಗಳಿವೆ.

ಉಮ್ಮತ್ತಾಟ್‌ನ ಆರಂಭದ ಗೀತೆಯನ್ನು ಗಮನಿಸಿದಾಗ ಅದು ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ರಚಿಸಿರುವ "ಕಾವೇರಮ್ಮೆ ದೇವಿ ತಾಯಿ ಕಾಪಾಡೆಂಗಳ". ಎಂಬ ಕಾವೇರಿ ನಾಟಕದ ಗೀತೆಯಾಗಿದೆ. ಹಾಗೆಯೇ ಅವರದೇ ರಚನೆಯಾದ "ಆದಿಕಾವೇರಮ್ಮೆ ದೇವಿಡ ಪಾದಕೆಕ್ಕಲೂ ಮಂಗಳಂ" ಗೀತೆ ಕೂಡ ಈ ನೃತ್ಯದಲ್ಲಿ ಹಾಡಲಾಗುತ್ತದೆ.

ಇಲ್ಲಿನ ಮತ್ತೊಂದು ನೃತ್ಯ ಗೀತೆ "ತಿಂಗತೊಲೆಯಾರ್‌ಡ ಸಂಕ್ರಮಣತಂದ್" ಗೀತೆ ಹರಿದಾಸ ಮುಕ್ಕಾಟಿರ ಪೂವಯ್ಯ ಅವರ ರಚನೆ. ಹೀಗೆ ಶಿಷ್ಟ ರಚನೆಗಳು ಉಮ್ಮತ್ತಾಟ್ ನೃತ್ಯಗೀತೆಗಳಲ್ಲಿ ಸೇರಿಕೊಂಡಿರುವುದರಿಂದ

ಉಮ್ಮತ್ತಾಟ್ ಕೊಡಗಿನ ಜನಪದ ಕಲೆ ಅಲ್ಲ, ಉಮ್ಮತ್ತಾಟ್ ಗೀತೆ ಕೂಡ ಜನಪದ ಸಾಹಿತ್ಯ ಅಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾದದ್ದುಂಟು. ಆದರೆ "ಪಾರಿಭಾಷಿಕವಾಗಿ ಜನಪದ ಸಾಹಿತ್ಯವೆಂದರೆ ಯಾವುದೇ ಒಂದು ನಿರ್ದಿಷ್ಟ ಜನಪದದ ಸಾಮುದಾಯಿಕ, ಲಲಿತ ವಾಚಿಕ ಕಲಾಭಿವ್ಯಕ್ತಿ. ಈ ಅಭಿವ್ಯಕ್ತಿಯನ್ನು ಆ ಜನಪದದ ಸದಸ್ಯರೆಲ್ಲರೂ ಕಲಾತ್ಮಕ ಅಭಿವ್ಯಕ್ತಿ ಎಂದು ಒಪ್ಪಿಕೊಂಡಾಗ ಅದು ಅವರ ಜನಪದ ಸಾಹಿತ್ಯವೆಂದೆನಿಸಿಕೊಳ್ಳುತ್ತದೆ."[೧೯] ಎಂಬ ವಿಲ್ಯಂ ಮಾಡ್ತ ಅವರ ಅಭಿಪ್ರಾಯ ಇಲ್ಲಿ ಗಮನಾರ್ಹವಾಗಿದೆ.

ಉಮ್ಮತ್ತಾಟ್ ನೃತ್ಯವು ಬಹಳ ಹಿಂದಿನಿಂದಲೇ ಅಸ್ತಿತ್ವದಲ್ಲಿ ಇತ್ತು ಎಂಬ ವಿಚಾರವನ್ನು ಕೊಡಗಿನ ಹಿರಿಯ ಜಾನಪದ ಕಲಾವಿದರು, ತಜ್ಞರು ಒತ್ತಿ ಹೇಳುತ್ತಾರೆ. ಬಹಳ ಹಿಂದೆ ಬಲ್ಲತ್ ನಾಡಿನ ಭದ್ರಕಾಳಿ ದೇವಸ್ಥಾನದಲ್ಲಿ ಊರಿನ ಮಹಿಳೆಯರಿಂದ ಉಮ್ಮತ್ತಾಟ್ ಸೇವೆ ನಡೆಯುತ್ತಿತ್ತು. ದೇವಸ್ಥಾನದಲ್ಲಿ ಹಬ್ಬದ ಕಟ್ಟಳೆ ನಿಗಧಿಯಾದಂದಿನಿಂದ ಸತತವಾಗಿ 9 ದಿನಗಳವರೆಗೆ ಉಮ್ಮತ್ತಾಟ್ ನಡೆಯುತ್ತಿದ್ದಿತು. ಕಾಗೆ ಪಕ್ಷಿಗಳು ಏಳುವುದಕ್ಕೆ ಮುಂಚಿತವಾಗಿ ಊರಿನ ಪ್ರತಿಯೊಂದು ಒಕ್ಕ (ಮನೆತನ)ದಿಂದ ಒಬ್ಬ ಮಹಿಳೆ ತಣ್ಣೀರಿನಲ್ಲಿ ಮಿಂದು ಸಂಪೂರ್ಣ ನಗ್ನವಾಗಿ ದೇವಸ್ಥಾನಕ್ಕೆ ಹೋಗಿ ಕಂಚಿನ ತಾಳ ಹಿಡಿದು ನರ್ತಿಸುತ್ತಿದ್ದರಂತೆ. ಈ ಮಹಿಳೆಯರು ನರ್ತಿಸಿ ಮನೆಗೆ ಬಂದು ತಲುಪುವವರೆಗೆ ಊರಿನ ಯಾವುದೇ ಗಂಡಸು ಕಿಟಕಿ ಬಾಗಿಲುಗಳನ್ನು ತೆರೆಯುವಂತಿಲ್ಲ, ಮನೆಯ ಹೊರಗೆ ಕಾಲಿಡುವಂತಿಲ್ಲ. ನೃತ್ಯಾರ್ಥಿಯರನ್ನು ಬಿಟ್ಟು ಉಳಿದ ಹೆಣ್ಣು ಮಕ್ಕಳೂ ಹೊಸಿಲು ದಾಟುವಂತಿರಲಿಲ್ಲ.

ಈ ನೃತ್ಯದ ಪ್ರತೀತಿ ನೆರೆಯ ಊರಿನವರಿಗೆ ತಿಳಿದಿತ್ತು. ಆ ಊರಿನ ಮೂವರು ಪುಂಡ ಯುವಕರು ಈ ಹೆಣ್ಣು ಮಕ್ಕಳನ್ನು ನೋಡಬೇಕೆಂಬ ಕೆಟ್ಟ ಕುತೂಹಲದಿಂದ ಯಾರಿಗೂ ತಿಳಿಯದಂತೆ ರಾತ್ರಿಯೇ ಬಂದು ದೇವಸ್ಥಾನದ ಸಮೀಪದ ಮರವನ್ನೇರಿ ಅವಿತು ಕುಳಿತುಕೊಂಡಿದ್ದರು. ಸ್ತ್ರೀಯರು ಜಳಕ ಮಾಡಿ ಬರುವ ವೇಳೆಗೆ ಅವರು ಕುಳಿತಿದ್ದ ರೆಂಬೆ ಮುರಿದು ಬಿದ್ದು, ಕಣ್ಣಿಗೆ ಪೆಟ್ಟಾಗಿ ದೃಷ್ಟಿ ಕಳೆದುಕೊಂಡರಂತೆ. ಈ ಸುದ್ದಿ ಬಾಯಿಂದ ಬಾಯಿಗೆ ಹರಡಿ ಮುಂಜಾನೆ ನಡೆಯುತ್ತಿದ್ದ ಉಮ್ಮತ್ತಾಟ್

ಸೇವೆ ನಿಂತು ಹೋಯಿತು ಎನ್ನಲಾಗಿದೆ.[೨೦]

ಸುಮಾರು 70 ವರ್ಷಗಳ ಹಿಂದೆ ನಾಪೋಕ್ಲು ಭಗವತಿ ದೇವಸ್ಥಾನದಲ್ಲಿ ಹಬ್ಬದ ಕಟ್ಟಳೆ ನಿಗದಿಯಾದಂದಿನಿಂದ ಪ್ರತೀ ನಿತ್ಯ ದೇವಸ್ಥಾನದಲ್ಲಿ ಉಮ್ಮತ್ತಾಟ್ ಸೇವೆ ನಡೆಯುತ್ತಿತ್ತು. ಕೊಡಗಿನ ರಾಜನನ್ನು ಬ್ರಿಟೀಷರು ಸೆರೆ ಹಿಡಿದು ಕಾಶಿಗೆ ಕಳುಹಿಸಿದ ಸಂದರ್ಭದಲ್ಲಿ ರಾಜನ ಜೊತೆಯಲ್ಲಿ ಪೆಬ್ಬಟ್ಟಿರ ಮನೆತನದ ಅರ್ಜುನ ಮತ್ತು ದಂಡಾಪಣಿ (ದಂಡಪಾಣಿ ಆಗಿರಬಹುದು) ಎನ್ನುವವರು ಹೋಗಿದ್ದರು. ಅವರು ಕಾಶಿಗೆ ಹೊರಟ ದಿನ ನಾಪೋಕ್ಲು ಭಗವತಿ ದೇವಸ್ಥಾನದಲ್ಲಿ ಉಮ್ಮತ್ತಾಟ್ ನೃತ್ಯವನ್ನು ನೋಡಿ ಹೊರಟರು. ಕಾಶಿಯಿಂದ ಮರಳಿ ಬಂದ ದಿನವೂ ಅದೇ ದೇವಸ್ಥಾನದಲ್ಲಿ ಉಮ್ಮತ್ತಾಟ್ ನೃತ್ಯವನ್ನು ನೋಡಿ ಮನೆಗೆ ತಲುಪಿದರು. ಅಂದು ಅವರು ಕಾಶಿಗೆ ಹೋಗಿ ಮರಳುವಾಗ ಒಂದು ಅಥವಾ ಎರಡು ವರ್ಷಗಳಾಗಿರ ಬಹುದು ಎಂಬುದು ಹಿಂದಿನವರ ಲೆಕ್ಕಾಚಾರವಾಗಿತ್ತು. ಪೆಬ್ಬಟ್ಟಿರ ಮನೆತನದ ಈ ಎರಡು ಹಿರಿಯರು ಸಾಯುವವರೆಗೂ ತಾವು ಕಾಶಿಗೆ ತೆಗೆದುಕೊಂಡು ಹೋದ ಊರುಗೋಲನ್ನು ಇಟ್ಟುಕೊಂಡಿದ್ದರಂತೆ. ಅವರ ನಿಧನದ ನಂತರ ಊರುಗೋಲನ್ನು ಅವರೊಂದಿಗೆ ಸಂಸ್ಕಾರ ಮಾಡಲಾಯಿತು. ದೇವಿಯ ಉಮ್ಮತ್ತಾಟ್ ನೋಡಿ ಕಾಶಿಗೆ ಹೊರಟ ಕಾರಣ ತಾವು ಸುಖಕರವಾಗಿ ಮರಳಿ ಬಂದೆವೆಂಬುದು ಅವರ ಅಭಿಪ್ರಾಯವಾಗಿತ್ತು[೨೧] ಎನ್ನಲಾಗಿದೆ.

ತಿಥಿ ಕರ್ಮಾಂತರ ಕಳೆದ ನಂತರ 'ಪೊಲ್‌ಚಿ ಪಾಡುವ' (ಸತ್ತವನ ಗುಣಗಾನ ಮಾಡುವ ಗೀತೆ) ಸಂದರ್ಭದಲ್ಲಿ ಮನೆಯ ಮಹಿಳೆಯರು ನೆಲ್ಲಕ್ಕಿ ನಡುಬಾಡೆಯಲ್ಲಿ ಕಂಚಿನ ತಾಳಗಳನ್ನು ಹೊಡೆಯುತ್ತಾ ನರ್ತಿಸುತ್ತಿದ್ದ ವಿಚಾರ 1940ರಲ್ಲಿ ದಾಖಲಾಗಿದೆ. ಈ ಸಂದರ್ಭದಲ್ಲಿ ಒಲ್‌ಪ್‌ಚೆರ ಮನೆತನಕ್ಕೆ ವಿವಾಹ ಆಗಿ ಅಲ್ಲಿ ಪತಿಯನ್ನು ಕಳೆದುಕೊಂಡು ಕೋಪಟ್ಟಿ ಗ್ರಾಮದ ಕೇಕಡ ಮನೆತನದ ಜೋಯಪ್ಪ ಎನ್ನುವ ವ್ಯಕ್ತಿಯನ್ನು ಮರು ವಿವಾಹವಾದ ಪೂವವ್ವ ಎಂಬಾಕೆ ಉಮ್ಮತ್ತಾಟನ್ನು ಕೆಲವು ಹೆಣ್ಣುಮಕ್ಕಳೊಂದಿಗೆ ನರ್ತಿಸಿದರಂತೆ. ಈಕೆ ಹಲವು ಹೆಣ್ಣು ಮಕ್ಕಳಿಗೆ ಉಮ್ಮತ್ತಾಟನ್ನು ಕಲಿಸುತ್ತಿದ್ದರು[೨೨] ಎನ್ನಲಾಗಿದೆ.

1952 ರಲ್ಲಿ ಸೂರ್ಲಬ್ಬಿ ನಾಡಿನಲ್ಲಿ ಮದುವೆಯ ಸಮಾರಂಭದಲ್ಲಿ ಹೆಣ್ಣುಮಕ್ಕಳು ಉಮ್ಮತ್ತಾಟ್ ಅನ್ನು ನರ್ತಿಸಿದ್ದ ಪುರಾವೆಗಳು ಲಭ್ಯವಾಗುತ್ತವೆ.[೨೩]

1963 ರಲ್ಲಿ ತಿಥಿಕರ್ಮಾಂತರ ಸಂದರ್ಭದಲ್ಲಿ ಸೂರ್ಲಬ್ಬಿ ನಾಡಿನ ಶಾಂತೆಯಂಡ ಮನೆತನದ ಹೆಣ್ಣು ಮಗಳು ಕೆಲವು ಹೆಣ್ಣು ಮಕ್ಕಳೊಂದಿಗೆ ಉಮ್ಮತ್ತಾಟ್ ಅನ್ನು ನರ್ತಿಸಿದ್ದರು.[೨೪]

ಹಿಂದೆ ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿ ಇದ್ದುದರಿಂದ ಕುಟುಂಬದ ಹೆಣ್ಣು ಮಕ್ಕಳು ಮನೆಗೆ ಅಪರೂಪದ ಅತಿಥಿಗಳು ಬಂದಾಗ, ಮತ್ತು ಕೆಲವು ಶುಭ ಸಮಾರಂಭಗಳಲ್ಲಿ ಈ ನೃತ್ಯವನ್ನು ನರ್ತಿಸುತ್ತಿದ್ದರು. ಈ ಸಂದರ್ಭದಲ್ಲಿ ಹಿಮ್ಮೇಳವಾಗಿ ಹಾಡುತ್ತಿದ್ದ ನೃತ್ಯಗೀತೆ ಈ ಕೆಳಗಿನಂತಿದೆ.

"ಲೆಲ್ಲೋ ಲೆಲ್ಲೋ ಲೆಲ್ಲೇಲಾ
ಲೆಲ್ಲೋ ಲೆಲ್ಲೋ ಲೆಲ್ಲೇಲಾ
ಈ ಒಕ್ಕ ಮನೆಯಿಲ್
ಯಂಗೋ ನಾಲೆಳೆ ಪೊಂಗಾ
ಕಚ್ಚಿ ತಾಳ ಕೈಗೊಂಡ್
ಈ ಒಕ್ಕಡ ಮುಂದ್‌ಲ್
ಲೆಲ್ಲೋ ಲೆಲ್ಲೋ ಪಾಡಿತ್
ಉಮ್ಮತ್ತ ತಿರುವಲಾ
ದಾರಗೊಂಡ್ ಪಾಡನ
ದಾರ್‌ನ ತುದಿಕನ
ಅಲ್ಲತಾರೂಡಲ್ಲಲ್ಲಾ
ಈ ಊರ್‌ಕೆಣೆಯೂರ್
ಕಾವೇರಿ ಕೊಂಡಾಕರೆ
ಬಟ್ಟೊತ್ತ ನೆಲಜೋಂಡ
ಇಗ್ಗುತ್ತಪ್ಪ ದೇವಂಡ

ಒಂದನೆ ತಲೆ ಒಕ್ಕ

....

ಬೆಂದುವರ್ಂಜಿ ಬಂದಿತ್

ಕಾಳಪ್ಪ ಬೈಂಬನೊ

ಕಾಳಪ್ಪಂಡ ಕೊಂಡೋಳು

ಕಂಬೈಮರತ್

ಬೆಂಜಾಂಜಿ ಅಳತಿತ್

....

ಈ ಒಕ್ಕಡ ಕಾರೋಣ

ಕಾರೋಣ ದಯಗೊಂಡ್

ಬೆಂದುರ ಮನೆಯಿಲ್

ನೆಲ್ಲಕ್ಕಿ ಪೆರ್ಕಡ್

ಕಾವೇರಿ ಮಣಪೋಲೆ

ನೆಲ್ಲಕ್ಕಿ ಪೆರ್ಕಡ್

ಇಗ್ಗುತ್ತ ಮಲ್ಮೋಲೆ

ಪಿಮ್ಮಂಡ ಮರಿಯಡ್

ಕೈಪಕ್ಕೆ ಪೂ ಪೋಲೆ

ಕೈಮಕ್ಕ ಪೆರ್ಕಡ್

ಪಾಬಳ್ಳಿ ಕೈ ಪೋಲೆ

ಒಕ್ಕ ಕೊಡಿ ನೇರಡ್

ಕಪ್ಪೊಳೆಲ್ ಕಲ್ಲೋಲೆ

ಅಜ್ಜನಜ್ಜಿ ಬಾವಡ್."[33]

ಹೀಗೆ ಸಾಗುತ್ತದೆ.

ಸುತರಿ ಹಬ್ಬದ [illegible]

ತೆಗೆದುಕೊಂಡು "ಪೊಲಿಯೇ ಬಾ ಪೊಲಿ ಪೊಲಿ ದೇವ" ಎಂದು ಹಾಡುತ್ತಾ

ಮನೆಯ ಅಂಗಳದಲ್ಲಿ ನಿಂತಾಗ ಅಜ್ಜಿಯರು, ತಾಯಿಯಂದಿಯರು, ಸೊಸೆಯಂದಿಯರು ಸೇರಿ ತಳಿಯತಕ್ಕಿ(ಕಂಚಿನ ತಟ್ಟೆಯಲ್ಲಿ ಅಕ್ಕಿಯನ್ನು ತುಂಬಿಸಿ ಅದರ ಮೇಲೆ ಹಣತೆಯನ್ನು ಇಡುವುದು) ದೀಪವನ್ನಿಟ್ಟು ಕಂಚಿನ ತಾಳಗಳೊಂದಿಗೆ ಮನೆಯ ಮುಂಭಾಗದಲ್ಲಿ ನರ್ತಿಸುತ್ತಿದ್ದರು. ಆ ಸಂದರ್ಭದಲ್ಲಿ ಹಾಡುವ ಗೀತೆ ಈ ಕೆಳಗಿನಂತಿದೆ.

ಲೆಲ್ಲೋ ಲೆಲ್ಲೋ ಲೆಲ್ಲೇಲಾ
ಅಲ್ಲತ್ತೇದೂಡಲ್ಲಲ್ಲಾ
ಉಮ್ಮಾದೇವಿ ದೇವಿ ತಾಯಿರ
ಲಕ್ಷ್ಮಿ ದೇವಿ ಮಾತಾಯಿ
ಕವೆ[illegible] ಮರ್ಂಜಿತ್
[illegible] ಮನೆ ಸೇರಿತ್
ಮಾಗುರುನ ತೊತ್ತಿತ್
ಕಾವೇರಮ್ಮ ದೇವಿನ
ಕೈಮಲಂಗಿ ಬೋಡಿತ್
ಮುಂದ್ ಮನೆ ಸುತ್ತೋಲು
ಆಡೊಮ್ಮ ನೀದೇವಿ
ತಾಳ ಕೊಟ್ಟಿಯಂಡೊಮ್ಮ
ಆಡೊಮ್ಮ ತಾಯೇ
ಉಮ್ಮಾ ದೇವಿನ ಬೋಡಿತಾ
ಈ ಆಡುವಾ ನಲ್ಲಾನ
ಮಾಗುರುನ ಬೋಡಿತ್
ಇಕ್ಕಕ್ಕೊಮ್ಮ ಬೆಕ್ಕನಾ
ಮೇಲೆ ನಂಗ ಎಡ್‌ಕೋಲು
ಲೆಲ್ಲೋ ಲೆಲ್ಲೋ ಲೆಲ್ಲೇಲಾ

"ಲೆಲ್ಲೋ ಲೆಲ್ಲೋ" ಸೊಲ್ಲಿನೊಂದಿಗೆ ಆರಂಭವಾಗುವ ಈ ಗೀತೆಯಲ್ಲಿ

ಉಮಾದೇವಿಯ ನೃತ್ಯವನ್ನು ನರ್ತಿಸೋಣ ಲಕ್ಷ್ಮಿದೇವಿ ಕಲ್ಲು ಮೆಟ್ಟಿಲನ್ನು ಹತ್ತಿ ಮಣ್ಣು ಮನೆಯನ್ನು ಸೇರಿದ್ದಾಳೆ. ಕಾವೇರಮ್ಮೆಯನ್ನು ಕೈಜೋಡಿಸಿ ನಮಸ್ಕರಿಸಿ ಮುಂದ್‌ಮನೆ (ಕೊಡವ ಐನ್ ಮನೆಗಳಲ್ಲಿ ಒಂದು ವಿಧ)ಯ ಸುತ್ತಲೂ ತಾಳವನ್ನು ಬಾರಿಸುತ್ತಾ ಉಮ್ಮತ್ತಾಟನ್ನು ನರ್ತಿಸೋಣ ಎಂದು ಹಾಡುತ್ತಾ ನರ್ತಿಸುವ ಈ ನೃತ್ಯದಲ್ಲಿ ಕೊನೆಗೆ ಮಾಗುರುವನ್ನು ಸ್ತುತಿಸುತ್ತಾ ಈ ನೃತ್ಯವನ್ನು ಇಲ್ಲಿಗೆ ನಿಲ್ಲಿಸೋಣ ಎಂದು ಹಾಡುತ್ತಾ ಕೊನೆಗೊಳಿಸುತ್ತಾರೆ. ಹಿಂದೆ ತಾಯಿಯಾದವಳು ತನ್ನ ಮಕ್ಕಳಿಗೆ ಮನೆಯಲ್ಲಿ ಈ ನೃತ್ಯವನ್ನು ನರ್ತಿಸಿ ತೋರಿಸಿ ಕೊಡುತ್ತಿದ್ದಳಂತೆ ಹಾಗೆಯೇ ಬೊಳಕಾಟ್‌ನ ಆರಂಭದಲ್ಲಿಯೂ ಉಮಾದೇವಿಯನ್ನು ಕುರಿತು ಸ್ತುತಿಸುತ್ತಿದ್ದರು ಎನ್ನಲಾಗಿದೆ.[22]

ಉಮ್ಮತ್ತಾಟ್ ನೃತ್ಯದ ಹಿನ್ನೆಲೆ ಕುರಿತು ವಿಭಿನ್ನ ಕಥೆಯೊಂದು ಹೀಗಿದೆ. ಭೂಲೋಕದಲ್ಲಿ ಕವೇರನೆಂಬ ಋಷಿಯಿದ್ದನು. ವಿವಾಹವಾಗಿ ಹತ್ತು ವರ್ಷಗಳಾದರೂ ಸಂತಾನ ಭಾಗ್ಯವಿರಲಿಲ್ಲ. ಇದರಿಂದ ಚಿಂತಾಕ್ರಾಂತರಾದ ದಂಪತಿಗಳು ದೇಶ ಸಂಚಾರ ಹೊರಟು 'ಪೊಮ್ಮಾಲೆ ಕೊಡವು' (ಹೊನ್ನಿನ ಮಾಲೆಯಂತಹ ಕೊಡಗು)ಗೆ ಬಂದರು. ಅಲ್ಲಿನ ಸಯ್ಯಾದ್ರಿ ಬೆಟ್ಟದಲ್ಲಿ ಬ್ರಹ್ಮದೇವನನ್ನು ಕುರಿತು ತಪಸ್ಸು ಮಾಡಿದನು. ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಬ್ರಹ್ಮನು ತನ್ನ ದತ್ತು ಮಗಳು ಲೋಪಾಮುದ್ರೆಯನ್ನು ದಂಪತಿಗಳಿಗೆ ನೀಡಿದನು. ಆ ಸಂದರ್ಭದಲ್ಲಿ ಕಾವೇರಿ ಇಂದಿನವರೆಗೆ ಲೋಪಾಮುದ್ರೆಯಾಗಿ ಬ್ರಹ್ಮದೇವನ ಮಗಳಾಗಿದ್ದ ನಾನು ಮುಂದೆ ಕವೇರನ ಮಗಳು ಕಾವೇರಿಯಾಗುವೆ ಎಂದಳು. ಇದರಿಂದ ಕವೇರ ದಂಪತಿಗಳು ಸಂತಸಗೊಂಡರು. ಬ್ರಹ್ಮ ಬಂದು ನಿಂತುದರಿಂದ ಸಯ್ಯಾದ್ರಿ ಬೆಟ್ಟ ಬ್ರಹ್ಮಗಿರಿಯಾಯಿತು. ಮಗಳೊಡಗೂಡಿ ಕವೇರ ದಂಪತಿಗಳು ಹಲವು ವರ್ಷಗಳ ಕಾಲ ಬಾಳಿದರು.

ಕವೇರ ದಂಪತಿಯ ಮರಣಾನಂತರ ಕಾವೇರಿ ಒಂಟಿಯಾದಳು. ಆಗ ಆಕೆಯ ಸಹಾಯಕ್ಕೆ ಬ್ರಹ್ಮಗಿರಿ ತಪ್ಪಲಲ್ಲಿ ಇದ್ದ ಕೆಲವು ಕೊಡವತಿ ಹೆಣ್ಣುಮಕ್ಕಳು ಬ್ರಹ್ಮಗಿರಿಗೆ ಬಂದು ನೆಲೆಸಿದರು. ಈ ಸಂದರ್ಭದಲ್ಲಿ ಕಾವೇರಿ ತಾನು ಮೇಲುಲೋಕದಲ್ಲಿ ಉಮಾದೇವಿಯಾಗಿ, ನಂತರ ಲೋಪಾಮುದ್ರೆಯಾಗಿ ಅನಂತರ ಕವೇರನ ಮಗಳು ಕಾವೇರಿಯಾದೆನೆಂದು

ತನ್ನ ಜನ್ಮ ವೃತ್ತಾಂತವನ್ನು ಹೇಳುತ್ತಾಳೆ.

ಅದನ್ನು ಕೇಳಿದ ಕೊಡವತಿಯರು ಉಮಾದೇವಿಯಾಗಿದ್ದಾಗ ತನ್ನ ಸಖಿಯರೊಂದಿಗೆ ನರ್ತಿಸಿದ ನೃತ್ಯವನ್ನು ತಮಗೂ ಕಲಿಸಿಕೊಡಬೇಕೆನ್ನುತ್ತಾರೆ. ಇದಕ್ಕೆ ಒಪ್ಪಿದ ಕಾವೇರಿ ಈಗ ತಾನು ಕಾವೇರಮ್ಮೆ ಎಂಬ ಕೊಡವ ಹೆಸರಿನಲ್ಲಿದ್ದು, ಇಲ್ಲಿನ ಪ್ರಕೃತಿ, ಆಚಾರಕ್ಕನುಗುಣವಾಗಿ ಹಾಡುತ್ತಾ ನರ್ತಿಸಿದಳಂತೆ. ಅದನ್ನು ಕಲಿತ ಕೊಡವತಿಯರು ಕಾವೇರಮ್ಮೆಯನ್ನು ಮಧ್ಯೆ ನಿಲ್ಲಿಸಿ ಸುತ್ತಲೂ ನರ್ತಿಸಿದರಂತೆ. ಇದರಿಂದ ಸಂತೋಷಗೊಂಡ ಕಾವೇರಮ್ಮೆ ತನ್ನ ನಿಜರೂಪವಾದ ಉಮಾದೇವಿಯ ರೂಪವನ್ನು ತಳೆದಳು. ಇದನ್ನು ಕಂಡ ಕೊಡವತಿಯರು ಆ ನೃತ್ಯಕ್ಕೆ 'ಉಮ್ಮತ್ತಾಟ್' ಎಂದರು. ಉಮಾದೇವಿ ಕಲಿಸಿದ ನೃತ್ಯ ಉಮ್ಮತ್ತಾಟ್ ಆಯಿತು ಎನ್ನಲಾಗಿದೆ.

ಮಡಿಕೇರಿ ಸಮೀಪದ ಮುಕ್ಕೋಡ್ಲು ಗ್ರಾಮದ ಕೋಟೆಬೆಟ್ಟ ಈಶ್ವರ ಕಲಾತಂಡದ ಹೆಣ್ಣುಮಕ್ಕಳು ನರ್ತಿಸುವ ಉಮ್ಮತ್ತಾಟ್ ವಿಶಿಷ್ಟವಾಗಿದೆ. ಇದು ಉಮ್ಮತ್ತಾಟ್‌ನ ಮೂಲ ರೂಪ ಎಂಬುದು ಅಲ್ಲಿನವರ ಅಭಿಪ್ರಾಯವಾಗಿದೆ. ಇಲ್ಲಿ ಕಲಾವಿದರು ಸಮಸಂಖ್ಯೆಯಲ್ಲಿರುತ್ತಾರೆ. ಕೊಡವ ಸಾಂಪ್ರದಾಯಿಕ ಸೀರೆಯನ್ನು ಧರಿಸಿ ಕೈಯಲ್ಲಿ ತಾಳಗಳನ್ನು ಹಿಡಿದು ಹಾಡಿಗೆ ಅನುಗುಣವಾಗಿ ತಾಳವನ್ನು ಬಾರಿಸುತ್ತಾ ನರ್ತಿಸುತ್ತಾರೆ. ಈ ನೃತ್ಯದಲ್ಲಿ ವಿವಿಧ ವಿನ್ಯಾಸಗಳೇನು ಕಾಣಿಸುವುದಿಲ್ಲ. ಒಂದೇ ಭಂಗಿಯಲ್ಲಿ ಹಿಂದಕ್ಕೂ ಮುಂದಕ್ಕೂ ತಿರುಗುತ್ತಾ, ತಾಳವನ್ನು ತಟ್ಟುತ್ತಾ ನರ್ತಿಸಲಾಗುತ್ತದೆ. ಇಲ್ಲಿ ಹಿಮ್ಮೇಳವಾಗಿ ಹಾಡುವ ಗೀತೆ ಕೊಡವ ಜನಪದ ಗೀತೆಯಾದ ಬಾಳೋಪಾಟ್‌ನ ಧಾಟಿಯಲ್ಲಿ ಸಾಗುತ್ತದೆ. ಕಾವೇರಮ್ಮೆಯ ಸ್ತುತಿ, ವ್ಯವಸಾಯ ಸಂಬಂಧಿ ಕೆಲಸಗಳ ವಿವರಣೆ, ದೈವಸ್ತುತಿಯನ್ನು ಈ ಗೀತೆ ಒಳಗೊಂಡಿದ್ದು; ಬಿಡಿಗೀತೆಗಳು ಇರುವುದಿಲ್ಲ.

ಯಾವುದೇ ಒಂದು ಜನಪದ ಕಲೆ ಉಳಿಯಬೇಕಾದರೆ ಅದು ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾವಣೆಗಳನ್ನು ಅಳವಡಿಸಿಕೊಂಡು, ಅದರ ಮೂಲರೂಪಕ್ಕೆ ಚ್ಯುತಿ ಬರದಂತೆ ಪರಿಷ್ಕರಣೆಯೊಂದಿಗೆ ಸದಾ ಪ್ರದರ್ಶನಕ್ಕೆ ಒಳಗಾಗಬೇಕು. ಕಲೆಯನ್ನು ಉಳಿಸಿ ಬೆಳೆಸುವ ಮನಸ್ಸು ಇದಕ್ಕೆ ಬೇಕಾಗುತ್ತದೆ. ಹೀಗಾಗಿ ಉಮ್ಮತ್ತಾಟ್ ನೃತ್ಯವನ್ನು ಉಳಿಸಿ ಬೆಳೆಸಬೇಕೆನ್ನುವ ಹಿರಿಯರ

ತುಡಿತ ಹಾಗೂ ಅನಿವಾರ್ಯತೆ ಹಿರಿಯ ಜನಪದ ಕಲಾವಿದರನ್ನು ಶಿಷ್ಟ ರಚನೆಗಳನ್ನು ಸೇರಿಸಿಕೊಳ್ಳುವಂತೆ ಪ್ರೇರೇಪಿಸಿರಬಹುದು ಎನ್ನಬಹುದು.

ಇತ್ತೀಚಿನ ದಿನಗಳಲ್ಲಿ

"ಬಾ ಬಾರಿ। ಯಂಗ ಬೊಳ್ಳಿ ತಾಳೋಡೆ

ಸಾಲಾಯಿ ನಿಂದಿತಲ್ಲಾ"

ಎನ್ನುವ ಗೀತೆ ಆರಂಭದ ಹಾಡಾಗಿ ಸೇರ್ಪಡೆಗೊಂಡಿದೆ. ಇವೆಲ್ಲವನ್ನೂ ಗಮನಿಸಿದಾಗ ಇಲ್ಲಿ ಅಳಿವಿನಂಚಿನಲ್ಲಿದ್ದ ಕಲೆಯನ್ನು ಉಳಿಸಬೇಕೆನ್ನುವ ಹಿರಿಯರ ಕಾಳಜಿ, ಪ್ರಸ್ತುತ ಸಮಾಜದ ಆಶೋತ್ತರಗಳನ್ನು ಪೂರೈಸುವಂತಹ ಪರಿಷ್ಕರಣೆ ಈ ಎಲ್ಲಾ ಚಿಂತನೆಗಳು ತಮ್ಮ ಕಾರ್ಯ ನಿರ್ವಹಿಸಿವೆ ಎನ್ನಬಹುದು.

ಹಿಂದೆ ಮನೆಯ ಮುಂದ್‌ನಲ್ಲಿ ನಡೆಯುತ್ತಿದ್ದ ಈ ನೃತ್ಯ ಇಂದು ಎಲ್ಲಾ ಸಾಮಾಜಿಕ ಸಮಾರಂಭಗಳಲ್ಲೂ ಪ್ರದರ್ಶಿಸಲ್ಪಡುತ್ತಿದೆ.

ಅಡಿ ಟಿಪ್ಪಣಿಗಳು

೧- ಕೊಡಗಿನ ಭೌಗೋಳಿಕ ವಿಂಗಡಣೆ. ಇದನ್ನು ಹಾಲೇರಿ ಅರಸರ ಆಳ್ವಿಕೆಯ ಅವಧಿಯಲ್ಲಿ ನಡೆಸಲಾಯಿತು. ಕಾವೇರಿ ನದಿಯ ಮೇಲ್ಭಾಗದ ಪ್ರದೇಶಗಳನ್ನು 'ಮೇಂದಲೆ ನಾಡ್' ಎಂದೂ ಕೆಳಭಾಗವನ್ನು 'ಕ್‌ಗ್ಗಟ್ಟ್‌ನಾಡ್' ಎಂದೂ ಕರೆಯಲಾಗುತ್ತದೆ.

೨-ಮದುವೆ, ಹಬ್ಬ, ಜಾತ್ರೆ ಮೊದಲಾದ ಮಂಗಳ ಕಾರ್ಯ ಹಾಗೂ ಮರಣ ಸಂದರ್ಭದಲ್ಲಿ ನುಡಿಸುವ ವಾದ್ಯ ಮೇಳ. ಕೊಂಬು, ಮೋರಿ, ಪರೆ, ಡೋಲು, ಶೃತಿ, ತಾಳ ಇಲ್ಲಿರುವ ವಾದ್ಯ ವಿಶೇಷಗಳು.

೩-ಹುರಿದ ಕುಸಲಕ್ಕಿಯ ಪುಡಿಗೆ ಬಾಳೆಹಣ್ಣನ್ನು ಕಲಸಿ ಮಾಡುವ ಹುತ್ತರಿ ಹಬ್ಬದ ವಿಶೇಷ ಉಣಿಸು.

೪-ವಕ್ತೃ -ನಾಯಕಂಡ ಚಿಣ್ಣಪ್ಪ, ಕೈಕಾಡು

೫-ವಕ್ತೃಗಳು – ದಿ. ಪೂವಡೆರ ಅಪ್ಪಾಜಿ, ದಿ. ಬಿಜ್ಜಂಡ ಮಂದಣ್ಣ, (ಸಂ) ಬಾಚರಣಿಯಂಡ ಪಿ. ಅಪ್ಪಣ್ಣ, ಕುಶಾಲನಗರ

೬-ವಕ್ತೃ-ನಾಯಕಂಡ ಚಿಣ್ಣಪ್ಪ, ಕೈಕಾಡು

೭-ವಕ್ತೃ-ಚೇನಂಡ ಕೆ. ಸೋಮಯ್ಯ, ಕೋಕೇರಿ

೮-ವಕ್ತೃ – ಕಬ್ಬೆವೊಕ್ಕಡ ಶಾರದಾ ಸೋಮಯ್ಯ (೪೨) ತೋರ ಗ್ರಾಮ, ಕೊರ್ತಿಕಾಡ್, ಪೆಗ್ಗಳ ಅಂಚೆ.

೯-ವಕ್ತೃ– ಕುಡಿಯಡ ಬೋಜಕ್ಕಿ ಈರಪ್ಪ (೩೭) ನಾಲಡಿ ಗ್ರಾಮ ಕಕ್ಕಬ್ಬೆ ಅಂಚೆ.

೧೦-ವಕ್ತೃ– ಎಂ.ಪಿ.ಪೂವಯ್ಯ (೩೬)೨ನೇ ರುದ್ರುಗುಪ್ಪೆ ಗ್ರಾಮ, ಕಂಡಂಗಾಲ ಅಂಚೆ

೧೧-ವಕ್ತೃ– ಬಾಚರಣಿಯಂಡ ಪಿ. ಅಪ್ಪಣ್ಣ.

೧೨-ಎತ್ತಿನ ಹೇರಾಟ ಎಂದು ಕರೆಯಲಾಗುತ್ತದೆ. ಹಬ್ಬಕ್ಕೆ ಬೇಕಾದ ಅಕ್ಕಿ, ತೆಂಗಿನಕಾಯಿ ಮುಂತಾದ ಪೂಜಾ ಸಮಾಗ್ರಿಗಳ ಹೊರೆಯನ್ನು ಎತ್ತಿನ ಮೇಲೆ ಹೊರಿಸಿ ದೇವಸ್ಥಾನಕ್ಕೆ ಕರೆದೊಯ್ಯಲಾಗುತ್ತದೆ. ತಮ್ಮ ದನ ಕರುಗಳ ರಕ್ಷಣೆಗಾಗಿ

ಎತ್ತ್‌ಪೋರಾಟದ ಹರಕೆಯನ್ನು ಹೊತ್ತುಕೊಳ್ಳುವ ಸಂಪ್ರದಾಯ ಕೊಡವರಲ್ಲಿದೆ.

೧೩– ಆಯಾ ಊರಿನ ಹಬ್ಬದ ಸಂದರ್ಭದಲ್ಲಿ ದೇವರ ಬಿಂಬವನ್ನು ಅಲಂಕರಿಸಿ ಅದನ್ನು ಬ್ರಾಹ್ಮಣರು ತಲೆಯ ಮೇಲೆ ಹೊತ್ತು ದೇವಸ್ಥಾನದ ಸುತ್ತ ಚೆಂಡೆಯ ನಾದಕ್ಕೆ ತಕ್ಕಂತೆ ನರ್ತಿಸುವ ಪರಿಪಾಟ ಇಂದಿಗೂ ಕೊಡಗಿನಲ್ಲಿದೆ.

೧೪–ದೇವಸ್ಥಾನದಲ್ಲಿ ದೇವರ ದೀಪವನ್ನು ಹೊರುವವನು.

೧೫–Dr. Ashok Alva, OLASARI, Regional Resources Centre for Folk Performing Arts, Udupi, 2001 P.85

೧೬–ವಕ್ತೃ–ನಂಬುಡುಮಾಡ ಸಿ. ಸುಬ್ಬಯ್ಯ(೬೨), ಕಂಡಂಗಾಲ.

೧೭–ಅಪ್ಪಣ್ಣ ಬಾಚರಣಿಯಂಡ ಪಿ. ಕುಶಾಲನಗರ, ಕೊಡಗು.

೧೮–ನಾಗರಾಜ್ ಎಂ.ಜಿ. ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, 1993 ಪು.287

೧೯– ಕನ್ನಡ ಜನಪದ ಸಾಹಿತ್ಯ : ಶೈಲಿ–ಭಾಷಾ ವೈಜ್ಞಾನಿಕ ವಿವೇಚನೆ, ವಿಲ್ಯಂ ಮಾಡ್ತ, ಕರ್ನಾಟಕ ಜಾನಪದ, (ಪ್ರಸಂ.) ಡಾ. ಎಸ್. ಕರೀಂಖಾನ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1989, ಪು.154

೨೦–ವಕ್ತೃ–ಬಾಚರಣಿಯಂಡ ಪಿ. ಅಪ್ಪಣ್ಣ, ಕುಶಾಲನಗರ

೨೧–ಅದೇ

೨೨–ಅದೇ

೨೩–ವಕ್ತೃ–ಬೊಳ್ಳಚೆಟ್ಟಿರ ಕುಶಾಲಪ್ಪ, ಬಲಂಬೇರಿ

೨೪–ವಕ್ತೃ– ಬಾಚರಣಿಯಂಡ ಪಿ. ಅಪ್ಪಣ್ಣ, ಕುಶಾಲನಗರ

೨೫–ಅದೇ

೨೬–ವಕ್ತೃ–ಪಾಲಂದಿರ ಪಿ. ದೇವಯ್ಯ(೯೨), ಬಲಂಬೇರಿ

೨೭–ಅದೇ

ಅಧ್ಯಾಯ–೩

ಕೊಡವ ಮತ್ತು ಕೊಡವವೇತರ ಜನಪದ ನೃತ್ಯಗಳ ತೌಲನಿಕ ನೋಟ

ಕೊಡವ ಎಂಬುದು ಕೊಡವ ಜನಾಂಗವೂ ಸೇರಿದಂತೆ ಕೊಡಗಿನ ಸುಮಾರು ಇಪ್ಪತ್ತಮೂರು ಜನಾಂಗಗಳ ಮಾತೃಭಾಷೆ. ಕನ್ನಡ ಭಾಷೆಯಂತೆ ಕೊಡವ ಭಾಷೆಯೂ ಒಂದು ಸಮೂಹದ ಗಣಿ. ಇಲ್ಲಿ ಕೊಡವ ಭಾಷೆಯೊಂದಿಗೆ ಕನ್ನಡ, ಮಲೆಯಾಳಂ, ತುಳು, ಅರೆಭಾಷೆ ಇತ್ಯಾದಿ ಹಲವು ಭಾಷೆಗಳಿವೆ. ಈ ಎಲ್ಲಾ ಭಾಷೆಗಳು ತಮ್ಮದೇ ಆದ ಸಂಸ್ಕೃತಿ ಹಾಗೂ ಜನಪದ ನೃತ್ಯ ಸಂಪತ್ತನ್ನು ಹೊಂದಿವೆ. ಒಂದೇ ಭೂ ಪ್ರದೇಶದೊಳಗೆ ಈ ಎಲ್ಲಾ ಜನಪದ ನೃತ್ಯಗಳು ಮೂಡಿಬಂದಿದ್ದರೂ ಆಯಾ ಭಾಷೆ, ಸಂಸ್ಕೃತಿಗೆ ತಕ್ಕಂತೆ ಅವುಗಳಲ್ಲಿ ವಸ್ತು ವೈವಿಧ್ಯತೆ ಮತ್ತು ವ್ಯತ್ಯಾಸಗಳನ್ನೂ ಕಾಣಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಕೊಡವ, ತುಳು, ಅರೆಭಾಷೆ, ಮಲೆಯಾಳಂ ಮತ್ತು ಕನ್ನಡ ಜನಪದ ನೃತ್ಯಗಳ ನಡುವೆ ಸಾಮ್ಯತೆ ಹಾಗೂ ಸಂಬಂಧಗಳನ್ನು ಗಮನಿಸಬಹುದು. ಅವುಗಳನ್ನು ಈ ಕೆಳಗಿನ ಶೀರ್ಷಿಕೆಗಳಲ್ಲಿ ವಿಶ್ಲೇಷಿಸಲಾಗಿದೆ.

೧) ಕೊಡವ ಮತ್ತು ಅರೆಭಾಷೆ ಜನಪದ ನೃತ್ಯಗಳು :–

ಕೊಡಗಿನಲ್ಲಿ ಕೊಡವರ ಆಚಾರ ವಿಚಾರಗಳೊಂದಿಗೆ ಬೆರೆತು ಕೈಲ್‌ಪೊಳ್ದ್, ಪುತ್ತರಿ, ಕಾವೇರಿ ಸಂಕ್ರಮಣ, ಬಿಸು ಚಂಗ್ರಾಂದಿ (ಸಂಕ್ರಮಣ) ಮುಂತಾದ ಹಬ್ಬಗಳನ್ನು ಕೊಡವರಂತೆಯೇ ಆಚರಿಸುವವರು ಗೌಡ ಜನಾಂಗದವರು. ಇವರಾಡುವ ಭಾಷೆ ಅರೆಭಾಷೆ (ಅರೆಗನ್ನಡ ಭಾಷೆ).

ಸುಮಾರು ೩೫೦ ವರ್ಷಗಳಿಗೂ ಮುಂಚೆ ದಕ್ಷಿಣಕನ್ನಡ ಭಾಗದಿಂದ

ಬಂದ ಇವರು ತಮ್ಮದೇ ಆದ ವಿಭಿನ್ನ ಸಂಸ್ಕೃತಿಯನ್ನು ಹೊಂದಿದ್ದರೂ; ಅವರು ಆಚರಿಸುವ ಹಬ್ಬ, ಧಾರ್ಮಿಕ ವಿಧಿ ವಿಧಾನಗಳಲ್ಲಿ, ಪದ್ಧತಿ ಪರಂಪರೆಗಳಲ್ಲಿ ಆಚಾರ ವಿಚಾರಗಳಲ್ಲಿ ಕೊಡವ ಸಂಸ್ಕೃತಿಯ ಪ್ರಭಾವ ಹಾಗೂ ಸಂಬಂಧವನ್ನು ಕಾಣಬಹುದು.

ಕೊಡವ ಜನಪದ ನೃತ್ಯವಾದ ಜೋಯಿಕಳಿ ಹಾಗೂ ಗೌಡ ಜನಾಂಗದವರು ಆಡುವ "ಜೋಗಿ ಆಟ"ದಲ್ಲಿ ಸಾರೂಪ್ಯಗಳನ್ನು ಗಮನಿಸಬಹುದು. ಹುತ್ತರಿ ಹಬ್ಬದ ಸಂದರ್ಭದಲ್ಲಿ ನರ್ತಿಸುವ ಈ ನೃತ್ಯದ ಗೀತೆಗಳಲ್ಲೂ ಸಾಮ್ಯತೆಯನ್ನು ಗಮನಿಸಬಹುದು.

ಕೊ: ತಾಲಿಲೆಲ್ಲೇ ಲೆಲ್ಲೇಲವ್ವ ತಾಲಿಲೆಲ್ಲೇ ಲೆಲ್ಲೇಲಾ

....

ಎಲ್ಲಿಂಜ ಜೋಯಿ ಕೊಡವು ಮರಿಂಜ? ತಾಲಿಲೆಲ್ಲೇ ಲೆಲ್ಲೇಲಾ
ಮಾಣಿ ಮಲೆನಾಡ್ ಬಂದೋರ್ ಜೋಯಿ ತಾಲಿಲೆಲ್ಲೇ ಲೆಲ್ಲೇಲಾ
ಪುತ್ತರಿ ನಮ್ಮೆನ ಕಾಂಬಕೆ ಬಂದ ತಾಲಿಲೆಲ್ಲೇ ಲೆಲ್ಲೇಲಾ
ಜೋಯಿನ ಪೊಯ್ಯತಿ ಬಯ್ಯತಿರವ್ವ ತಾಲಿಲೆಲ್ಲೇ ಲೆಲ್ಲೇಲಾ
ಜೋಯಿನ ಪೊಜ್ಜಕ ಬೊಣ್ಣೂರ್ ಪಾರು ತಾಲಿಲೆಲ್ಲೇ ಲೆಲ್ಲೇಲಾ

"ತಾಲಿಲೆಲ್ಲೆ ಲೆಲ್ಲೇಲವ್ವ ಲಾಲಿಲೆಲ್ಲೇ ಲೆಲ್ಲೇಲಾ" ಎಂದು ಈ ನೃತ್ಯ ಗೀತೆ ಆರಂಭವಾಗುತ್ತದೆ. ಎಲ್ಲಿಂದ ಜೋಗಿ ಕೊಡಗಿಗೆ ಬಂದೆ? ಎಂಬ ಪ್ರಶ್ನೆಗೆ ಮಾಣಿ ಮಲೆನಾಡ್(ಕೇರಳ) ದಿಂದ ಬಂದಂತ ಜೋಗಿ ಎಂಬ ಉತ್ತರವಿದೆ. ಹುತ್ತರಿಹಬ್ಬವನ್ನು ಕಾಣಲು ಬಂದೆ. ಜೋಗಿಯನ್ನು ಹೊಡೆಯಬೇಡಿ, ಬಯ್ಯಬೇಡಿರವ್ವಾ, ಜೋಗಿಯನ್ನು ಹೊಡೆದರೆ ಬೂದಿ ಮಾತ್ರ ಹಾರುವುದು". ಹೀಗೆ ಈ ಗೀತೆ ಸಾಗುತ್ತದೆ.

ಅರೆಭಾಷೆ: ಓ...ತಾಲಿ ....ತಾಲಿಯೋ......ಲೆಲೇಲಾ...
ನೀ ಎಲ್ಲಿಂದ ಬಂದ್ಯೋ ... ಮಾಯದ ಜೋಗಿ?
ನಾ ಮಾಯಂದ ಬಂದೆ ... ಮಾಯದ ಜೋಗಿ ತಾಲಿ
ನೀ ಎಲ್ಲಿಂದ ಬಂದ್ಯೋ ಬೈರಪ್ಪ ಜೋಗಿ ?

ನಾ ಕಿಗ್ಗಟ್ಟ್‌ನಾಡ್‌ಂದ ಬಂದೆನೋ ತಾಯವ್ವಾ...ತಾಲಿ
ಯಾಕಾಗಿ ಜೋಗಪ್ಪ ಕೊಡ್ಗಿಗೆ ಬಂದ್ಯೋ
ಕೊಡ್ಗ್‌ನಾ ಹುತ್ತರಿ ನೋಡಿಕೇ ಬಂದೆ ...ತಾಲಿ
ಹುತ್ತರಿ ಹಬ್ಬಕ್ಕೆ ಯಾಕಾಗಿ ಬಂದ್ಯೊ?
ತಂಬಿಟ್ಟ್ ತಿಂಬಕೆ ಹಬ್ಬಕ್ಕೆ ಬಂದೆ ...ತಾಲಿ

....

ಜೋಗಿನ ಹೊಡಿಬ್ಯಾಡಿ ಬಯ್ಯ್‌ಬ್ಯಾಡಿ ಮಕ್ಕಳೇ
ಜೋಗಿನ ಹೊಡ್‌ದರೆ ಸೊಂಟಾನೆ ಉಳುಕ್ಯೋದು[1]

ಹಾಗೆಯೇ ಕೊಡಗಿನ ಹುತ್ತರಿ ಹಬ್ಬದ ಸಂದರ್ಭದಲ್ಲಿ 'ಜೋಗಿ ಆಟವು' ಪ್ರಮುಖ ಪಾತ್ರ ವಹಿಸುತ್ತಿದ್ದು, ಹುತ್ತರಿಯ ಮಾರನೇ ದಿನದಿಂದ ಊರಿನ ಮನೆಮನೆಗಳಿಗೆ ತೆರಳಿ ಜೋಗಿಯು ತನ್ನದೇ ಆದ ಜಾನಪದ ಕೌಶಲ್ಯದಿಂದ ಆಶೀರ್ವಾದ ಮಾಡಿ, ಅಲ್ಲಿ ಸಿಗುವ ತಂಬಿಟ್ಟು, ಬಾಳೆಹಣ್ಣಿನ ದಾನವನ್ನು ತೆಗೆದುಕೊಂಡು ಮುಂದಿನ ಮನೆಗೆ ಹೋಗುವುದು ರೂಢಿಯಲ್ಲಿತ್ತು. ಮುಖಕ್ಕೆ ಕಪ್ಪು ಬಣ್ಣ, ಮೈತುಂಬ ಒಣಗಿದ ಬಾಳೆ ಎಲೆಗಳನ್ನು ಕಟ್ಟಿ, ಸೊಂಟಕ್ಕೆ ಗಂಟೆ, ಕೈಯಲ್ಲಿ ದೊಣ್ಣೆಯನ್ನು ಊರುತ್ತಾ, ಮುಳ್ಳಿನ ಅಂಗರೆ ಕೋಲನ್ನು ಹಿಡಿದು, ತಲೆಯಲ್ಲಿ ಬಾಳೆಲೆಯ ಟೋಪಿ ಹಾಕಿ ಅದಕ್ಕೆ ಚೆಂಡು ಹೂವಿನ ಮಾಲೆ ಸಿಕ್ಕಿಸಿ, ಕುತ್ತಿಗೆಗೆ ಚೆಂಡು ಹೂವಿನ ಮಾಲೆ ಧರಿಸಿ ಘಣ ಘಣ ಘಂಟೆಯ ನಾದದೊಂದಿಗೆ ಮನೆಗೆ ಬರುತ್ತಿದ್ದ ಸಂದರ್ಭವನ್ನು ದಾಖಲಿಸುವ ಪ್ರಯತ್ನಗಳು ನಡೆದಿವೆ.[2] ಹೀಗೆ ಇವುಗಳನ್ನು ಗಮನಿಸಿದಾಗ ಸಾರೂಪ್ಯತೆಯನ್ನು ಗುರುತಿಸಬಹುದು. ಇಲ್ಲಿ ಕೊಡವ ಮತ್ತು ಅರೆಭಾಷೆ ಸಂಸ್ಕೃತಿಗಳ ನಡುವೆ ಇರುವ ಅನ್ಯೋನ್ಯ ಸಂಬಂಧ ಹಾಗೂ ಪ್ರಭಾವವನ್ನು ಕಾಣಬಹುದು.

೨. ಕೊಡವ ಮತ್ತು ತುಳು ಜನಪದ ನೃತ್ಯಗಳು :-

ತನ್ನ ಸುತ್ತಲಿನ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಂದ ಪ್ರಭಾವಿತಗೊಳ್ಳದ ಯಾವುದೇ ಭಾಷೆ, ಸಾಹಿತ್ಯ, ಸಂಸ್ಕೃತಿ ಜಗತ್ತಿನಲ್ಲಿಲ್ಲ ಎನ್ನಬಹುದು.

ಜಾನಪದ ಇದಕ್ಕೆ ಹೊರತಲ್ಲ. ದಕ್ಷಿಣಕನ್ನಡ ಜಿಲ್ಲೆ ಭೌಗೋಳಿಕವಾಗಿ ಕೊಡಗಿಗೆ ಸಮೀಪದಲ್ಲಿದೆ. ಹಾಗೂ ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ .ತುಳು ಭಾಷೆಯ ಮೂಲನೆಲೆ ದಕ್ಷಿಣ ಕನ್ನಡ ಜಿಲ್ಲೆ. ಇದು ಭೌಗೋಳಿಕವಾಗಿ ಕೊಡಗಿಗೆ ಸಮೀಪದಲ್ಲಿದೆ. ಹಾಗು ತುಳುಭಾಷಿಕ ಜನರೂ ಕೊಡಗಿನಲ್ಲಿ ವಾಸವಾಗಿದ್ದಾರೆ. ಹೀಗಾಗಿ ಈ ಎರಡು ಭಾಷೆ ಹಾಗೂ, ಜಾನಪದದಲ್ಲಿ ಸಮಾನ ಅಂಶಗಳನ್ನು ಗುರುತಿಸಬಹುದು. ಕೊಡವರಲ್ಲಿ ಕೆಲವೆಡೆಯಲ್ಲಿ ಆಚರಣೆಯಲ್ಲಿರುವ ಪಾಷಾಣಮೂರ್ತಿ, ಧರ್ಮದೇವತೆ, ಕಲ್ಲೂರ್ಟಿ, ಕುಳಿಯ (ಗುಳಿಗ) ಪಂಜೂರ್ಲಿ ಮುಂತಾದ ಭೂತಗಳ ಕೋಲ ಮತ್ತು ತೆರೆಗಳಲ್ಲಿ ಬಹುಪಾಲು ತುಳು ಸಂಸ್ಕೃತಿಯ ಪ್ರಭಾವವನ್ನು ಕಾಣಬಹುದು.

ಕೊಡಗಿನಲ್ಲಿ ಬೋಡ್‌ಹಬ್ಬದ ಸಂದರ್ಭದಲ್ಲಿ ಮನೆಮನೆಗೆ ಹೋಗಿ ಕುಣಿಯುವ ಜೋಯಿ (ಜೋಗಿ) ಹಾಗು ಚೂಳೆ(ಸೂಳೆ) ವೇಷಗಳ ಕುಣಿತಕ್ಕೆ ಸಂಬಂದಿಸಿದ ವಿವರಗಳು ತುಳುನಾಡಿನಲ್ಲಿ ಆರಾಧನೆಗೊಳ್ಳುವ ಪುರುಷಭೂತ ಮತ್ತು ಸಿದ್ದವೇಷ ಕುಣಿತದೊಂದಿಗೆ ಸಂಬಂಧ ಹೊಂದಿರುವುದು ಕಂಡುಬರುತ್ತದೆ.

ಕೊಡವ ಜನಪದ ನೃತ್ಯವಾದ ಜೋಯಿಕಳಿಯನ್ನು ತುಳುನಾಡಿನ ಸುಳ್ಯ, ಬೆಳ್ತಂಗಡಿ ಪರಿಸರದಲ್ಲಿ ಸುಗ್ಗಿಹುಣ್ಣಿಮೆಯ ಸಂದರ್ಭದಲ್ಲಿ ನಡೆಸುವ ಸಿದ್ದವೇಷದೊಂದಿಗಿನ ಸಮೀಕರಣಕ್ಕೆ ಸಂಬಂಧಿಸಿದಂತೆ, ಡಾ. ಪುರುಷೋತ್ತಮ ಬಿಳಿಮಲೆಯವರ 'ಸಿದ್ದವೇಷ: ಪ್ರತಿಭಟನೆ ಮತ್ತು ನಿರಸನ' ಎಂಬ ಲೇಖನ ನಿರ್ದಿಷ್ಟ ಸಾಕ್ಷಿಯನ್ನು ಒದಗಿಸುತ್ತದೆ."ಸಿದ್ದವೇಷದವರನ್ನು ಪುರುಷ ಮಕ್ಕಳೆಂದು ಕರೆಯುವುದುಂಟು. ಪುರುಷರೆಂದೇ ಕರೆಯುವ ಸಂಪ್ರದಾಯ ವಾಡಿಕೆಯಲ್ಲಿದೆ. ಜೊತೆಗೆ ಸುಳ್ಯದ ಪರಿಸರದಲ್ಲಿ ಗೌಡರಿಂದ ಆರಾಧನೆಗೆ ಒಳಪಡುವ "ಪುರುಷ ಭೂತವು" ಕೂಡಾ ಇಲ್ಲಿ ಉಲ್ಲೇಖಾರ್ಹ.

ಈ ಭೂತವು ತಾನು ಕಾಶಿಗೆ ಹೋಗಿ ಕಾಲಭೈರವನನ್ನು ಪೂಜಿಸಿ ಬರುವೆನೆಂದು ಹೇಳುತ್ತದೆ. ಜೊತೆಗೆ ಭಾಗಮಂಡಲದಲ್ಲಿ ಸೂಳೆಯರ ಮೇಳ ಮಾಡಿಸಿದನೆಂದೂ ಹೇಳಿಕೊಳ್ಳುತ್ತದೆ"[3]. ಈ ಹಿನ್ನೆಲೆಯಲ್ಲಿ ಜೋಯಿಕಳಿಯ ವೇಷಧಾರಿಗಳಿಗೂ ಸಿದ್ದವೇಷದ ಪುರುಷಮಕ್ಕಳಿಗೂ ಸಾಮ್ಯತೆಯನ್ನು ಗುರುತಿಸಬಹುದು.

ಕೊಡಗಿನ ಕಡಿಯತ್‌ನಾಡಿನ ಭಾಗದಲ್ಲಿ ಕಕ್ಕಡ ಮಾಸದಲ್ಲಿ ಪಾಲೆ ಜನಾಂಗದ ಗಂಡಸರು "ಕಕ್ಕಡತಜ್ಜಿ"(ಕಕ್ಕಡ ಮಾಸದ ಅಜ್ಜಿ) ಹಾಗೂ ಆಕೆಯ ಹಿಂಬಾಲಕರಾದ "ಕೆಣ್‌ಂಜ"ಗಳ ವೇಷ ಧರಿಸಿ ಊರಿನ ಮನೆಮನೆಗಳಿಗೆ ಹೋಗುವ ವಾಡಿಕೆ ಇತ್ತು. ಈ ಸಂದರ್ಭದ ಇವರ ವೇಷಭೂಷಣಗಳಲ್ಲಿ ಹಾಗೂ ಅವರು ನರ್ತಿಸುವ "ಕೆಣ್‌ಂಜಕಳಿ"ಯಲ್ಲಿ ಹಾಡುವ ಹಾಡಿನಲ್ಲಿ ತುಳು ಜನಪದ ನೃತ್ಯವಾದ "ಆಟಿಕಳೆಂಜ"ದ ಪ್ರಭಾವವನ್ನು ಗಮನಿಸಬಹುದು.

ಕೊ : ಏ ಕೆಣ್‌ಂಜ ಬಾ ಕೆಣ್‌ಂಜ
ಓಣಿ ಮರೆ ಮರೆ ಬಾ ಕೆಣ್‌ಂಜ
ಬಾಳೆ ಸೆರೆಸೆರೆ ಬಾ ಕೆಣ್‌ಂಜ[8]
ತು : ಕಳೆಂಜ ಕಳೆಂಜೇನೋ ಕಳೆಂಜೆ
ಏರೆನ ಮಗೆನೋ ಕಳಂಜೆ
ಮಾಯಂತರಸು ಮಗೆ ಕಳಂಜೆ
ಸುಖೋತ ಮಾನ್ಯಂಡೆ ಕಳೆಂಜೆ

ಹೀಗೆ ಸಾಗುವ ಈ ಗೀತೆಯನ್ನು "ಕೆಣ್‌ಂಜಕಳಿ" ಗೀತೆಯೊಂದಿಗೆ ಹೋಲಿಸಿದಾಗ ಇವುಗಳ ತಾಳ, ಲಯ ಹಾಗು ನೃತ್ಯವಿನ್ಯಾಸಗಳಲ್ಲಿ ಸಮಾನ ಅಂಶಗಳನ್ನು ಕಾಣಬಹುದು. ಪೂರ್ವದಲ್ಲಿ ತುಳುನಾಡಿನ ಜನವರ್ಗ ಕೂಲಿಯಾಳುಗಳಾಗಿ ಕೊಡಗಿನ ಕಡೆ ಬರುತಿದ್ದುದರಿಂದ ತುಳುನಾಡಿನ ಶ್ರಮಸಂಬಂಧೀ ಜನಪದನೃತ್ಯ ಹಾಗು ಗೀತೆಗಳು ಪ್ರಭಾವ ಬೀರಿರಬಹುದು.

೩. ಕೊಡವ ಮತ್ತು ಮಲೆಯಾಳಂ ಜನಪದ ನೃತ್ಯಗಳು

ಕೊಡವ ಜಾನಪದದ ಮೇಲೆ ಮಲೆಯಾಳಂ ಜಾನಪದದ ಪ್ರಭಾವ ಅಪರಿಮಿತವಾದುದು. ಕೊಡವರ ಹಲವು ಆಚರಣೆಗಳಲ್ಲಿ ಮಾಣಿಕ ಮಲೆನಾಡ್ (ಮಲೆಯಾಳ ದೇಶ, ಕೇರಳ)ನ ಪ್ರಭಾವವಿದೆ ಎನ್ನುವುದಕ್ಕೆ ಜನಪದ ನೃತ್ಯಗೀತೆಗಳಲ್ಲಿ ನಿದರ್ಶನಗಳಿವೆ. ಕೊಡವ ಜನಪದಗೀತೆಗಳಾದ ಐವಮಕ್ಕ ದೇಬುವಡ ಪಾಟ್ (ಐದು ಮಕ್ಕಳು ದೇವತೆಯರ ಹಾಡು) ಹಾಗು ಚೋಲಿ ಪೊವ್ವೇದಿಯಮ್ಮೆರ ಪಾಟ್(ಚೋಲಿ ಪೊವ್ವೇದಿಯಮ್ಮೆಯ ಹಾಡು)ಗಳಲ್ಲಿ

ಬರುವ ದೇವತೆಗಳೆಲ್ಲರೂ "ಮಾಣಿಕ ಮಲೆನಾಡ್‌ನಿಂದ ನೆಲೆಯರಸಿ ಕೊಡಗಿಗೆ ಬಂದು ನೆಲೆನಿಂತವರು. ಇದು ಕೊಡವ ಮತ್ತು ಮಲೆಯಾಳದ ಪುರಾತನ ಸಾಂಸ್ಕೃತಿಕ ಸಂಬಂಧವನ್ನು ತಿಳಿಸುತ್ತದೆ. ಐವಮಕ್ಕ ದೇಬುವಡ ಪಾಟ್ ಇದಕ್ಕೆ ನಿದರ್ಶನವನ್ನು ಒದಗಿಸುತ್ತದೆ. .....

"ಐವಮಕ್ಕ ದೇವರೆ
ಮಾಣಿಕ ಮಲೆನಾಡ್
ನಿಪ್ಪಕ್ ನೆಲೆಕ್‌ಟ್ಟ
ಪೊಮ್ಮಾಲೆ ಕೊಡವುಲ್
ಎಂಗಕುಳ್ಳ ನಾಡುಂಡ್
ಆನಗುಂಡ್ ನಿಂಗಳೊ
ಇಲ್ಲಿಂಜಿ ಕೆಳಕ್‌ಕ್
ಪೊಮ್ಮಾಲೆ ಕೊಡವುಕ್
ಅಲ್ಲಿ ಪೋಯಿ ನಿಂದೋಳಿ"

"ಐದು ಮಕ್ಕಳು ದೇವರುಗಳೇ, ಮಾಣಿಕ ಮಲೆನಾಡ (ಕೇರಳ)ಲ್ಲಿ ನಿಲ್ಲಲು ನೆಲೆ ಸಿಗದು. ಹೊನ್ನಿನ ಮಾಲೆಯಂತೆ ಶೋಭಿಸುತ್ತಿರುವ ಕೊಡಗಿನಲ್ಲಿ ನಮಗಿರುವ ನಾಡಿದೆ. ಆದುದರಿಂದ ನೀವು ಅಲ್ಲಿಗೆ ಹೋಗಿ ನೆಲೆಸಿ" ಎಂದು ಕೇರಳದಲ್ಲಿ ನೆಲೆನಿಂತ ಬಯತೂರಪ್ಪ ತನ್ನನ್ನು ನೆಲೆ ಬೇಡಿ ಬಂದ ಐವಮಕ್ಕ ದೇವರುಗಳಿಗೆ ಹೇಳುತ್ತಾನೆ.

ಕೊಡವರಲ್ಲಿ ಒಕ್ಕ ಎಂದು ಕರೆಯಲ್ಪಡುವ ಅವಿಭಕ್ತ ಕುಟುಂಬದ ಮೂಲ ಪುರುಷನಾದ 'ಕಾರಣ' (ಕಾರೋಣ ಎಂದೂ ಕರೆಯಲಾಗುತ್ತದೆ.) ಕುಟುಂಬದ ಯಾರಾದರೊಬ್ಬ ಗಂಡಸರ ಮೈಮೇಲೆ ಬರುವುದು ವಾಡಿಕೆಯಾಗಿದೆ.

ಇದಲ್ಲದೆ ಈಶ್ವರ, ಭದ್ರಕಾಳಿ, ದುರ್ಗಿ ಮುಂತಾದ ದೇವತೆಗಳು ಮೈಮೇಲೆ ಬರುವುದು ಪ್ರಚಲಿತದಲ್ಲಿದೆ. ಇದನ್ನು ಕೊಡವ ಭಾಷೆಯಲ್ಲಿ "ತಿರುವಳ (ತಿರೋಳ) ಬಪ್ಪದ್" ಎನ್ನುತ್ತಾರೆ. ಈ ಸಂದರ್ಭದಲ್ಲಿ ಜನರು

ತಮ್ಮ ಸಂಕಷ್ಟಗಳಿಗೆ ಪರಿಹಾರ ಹಾಗೂ ಆಶೀರ್ವಚನವನ್ನು ಬೇಡಿಕೊಳ್ಳುತ್ತಾರೆ. ಆಗ "ತಿರುವಳಕಾರ" (ದೇವರು ಮೈಮೇಲೆ ಬರುವವನು) ಆಶೀರ್ವಾದ ಮಾಡಿ ಪರಿಹಾರವನ್ನು ನೀಡುವನು. ಆತ ಮೈ ಮೇಲೆ ದೇವರನ್ನು ಆವಾಹಿಸಿಕೊಂಡಾಗ ಮೊಟ್ಟ ಮೊದಲನೆಯದಾಗಿ ಕೂಗಿ ಕರೆಯುವುದು ಬೈತೂರಪ್ಪ (ಬಯತೂರಪ್ಪ)ನನ್ನು. ಈತ ತಮ್ಮ ಆದಿದೈವ ಎಂಬ ನಂಬಿಕೆ ಕೊಡವ ಜನಪದರಲ್ಲಿದೆ. ಹೀಗಾಗಿ ತಿರುವಳಕಾರರು ಹಾಗೂ ಬಹುಪಾಲು ಕೊಡವರು ವರ್ಷಕೊಮ್ಮೆ ಬೈತೂರಪ್ಪನಲ್ಲಿಗೆ ಹೋಗುವ ಸಂಪ್ರದಾಯ ಪರಂಪರಾನುಗತವಾಗಿ ಇಂದಿಗೂ ನಡೆದುಬಂದಿದೆ.

ವೀರಪರಂಪರೆಯ ಪ್ರತೀಕವಾದ ಪಡೆಕಳಿ ಅಥವಾ ಪರೆಯಕಳಿಯ ಹಾಗೂ ಕೇರಳದ ಜನಪದ ನೃತ್ಯವಾದ 'ಕಳರಿಪಯಟ್'ನ ನಡುವೆ ಹೋಲಿಕೆಯನ್ನು ಕಾಣಬಹುದು. ಉಮ್ಮತ್ತಾಟ್ ಮತ್ತು ಕೇರಳದ ಜನಪದ ನೃತ್ಯವಾದ 'ತಿರುವಾದಿರ ಕಳಿ'ಯಲ್ಲಿ ಪರಸ್ಪರ ಸಾರೂಪ್ಯತೆಯಿರುವುದನ್ನು ಗಮನಿಸಬಹುದು.

ಕೊಡಗಿನ ಕ್ಗ್ಗಟ್ಟ್ ನಾಡಿನಲ್ಲಿ ಆಚರಿಸಲ್ಪಡುವ ಬೋಡ್ ಹಬ್ಬದ ಸಂದರ್ಭದಲ್ಲೂ ನರ್ತಿಸಲ್ಪಡುವ ಜೋಯಿ ಕಳಿ ಮತ್ತು ಜೋಯಿಪಾಟ್ (ಜೋಯಿ ಹಾಡು)ನಲ್ಲಿ ಕೊಡವ ಮತ್ತು ಮಲೆಯಾಳಂ ಜಾನಪದದ ನಡುವಿನ ಸಾಂಸ್ಕೃತಿಕ ಸಂಬಂಧವನ್ನು ಗುರುತಿಸಬಹುದು.

"ಎಲ್ಲಿಂಜ ಜೋಯಿ ಕೊಡವು ಮರಿಂಜ ತಾಲಿಲೆಲ್ಲೇ ಲೆಲ್ಲೇಲಾ

ಮಾಣಿ ಮಲೆನಾಡ್ ಬಂದೋರ್ ಜೋಯಿ ತಾಲಿಲೆಲ್ಲೇ ಲೆಲ್ಲೇಲಾ"

"ಎಲ್ಲಿಂದ ಜೋಗಿ ಕೊಡಗಿಗೆ ಬಂದೆ ಎಂಬ ಪ್ರಶ್ನೆಗೆ ಉತ್ತರವಾಗಿ

ಮಾಣಿ ಮಲೆನಾಡ್ (ಕೇರಳ) ನಿಂದ ಬಂದಿರುವ ಜೋಗಿ ತಾಲಿಲೆಲ್ಲೇ ಲೆಲ್ಲೇಲಾ" ಎನ್ನುವ ಈ ಜನಪದ ನೃತ್ಯ ಗೀತೆಯು ಕೊಡಗಿನ ಜೋಯಿಗೂ ಕೇರಳಕ್ಕೂ ಇರುವ ಸಂಬಂಧವನ್ನು ತಿಳಿಸುತ್ತದೆ.

೪. ಕೊಡವ ಮತ್ತು ಕನ್ನಡ ಜನಪದ ನೃತ್ಯಗಳು :-

ಕೊಡವ ಭಾಷೆಗೆ ಲಿಪಿಯಿಲ್ಲ. ಬರವಣಿಗೆಗೆ ಕನ್ನಡ ಲಿಪಿಯನ್ನು

ಬಳಸಲಾಗುತ್ತದೆ. ಕೊಡಗಿನಲ್ಲಿ ಕನ್ನಡ ಭಾಷೆಯನ್ನಾಡುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಈ ಹಿನ್ನಲೆಯಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಜಾನಪದ ಕೊಡವ ಭಾಷೆ, ಸಾಹಿತ್ಯ ಮತ್ತು ಜಾನಪದದ ಮೇಲೆ ತನ್ನ ಪ್ರಭಾವವನ್ನು ಬೀರಿದೆ.

ಜಾನಪದದ ವಿವಿಧ ಪ್ರಕಾರಗಳಾದ ಜನಪದ ಕಥೆಗಳಲ್ಲಿ, ಗಾದೆಗಳಲ್ಲಿ, ಶಿಶುಪ್ರಾಸಗಳಲ್ಲಿ ಕನ್ನಡ ಜಾನಪದದ ಪ್ರಭಾವ ಹೆಚ್ಚಾಗಿದೆ. ಇದಕ್ಕೆ ಹೋಲಿಸಿದಾಗ ಜನಪದ ನೃತ್ಯಗಳ ಮೇಲಿನ ಪ್ರಭಾವ ಕಡಿಮೆಯೆನ್ನಬಹುದು. ಆದರೂ ಅಲ್ಲಲ್ಲಿ ಕೆಲವು ನಿದರ್ಶನಗಳು ದೊರೆಯುತ್ತದೆ.

ಕೊಡವ ಜನಪದ ನೃತ್ಯ 'ಪುತ್ತರಿ ಕೋಲಾಟ್'ನಲ್ಲಿ ಕನ್ನಡ ಜನಪದ ನೃತ್ಯವಾದ ಕೋಲಾಟ ಹಾಗೂ ಅದರಲ್ಲಿ ಬಳಸುವ ನೃತ್ಯಗೀತೆಯ ಪ್ರಭಾವ ಕಂಡುಬರುತ್ತದೆ.

ಕೊಡಗಿನ ಕುಂಜಿಲಗೇರಿ ಗ್ರಾಮದಲ್ಲಿನ ಜಾನಪದ ಕಲಾತಂಡವು ನರ್ತಿಸುವ ಕೋಲಾಟ್‌ನ ಕೊನೆಯ ಒಂದು ಹೆಜ್ಜೆಯ ವಿನ್ಯಾಸವು ಕನ್ನಡ ಜನಪದ ಕೋಲಾಟದ ವಿನ್ಯಾಸವನ್ನು ಹೋಲುತ್ತವೆ. ಇದಕ್ಕೆ ಪೂರಕವೆಂಬಂತೆ ಈ ವಿನ್ಯಾಸದ ಕೋಲಾಟ್‌ಗೆ ಕೋಲಾಟದ ಕನ್ನಡ ಗೀತೆಯನ್ನು "ಬಾಯಿತರ" ಕೊಡುವ ಗೀತೆಯಾಗಿ ಕಲಾವಿದರು ಹಾಡುತ್ತಾರೆ.

"ಕೋಲು ಕೋಲೆನ್ನಿರೋ
ಬಸವ ಕೋಲು ಕೋಲೆನ್ನಿರೋ
ಯಾರನ್ನು ಕಟ್ಟಿದ್ದೆ
ಯಾರನ್ನು ಬಿಟ್ಟಿದೆ
ಯಾರನ್ನು ಕರಕೊಂಡು ಒಳಗೋದೆ
ಕೋಲು ಕೋಲೆನ್ನಿರೋ
ಬಸವ ಕೋಲು ಕೋಲೆನ್ನಿರೋ

ಹಸುವನ್ನು ಬಿಟ್ಟಿದ್ದೆ

ಕರುವನ್ನು ಕಟ್ಟಿದ್ದೆ

ಹಾಲನ್ನು ಕರಕೊಂಡು ಒಳಗ್ಹೋದೆ

ಕೋಲು ಕೋಲೆನ್ನಿರೋ

ಬಸವ ಕೋಲು ಕೋಲೆನ್ನಿರೋ

ಮಾವಿನ ಹೂ ಚಂದ

ಮಾವಿನ ಕಾಯಿ ಚಂದ

ಮಾವನ ಮಗಳು ಬಲು ಚಂದ

ಕೋಲು ಕೋಲೆನ್ನಿರೋ

ಬಸವ ಕೋಲು ಕೋಲೆನ್ನಿರೋ"

ಹೀಗೆ ಹಾಡಲಾಗುವ ಈ ಗೀತೆಯನ್ನು ಕೋಲಾಟವಾಡುವವರು ಹಾಡುತ್ತಾ ನರ್ತಿಸುವ ವಿನ್ಯಾಸಕ್ಕೆ "ಬಸವ ಕೋಲು" ಎಂದು ಕರೆಯಲಾಗುತ್ತದೆ. ಇದು ಕೊಡವ ಜನಪದ ನೃತ್ಯದ ಮೇಲೆ ಕನ್ನಡ ಜನಪದ ನೃತ್ಯದ ಪ್ರಭಾವವನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ.

ಅಡಿಟಿಪ್ಪಣಿಗಳು

೧-ಹಸೆಮಣೆ, ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ ೨೦೦೯ ಪು.೫೬-೫೭

೨-ಅದೇ ಪು. ೫೮

೩-ಕರಾವಳಿ ಜಾನಪದ, ಡಾ. ಪುರುಷೋತ್ತಮ ಬಿಳಿಮಲೆ, ಮಂಗಳೂರು, ೧೯೯೦, ಪು.೨೪

೪-ವಕ್ತೃ-ಚೇನಂಡ ಜಪ್ಪು ದೇವಯ್ಯ, ಕೋಕೇರಿ

೫-ವಕ್ತೃ- ಚರ್ಮಂಡ ಅಪ್ಪುಣು ಪೂವಯ್ಯ(೫೮) ಕುಂಜಿಲಗೇರಿ ಗ್ರಾಮ

ಅಧ್ಯಾಯ–೪

ಕೊಡವ ಜನಪದ ನೃತ್ಯಗಳಲ್ಲಿ ವ್ಯಕ್ತವಾಗುವ ಸಾಂಸ್ಕೃತಿಕ ಅಂಶಗಳು

ಕೊಡಗಿನ ಪ್ರಮುಖ ಜನಾಂಗವಾದ ಕೊಡವರದು ವಿಶ್ವದಲ್ಲಿಯೇ ವಿಶಿಷ್ಟ ಸಂಸ್ಕೃತಿ. ಈ ಜನಪದರ ಆಚಾರ–ವಿಚಾರ ರೂಢಿ ಸಂಪ್ರದಾಯಗಳನ್ನು ಬೇರೆ ಜನಾಂಗಗಳಲ್ಲಿ ಕಾಣಲು ಸಾಧ್ಯವಿಲ್ಲ.

ಇಡೀ ಜನಾಂಗದ ಸಂಸ್ಕೃತಿಯನ್ನು ಪ್ರತಿಬಿಂಬಿಸಿ ನಿಲ್ಲುವ ವ್ಯಾಪಕತೆ ಜಾನಪದಕ್ಕಿದೆ. ಏಕೆಂದರೆ ಅದು ಸಮಾಜದ ಸಮಷ್ಟಿ ಮನಸ್ಸಿನ ಅಭಿವ್ಯಕ್ತಿಯ ಪ್ರಯತ್ನದ ಫಲ. "ವ್ಯಕ್ತಿಯ ಸಂಸ್ಕೃತಿಯನ್ನು ಅವನ ಆಚರಣೆಯಲ್ಲಿ ನೋಡುವಂತೆ ಇಡೀ ಜನಾಂಗದ ಸಂಸ್ಕೃತಿಯನ್ನು ಅವರ ಸಮಷ್ಟಿ ಮನಸ್ಸಿನ ಆಶೋತ್ತರಗಳಲ್ಲಿ ಮತ್ತು ಆಚರಣೆಗಳಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಅವುಗಳನ್ನು ಪ್ರತಿಬಿಂಬಿಸಿದ ಜಾನಪದ ಕವಿಗಳು, ಜನಾಂಗದ ಸಾಮಾನ್ಯ ಜನತೆಯ ಪ್ರತಿನಿಧಿಗಳಾಗುತ್ತಾರೆ.

ಜಾನಪದದ ಪ್ರಮುಖ ಅಂಗವಾದ ಜನಪದ ನೃತ್ಯಗಳು ಜನಪದರ ಜೀವನದ ಸುಖ ದುಃಖಗಳನ್ನು ಸರಳ ಹಾಗೂ ನೇರ ರೀತಿಯಲ್ಲಿ ಅಭಿವ್ಯಕ್ತಿಸುತ್ತವೆ. ಶಿಷ್ಟ ನೃತ್ಯಗಳಲ್ಲಿ ಪ್ರಕಟವಾಗುವ ಕಲಾತ್ಮಕತೆಯ ಗೀಳು ಇವುಗಳಲ್ಲಿ ಕಂಡುಬರುವುದಿಲ್ಲ. ಈ ಹಿನ್ನಲೆಯಲ್ಲಿ ಕೊಡವ ಜನಪದರ ಬದುಕು, ಸಂಸ್ಕೃತಿಯ ನೆಲೆ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಜನಪದ ನೃತ್ಯಗಳು ತಿಳಿಸುತ್ತವೆ.

ಕೊಡವ ಗಂಡಸರು ಪಾಲ್ಗೊಳ್ಳುವ ನೃತ್ಯ ಬೊಳಕಾಟ್ ದೈವೀ ಹಿನ್ನೆಲೆಯ ನೃತ್ಯ. ಹಿಂದೆ ದೇವಸ್ಥಾನಗಳಲ್ಲಿ ರಾತ್ರಿಯ ಹೊತ್ತು "ಬೊಳಕ್ ನಮ್ಮೆ" (ಬೆಳಕಿನ ಉತ್ಸವ)ದಲ್ಲಿ ಹಬ್ಬದ ಕಟ್ಟು ಕಟ್ಟಳೆಯ ನಂತರ ನಿಯಮ ಪ್ರಕಾರ ಒಂದು ವಾರ ನರ್ತಿಸುತಿದ್ದರು[9]. ದೈವಿ ಆರಾಧನೆಯ ಹಿನ್ನೆಲೆಯಲ್ಲಿ ಉಗಮಿಸಿದ ಈ ಕಲೆ ಕೊಡವರ ವೀರ ಪರಂಪರೆಯ ಪ್ರತೀಕವಾಗಿದೆ.

ಈ ನೃತ್ಯದ ಮುಂದುವರಿಕೆಯಾದ ಕತ್ತಿಯಾಟ್‌ನಲ್ಲಿ ಕಲಾವಿದರು ಒಡಿಕತ್ತಿಯನ್ನು ಹಿಡಿದು ನರ್ತಿಸುವ ಭಂಗಿ ವೀರರಸ ಪ್ರಧಾನವಾದುದು. ಇದರ ಮುಂದುವರಿದ ಭಾಗವೆಂಬಂತೆ ನರ್ತಿಸುವ ಚೌರಿಯಾಟ್ ದೇವರ ಸೇವಾ ವೈಖರಿಯನ್ನು ಬಿಂಬಿಸುತ್ತದೆ.

ಬೊಳಕಾಟ್ ನೃತ್ಯದ ಹಿಮ್ಮೇಳವಾಗಿ ಹಾಡುವ ಗೀತೆಗಳಲ್ಲಿ ಕೊಡಗು ದೇಶವನ್ನು ಕಟ್ಟಿದ ವಿವರಣೆ, ಪುರಾಣ, ಇತಿಹಾಸ, ಪ್ರಕೃತಿ ವರ್ಣನೆ ಹಾಗೂ ಆಯಾ ಊರಿನ ದೇವರ ಸ್ತುತಿ ಹಾಗೂ ಹುಟ್ಟಿನ ಕಥೆಯನ್ನು ಕುರಿತು ಹಾಡಲಾಗುತ್ತದೆ.

ಮನರಂಜನಾತ್ಮಕ ನೃತ್ಯವಾದ ಕೋಲಾಟ್ ಹುತ್ತರಿ ಹಬ್ಬದೊಂದಿಗೆ ತುಳುಕು ಹಾಕಿಕೊಂಡಿದೆ. ಸುಗ್ಗಿಯ ಸಂಭ್ರಮ ಹಾಗೂ ಮನರಂಜನೆ ಈ ನೃತ್ಯದ ಮೂಲ ಉದ್ದೇಶವಾಗಿದೆ. ಕೊಡವ ಜನಪದರ ಕೃಷಿ ಸಂಸ್ಕೃತಿಯನ್ನು ಇದು ಸಮರ್ಥವಾಗಿ ಬಿಂಬಿಸುತ್ತದೆ.

ಈ ನೃತ್ಯದಲ್ಲಿ ಬಳಸುವ ಹಿಮ್ಮೇಳದಲ್ಲಿ ವೈವಿಧ್ಯತೆಯನ್ನು ಗುರುತಿಸಬಹುದು. ಕೆಗ್ಗಟ್ಟ್‌ನಾಡಿನಲ್ಲಿ "ಕೊಂಬು ಕೊಟ್ಟ್ ವಾಲಗಕ್ಕೆ" ಸರಿಯಾಗಿ ನರ್ತಿಸಿದರೆ, ಮೇಂದಲೆ ನಾಡಿನಲ್ಲಿ ಮೇದ ಜನಾಂಗಕ್ಕೆ ಸೇರಿದ ಪರೆ ವಾದ್ಯ ಹಿಮ್ಮೇಳವನ್ನು ಒದಗಿಸುತ್ತದೆ. ಇದರೊಂದಿಗೆ ಈ ಸಂದರ್ಭದಲ್ಲಿ ನರ್ತಿಸುವವರು ಹಾಡುವ ಬಾಯಿತರ ಕೊಡುವ ಗೀತೆಯು ಹುತ್ತರಿ ಹಬ್ಬದ ಸಂಭ್ರಮ, ಹಬ್ಬದ ವಿಶೇಷ ಉಣಿಸಾದ ತಂಬಿಟ್ಟಿನ ವರ್ಣನೆ, ಹಾಸ್ಯ, ನೀತಿ ಬೋಧನೆ, ಚೋದ್ಯ, ಗೇಲಿಗಳು ಹಾಸು ಹೊಕ್ಕಾಗಿವೆ.

ಪ್ರಧಾನವಾಗಿ ದೈವಿ ಆರಾಧನೆಯ ಹಿನ್ನಲೆಯಲ್ಲಿ ನಡೆಯುವ 'ಕೊಂಬಾಟ್' ಕಟ್ಟು ನಿಟ್ಟಾದ ವ್ರತ ನಿಯಮಗಳನ್ನು ಪಾಲಿಸುವುದರೊಂದಿಗೆ

ನರ್ತಿಸಲ್ಪಡುತ್ತದೆ. ಹಬ್ಬದ ಅಂತಿಮ ದಿನದ ಕುಣಿತಕ್ಕಾಗಿ ಆಯಾ ಊರಿನ ಜನರು ಕ್ರಮಬದ್ಧ ತಾಲೀಮನ್ನು ನಡೆಸುತ್ತಾರೆ.

ಸಾಮಾನ್ಯವಾಗಿ ಕೊಡವ ಗಂಡಸರು ಪಾಲ್ಗೊಳ್ಳುವ ಎಲ್ಲಾ ನೃತ್ಯಗಳಲ್ಲಿ ಸಾಂಪ್ರದಾಯಿಕ ಕುಪ್ಯಚೇಲೆಯನ್ನು ಧರಿಸಿದರೆ; ಕೊಂಬಾಟ್‌ನಲ್ಲಿ ಕುಪ್ಯಚೇಲೆಯನ್ನೇ ವಿಭಿನ್ನ ಕ್ರಮದಲ್ಲಿ ಧರಿಸಲಾಗುತ್ತದೆ.

ಉಮ್ಮತ್ತಾಟ್ ಕೊಡವ ಹೆಣ್ಣು ಮಕ್ಕಳು ಭಾಗವಹಿಸುವ ಸೌಮ್ಯ ನೃತ್ಯವಾಗಿದೆ. ಅವಿಭಕ್ತ ಕುಟುಂಬ ಪದ್ಧತಿ ಆಚರಣೆಯಲ್ಲಿದ್ದ ಕೊಡವ ಜನಪದರಲ್ಲಿ ಶುಭ ಸಮಾರಂಭಗಳಲ್ಲಿ, ಹುತ್ತರಿ ಹಬ್ಬದ ಸಂದರ್ಭದಲ್ಲಿ ಮನೆಯ ಮುಂದೆ ನರ್ತಿಸುತ್ತಿದ್ದರೆನ್ನಲಾಗಿದೆ.

ಹಿಂದೆ ಕೇವಲ "ಲೆಲ್ಲೋ ಲೆಲ್ಲೋ" ಎಂಬ ಸೊಲ್ಲಿನೊಂದಿಗೆ ಆರಂಭವಾಗಿ ಒಂದೇ ರೀತಿಯ ವಿನ್ಯಾಸದಲ್ಲಿ ನರ್ತಿಸುತ್ತಿದ್ದ ಈ ನೃತ್ಯ ಇಂದು ಬಿಡಿ ನೃತ್ಯಗಳ ಸಮುಚ್ಛಯವಾಗಿದೆ. ಹಲವು ಶಿಷ್ಟರಚನೆಗಳು ಸೇರಿ ಬದಲಾವಣೆಯನ್ನು ಕಂಡಿದೆ. ಇದು ಸಾಂಸ್ಕೃತಿಕ ಪಲ್ಲಟಕ್ಕೆ ನಿದರ್ಶನವಾಗಿದೆ.

ಇಂದಿನ ಉಮ್ಮತ್ತಾಟ್ ಗೀತೆಗಳಲ್ಲಿ ಕಾವೇರಿಯ ಸ್ತುತಿ, ಅತಿಥಿ ಸತ್ಕಾರ, ಕೆಲಸದ ಗೌರವ, ಪ್ರಾಕೃತಿಕ ಸಂಪತ್ತಾದ ಹಲ ವಿಧಧ ಜೇನಿನ ವರ್ಣನೆಗಳನ್ನು ಗುರುತಿಸಬಹುದು.

'ಪರೆಯ' ಅಥವಾ 'ಪಡೆಕಳಿ' ಕೊಡವ ಗಂಡಸರು ಇಬ್ಬಿಬ್ಬರಾಗಿ ಭಾಗವಹಿಸುವ ಅಣಕು ಸಮರ ನೃತ್ಯ. ಇಲ್ಲಿ ಕಲಾವಿದರ ಚಾಕಚಕ್ಯತೆ, ಪಾಲಿಸುವ ನಿಯಮಗಳು, ಕೊನೆಯಲ್ಲಿ ಎದುರಾಳಿಗಳು ಪರಸ್ಪರ ಆಲಂಗಿಸಿಕೊಳ್ಳುವುದರ ಮೂಲಕ ವ್ಯಕ್ತಪಡಿಸುವ ಎದುರಾಳಿಯ ಸಾಮರ್ಥ್ಯವನ್ನು ಮೆಚ್ಚುವ ಸಂಸ್ಕೃತಿ ವಿಶೇಷವಾದುದು. ಇದು ಕೊಡವ ಜನಾಂಗದವರಲ್ಲಿ ಪರಂಪರಾನುಗತವಾಗಿ ಬಂದ ಸಮಾರೋತ್ಸಾಹ ಮತ್ತು ಕ್ರೀಡಾಭಿಮಾನಕ್ಕೆ ಸಾಕ್ಷಿಯಾಗಿದೆ.

ಕೇವಲ ಕೆಲವೇ ಗ್ರಾಮಗಳಿಗೆ ಸೀಮಿತವಾಗಿರುವ 'ಕೊಡಿಯಾಟ್' ದೈವೀ ಹಿನ್ನಲೆಯ ಧಾರ್ಮಿಕ ನೃತ್ಯವಾಗಿದ್ದು. ಆಯಾ ಗ್ರಾಮದ ಪ್ರತಿಯೊಂದು

ಕೊಡಿ(ಕುಡಿ)ಯನ್ನು ರಕ್ಷಿಸಲೆಂದು ಕೊಡಿಯನ್ನು ತೆಗೆದುಕೊಂಡು ದೇವಸ್ಥಾನದಲ್ಲಿ ನರ್ತಿಸುವುದರ ಮೂಲಕ ತಮ್ಮ ಸೇವೆಯನ್ನು ದೇವರಿಗೆ ಒಪ್ಪಿಸಲಾಗುತ್ತದೆ. ಇಲ್ಲಿ ಜನಪದರ ದೈವನಂಬಿಕೆ ವ್ಯಕ್ತವಾಗುತ್ತದೆ.

'ವಾಲಗತ್ತಾಟ್' ಕೊಡವ ಜನಪದರ ಸಾಮಾಜಿಕ ಸಂದರ್ಭದ ನೃತ್ಯವಾಗಿದೆ. ಇಲ್ಲಿ ಗಂಡು–ಹೆಣ್ಣು, ಹಿರಿಯ ಕಿರಿಯರೆಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಜೊತೆಗೂಡಿ ವಾದ್ಯದ ತಾಳಕ್ಕೆ ತಕ್ಕಂತೆ ನರ್ತಿಸುತ್ತಾರೆ. ಸಾಮಾನ್ಯವೂ ಜನಪ್ರಿಯವೂ ಆದ ಇದು ಕೊಡವ ಜನಪದ ನೃತ್ಯಗಳಲ್ಲಿ ಗಂಡಸರು ಹೆಂಗಸರು ಸೇರಿ ನರ್ತಿಸುವ ಏಕೈಕ ಜನಪದ ನೃತ್ಯವಾಗಿದೆ.

ಇಪ್ಪತ್ತಮೂರು ಕೊಡವ ಭಾಷಿಕ ಮೂಲನಿವಾಸಿಗಳಲ್ಲಿ ಒಬ್ಬರಾದ ಕುಡಿಯ ಜನಾಂಗದ ಹೆಣ್ಣು ಮಕ್ಕಳು ಭಾಗವಹಿಸುವ ಜನಪದ ನೃತ್ಯ 'ಉರ್‌ಟಿಕೊಟ್ಟ್ ಆಟ್'. ಇಲ್ಲಿ ಗಂಡಸರಂತೆ ಹೆಣ್ಣು ಮಕ್ಕಳು ದುಡಿ ಬಾರಿಸುತ್ತ ಹಾಡುವುದು ವಿಶಿಷ್ಟವಾಗಿದೆ.

ಕೊಡವ ಭಾಷಿಕ ಮೂಲ ನಿವಾಸಿಗಳಾದ ಕೆಂಬಟ್ಟಿ ಜನಾಂಗದವರು ಕೊಡವ ಜನಾಂಗದಲ್ಲಿನ ಹಿರಿಯ ವ್ಯಕ್ತಿಗಳು ಮರಣಪಟ್ಟ ಸಂದರ್ಭದಲ್ಲಿ ನರ್ತಿಸುವ ಶೋಕ ಸೂಚಕ ಜನಪದ ನೃತ್ಯವೇ ಅಂಗಕಳಿ. ಇದು ಕೊಡವ ಜನಪದ ನೃತ್ಯಗಳಲ್ಲಿನ ಏಕೈಕ ಶೋಕ ಸೂಚಕ ನೃತ್ಯವಾಗಿದೆ.ಇದಕ್ಕೆ "ಅಂಗ ಮುರಿಯುವುದು" ಎಂಬ ಹೆಸರೂ ಇದೆ. "ಒಡೆಯನ ಹಟ್ಟಿಯಲ್ಲಿ ಮಣೆಯ ಮೇಲೆ ಕೈಯೆಣ್ಣೆ ದೀಪವಿಡಬೇಕು. ಪುತ್ತರಿ ಪಜ್ಜೆಯ (ಹುತ್ತರಿ ಬುಟ್ಟಿ) ತುಂಬ ಭತ್ತ ಇಟ್ಟು; ಅದರ ಮೇಲೆ ಸಣ್ಣದೊಂದು ಪಜ್ಜೆಯದ ತುಂಬ ಅಕ್ಕಿ ಇಟ್ಟು ಅದರ ಮೇಲೆ ತೆಂಗಿನ ಕಾಯಿಯನ್ನು ಇಡಲಾಗುತ್ತದೆ. ಅಕ್ಕಿಯ ಮೇಲೆ ಕಬ್ಬಿಣದ ಸಣ್ಣ ಬಾಣವನ್ನು ಚುಚ್ಚಿಡಬೇಕು. ಕೆಂಬಟ್ಟಿ ಹರಿಜನರಲ್ಲಿ ಒಬ್ಬರಿಗೆ ಮನೆಯವರು ಬಿಳಿಯ ಪಂಚೆಯನ್ನು ಕೊಡುತ್ತಾರೆ. ಆತನು ಬೇರೆ ಬಟ್ಟೆಯನ್ನು ಬಿಚ್ಚಿ ಬಿಳಿಯ ಪಂಚೆಯನ್ನು ಸುತ್ತಿಕೊಂಡು ಮನೆಯ ಮುಂದಿನ ಮೆಟ್ಟಿಲಿಗೆ ಸಾವಿಗೆ ಕೈ ಕೊಡುವಂತೆ "ಕೆಟ್ಟಿರೋ ಆದನೆ"(ಕೆಟ್ಟು ಹೋದಿರಿ ಒಡೆಯನೇ) ಅಥವಾ ಹೆಂಗಸಾದರೆ ಕೆಟ್ಟಿರೂ ಅಬ್ಬೆಯೇ (ಒಡತಿಯೇ) ಎಂದು ಮೂರು ಬಾರಿ ಹೇಳಿ ಕೈ ಕೊಡುವನು. ಆ

ಸಂದರ್ಭದಲ್ಲಿ ಹೊಡೆಯುವ ದೋಳಿನ ಶಬ್ದಕ್ಕೆ ಅನುಗುಣವಾಗಿ ತನ್ನ ಜೊತೆಗಾರರೊಂದಿಗೆ ದೀಪದ ಸುತ್ತ ಶೋಕನೃತ್ಯವನ್ನು ಮಾಡುವನು"೨

ಹೀಗೆ ವ್ಯಾಪಕವಾಗಿ ವಿಶಿಷ್ಟತೆಯಿಂದ ಕೂಡಿರುವ ಕೊಡವ ಜನಪದ ನೃತ್ಯಗಳು ಕೊಡವ ಸಂಸ್ಕೃತಿಯನ್ನು ಸಹಜ, ಸುಂದರ ಹಾಗೂ ಪರಿಣಾಮಕಾರಿಯಾಗಿ ಬಿಂಬಿಸುತ್ತವೆ.

ಅಡಿ ಟಿಪ್ಪಣಿಗಳು

೧–ವಕ್ತೃ –ದೇವಯ್ಯ ಪಾಲಂದಿರ ಪಿ, ಬಲಂಬೇರಿ

೨– ಚಿಣ್ಣಪ್ಪ ನಡಿಕೇರಿಯಂಡ, ಪಟ್ಟೋಲೆ ಪಳಮೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ. ೨೦೦೨,ಪು.೧೩೪

ಉಪಸಂಹಾರ

ತಮಿಳಿನ ಸಂಗಂ ಸಾಹಿತ್ಯದಲ್ಲಿ ಉಲ್ಲೇಖಿತವಾಗಿರುವಂತೆ ಕೊಡಗು ಕ್ರಿ.ಶ. 2ನೆಯ ಶತಮಾನದಿಂದಲೇ ಅಸ್ತಿತ್ವದಲ್ಲಿತ್ತು ಎಂದು ನಂಬಬಹುದಾಗಿದೆ. ಆದರೆ ಕೊಡಗಿನವರ ಅಥವಾ ಕೊಡವರ ವಿಚಾರವಾಗಿ ಮೊತ್ತ ಮೊದಲು ದಾಖಲಾಗಿರುವುದು ಕ್ರಿ.ಶ. 1174 ರ ಹುಣಸೂರು ಶಾಸನದಲ್ಲಿ. ಇಲ್ಲಿ "ಎಲ್ಲಾ ನಾಡ ಕೊಡಗರು ಕೂಡಿ" ಎಂದು ಕೊಡಗಿನ ಜನರ ಪ್ರಸ್ತಾಪ ಪ್ರಥಮ ಬಾರಿಗೆ ದಾಖಲಾಗಿದೆ. ಈ ಹಿನ್ನಲೆಯಲ್ಲಿ ಸುಮಾರು ಎಂಟು ಶತಮಾನಗಳ ಇತಿಹಾಸವನ್ನು ಹೊಂದಿರುವ ಕೊಡವ ಜನಾಂಗದವರ ಜನಪದ ನೃತ್ಯಗಳು ಅವರ ಉಗಮದೊಂದಿಗೆ ಹುಟ್ಟಿ ಬಂದಂತವುಗಳು.

ಕೊಡವ ಜನಪದರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರಾಧನಾ ಸಂದರ್ಭಗಳನ್ನು ಗಮನಿಸಿದಾಗ ಅವರಲ್ಲಿ ವಿಶಿಷ್ಟ ಹಾಗೂ ವೈವಿಧ್ಯಪೂರ್ಣ ಜನಪದ ನೃತ್ಯಗಳನ್ನು ಕಾಣಬಹುದು.

ಕೊಡವ ಜನಪದ ನೃತ್ಯ ಪ್ರಕಾರಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಸುಮಾರು ಹದಿನೆಂಟು ಬಗೆಯ ನೃತ್ಯಗಳಿವೆ. ಹತ್ತು ನೃತ್ಯಗಳಲ್ಲಿ ಜನಪದ ವಾದ್ಯ ಹಿಮ್ಮೇಳವು ಪ್ರಧಾನ ಪಾತ್ರ ವಹಿಸುತ್ತವೆ. ಉಳಿದ ಏಳು ನೃತ್ಯಗಳು ವಾದ್ಯ ಮತ್ತು ಗೀತ ಪ್ರಧಾನ ನೃತ್ಯಗಳಾಗಿವೆ. ಕೊಡವ ಹೆಣ್ಣು ಮಕ್ಕಳು ಭಾಗವಹಿಸುವ ಉಮ್ಮತ್ತಾಟ್ ಏಕೈಕ ಗೀತ ಪ್ರಧಾನ ನೃತ್ಯವಾಗಿದೆ.

ಕೊಡವರ ಸಾಮಾಜಿಕ ಸಂದರ್ಭದ ನೃತ್ಯವಾದ ವಾಲಗತ್ತಾಟ್ ಗಂಡಸರು ಮತ್ತು ಹೆಂಗಸರು ಸೇರಿ ನರ್ತಿಸುವ ಏಕೈಕ ನೃತ್ಯವಾಗಿದೆ. ಆರಂಭದಲ್ಲಿ ಎರವ ಚೇನಿ, ಕುರ್ಂದ ಕಳಿ, ಪಾಂಬಾಟ್, ದೇವ ಆಟ್, ಹುಲಿವೇಷ, ಮಾಪಳೆ ಆಟ್, ಬೊಳಕಾಟ್ ಹೀಗೆ ಹಲವು ಅಣಕು ಭಂಗಿಗಳಿಂದ ಕೂಡಿದ್ದ ಈ ನೃತ್ಯವೂ ಇತ್ತೀಚಿನ ದಿನಗಳಲ್ಲಿ ಡಿಸ್ಕೋ ಡಾನ್ಸ್, ಬ್ರೇಕ್ ಡಾನ್ಸ್, ಸಿನಿಮಾ ನೃತ್ಯಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡಿದೆ.

ಜಾನಪದ ನಿಂತ ನೀರಲ್ಲ. ಸೃಷ್ಟಿ ಪುನರ್‌ಸೃಷ್ಟಿಯೊಂದಿಗೆ ಅದು ಬೆಳೆಯುತ್ತಾ ಸಾಗುತ್ತದೆ. ಈ ಮಾತು ಕೊಡವ ಜನಪದ ನೃತ್ಯಗಳಿಗೆ ಸೂಕ್ತವಾಗಿ

ಅನ್ವಯವಾಗುತ್ತದೆ. ಆರಂಭದಲ್ಲಿ ಧಾರ್ಮಿಕ ವಿಧಿ ವಿಧಾನಗಳಿಗೆ, ಊರಿಗೆ, ಮನೆಗಳಿಗೆ ಸೀಮಿತವಾಗಿದ್ದ ಕೊಡವ ಜನಪದ ನೃತ್ಯಗಳು ಕೆಲವು ಬದಲಾವಣೆಗಳನ್ನು ಮೈಗೂಡಿಸಿಕೊಂಡು ಹವ್ಯಾಸಿ ಕಲೆಗಳಾಗಿ ಸಾಮಾಜಿಕ ಸಮಾರಂಭಗಳಲ್ಲಿ ಪ್ರದರ್ಶಿಸುವಂತಾಗಿದೆ. ಪ್ರಾರಂಭದಲ್ಲಿ ಶುಭ ಸಂದರ್ಭಗಳಲ್ಲಿ ಮನೆಯ ಮುಂದೆ ನರ್ತಿಸುವಷ್ಟಕ್ಕೆ ಸೀಮಿತವಾಗಿದ್ದ ಉಮ್ಮತ್ತಾಟ್ ಕ್ರಮೇಣ ನೇಪಥ್ಯಕ್ಕೆ ಸರಿದಿತ್ತು. 1975ರ ಹೊತ್ತಿನಲ್ಲಿ ಪುಗ್ಗೇರ ಎಂ. ಕರುಂಬಯ್ಯನವರ ಪ್ರಯತ್ನದಿಂದ ಹೊಸ ರೂಪವನ್ನು ಪಡೆದ ಉಮ್ಮತ್ತಾಟ್ ದೆಹಲಿಯಲ್ಲಿ ಪ್ರದರ್ಶನಗೊಂಡಿತು. ಈ ಸಂದರ್ಭವೂ ಕೊಡವ ಜನಪದ ನೃತ್ಯಗಳ ಕಲಿಕೆ ಮತ್ತು ಪ್ರದರ್ಶನದಲ್ಲಿ ಹೊಸ ಸಂಚಲನವನ್ನುಂಟುಮಾಡಿತು. ಶಿಷ್ಟ ರಚನೆಗಳನ್ನೊಳಗೊಂಡ ಉಮ್ಮತ್ತಾಟ್ ನೃತ್ಯವು ಇಂದಿಗೂ ಹಾಗೆಯೇ ಮುಂದುವರಿಯುತ್ತಿದೆ.

ಉಮ್ಮತ್ತಾಟ್‌ನ ಮೂಲರೂಪವನ್ನು ಕಾಯ್ದುಕೊಂಡು ನರ್ತಿಸುವ ಕಲಾವಿದರು ಮಡಿಕೇರಿ ತಾಲೂಕಿನ ಮುಕ್ಕೋಡ್ಲು ಹಾಗೂ ಕಾಲೂರು ವಿಭಾಗಗಳಲ್ಲಿದ್ದಾರೆ. ಒಂದೇ ಭಂಗಿಯಲ್ಲಿ ನಿಧಾನವಾಗಿ ಹಿಂದಕ್ಕೂ ಮುಂದಕ್ಕೂ ತಿರುಗುತ್ತಾ ತಾಳವನ್ನು ತಟ್ಟಿ ನರ್ತಿಸುತ್ತಾರೆ. ಇಲ್ಲಿ ಹಿಮ್ಮೇಳವಾಗಿ ಹಾಡುವ ನೃತ್ಯಗೀತೆಯು ಬಾಳೋಪಾಟಿನ ಮಟ್ಟಿನಲ್ಲಿ ಇದ್ದು ವಿಶಿಷ್ಟವಾಗಿದೆ.

ಯಾವುದೇ ಜನಪದ ಕಲೆ ಉಳಿಯಬೇಕಾದರೆ ಅದು ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾವಣೆಗಳನ್ನು ಅಳವಡಿಸಿಕೊಳ್ಳಬೇಕು. ಮೂಲ ರೂಪಕ್ಕೆ ಚ್ಯುತಿಬಾರದಂತೆ ಅಗತ್ಯ ಪರಿಷ್ಕರಣೆಯೊಂದಿಗೆ ಸದಾ ಪ್ರದರ್ಶನಕ್ಕೆ ಒಳಗಾಗುವಂತಾಗಬೇಕು. ಕಲೆಯನ್ನು ಉಳಿಸಿ ಬೆಳೆಸುವ ಮನಸ್ಸು ಇದಕ್ಕೆ ಅಗತ್ಯವಾಗಿ ಬೇಕು.

ಈ ನಿಟ್ಟಿನಲ್ಲಿ ಉಮ್ಮತ್ತಾಟ್ ನೃತ್ಯವನ್ನು ಉಳಿಸಿ ಬೆಳೆಸಬೇಕೆನ್ನುವ ಹಿರಿಯರ ತುಡಿತ ಹಾಗೂ ಅನಿವಾರ್ಯತೆ ಹಿರಿಯ ಜನಪದ ಕಲಾವಿದರನ್ನು ಶಿಷ್ಟ ರಚನೆಗಳ ಸೇರ್ಪಡೆಗೆ ಪ್ರೇರೇಪಿಸಿರಬಹುದು.

ಬೊಳಕಾಟ್, ಕತ್ತಿಯಾಟ್, ಚೌರಿಯಾಟ್ ನೃತ್ಯಗಳು ದೈವೀ ಆರಾಧನೆಯ ಹಿನ್ನಲೆಯಲ್ಲಿ ಮೂಡಿಬಂದಿದ್ದರೂ ಆಕರ್ಷಕವಾದ ಈ ನೃತ್ಯ

ವೀರಪರಂಪರೆಯ ಕುರುಹಾಗಿ ಗೋಚರಿಸುತ್ತದೆ. ಪರೆಯಕಳಿ ಶುದ್ಧ ಸಮರ ಕಲೆ ಇದು ಅಣುಕು ಸಮರಾಭ್ಯಾಸ ನೃತ್ಯವಾಗಿದೆ. ಸಿದ್ಧಿಯಾಟ್ ಶಕ್ತಿ ಸಾಮರ್ಥ್ಯಗಳನ್ನು ವಿಸ್ತರಿಸುವ ದೈಹಿಕ ಕಸರತ್ತುಗಳ ನೃತ್ಯವಾಗಿ ಒಂದೆಡೆ ಗೋಚರಿಸಿದರೆ; ಮತ್ತೊಂದೆಡೆ ದೈವೀ ಸೇವೆಯ ನೃತ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಇದು ಪ್ರದರ್ಶನ ನೃತ್ಯವಾಗಿಯೂ ನರ್ತಿಸಲ್ಪಡುತ್ತಿದೆ.

ಹೆಚ್ಚಾಗಿ ಯುವಕರೇ ಪಾಲ್ಗೊಳ್ಳುವ 'ಕಪ್ಪೆಯಾಟ್' ಕೊಡವ ಜನಪದ ನೃತ್ಯಗಳಲ್ಲಿ ಕಠಿಣತರವಾದುದು. ಎರಡೂ ಕೈಗಳನ್ನು ಕಾಲೊಳಗೆ ತೂರಿಸಿ ಕಪ್ಪೆಗಳಂತೆ ಕುಪ್ಪಳಿಸುವ ಈ ವಿಶೇಷ ನೃತ್ಯದಲ್ಲಿ ನೃತ್ಯಗಾರರ ಸಾಮರ್ಥ್ಯದ ಪರೀಕ್ಷೆ ನಡೆಯುತ್ತದೆ.

ದೈವೀ ಆರಾಧನೆಗೆ ಸೀಮಿತವಾಗಿರುವ 'ಕೊಡಿಯಾಟ್' ಉತ್ತರ ಕೊಡಗಿನ ಕೆಲವೇ ದೇವಸ್ಥಾನಗಳ ಉತ್ಸವದಲ್ಲಿ ಮಾತ್ರ ನರ್ತಿಸಲ್ಪಡುತ್ತದೆ.

ಕೊಡವ ಭಾಷಿಕ ಮೂಲನಿವಾಸಿಗಳಲ್ಲಿ ಒಬ್ಬರಾದ ಕುಡಿಯ ಜನಾಂಗದ ಹೆಣ್ಣುಮಕ್ಕಳು ಭಾಗವಹಿಸುವ 'ಉರ್‌ಟಿಕೊಟ್ಟ್ ಆಟ್' ನೃತ್ಯ ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಬೆಟ್ಟ ಸಾಲುಗಳಲ್ಲಿ ವಾಸಿಸುವ ಇವರ ನೃತ್ಯದ ಭಂಗಿಗಳಲ್ಲಿರುವ ಚಾಕಚಕ್ಯತೆ, ಚುರುಕುತನ ಗಮನೀಯವಾದುದು. ಇಲ್ಲಿ ಕುಡಿಯ ಗಂಡಸರು ದುಡಿ ಬಾರಿಸುತ್ತಾ ಹಾಡುವ ಸಂಪ್ರದಾಯವಿದ್ದರೂ; ಕೆಲವು ಕಡೆಗಳಲ್ಲಿ ಮಹಿಳೆಯರೇ ದುಡಿಯನ್ನು ಬಾರಿಸುತ್ತಾ ಹಾಡುವುದು ವಿಶೇಷವಾದುದು. ಇಲ್ಲಿನ ನೃತ್ಯಗೀತೆಗಳಲ್ಲಿ ಪ್ರಕೃತಿಯೊಂದಿಗಿನ ಆತ್ಮೀಯ ಒಡನಾಟ ಎದ್ದು ಕಾಣುತ್ತದೆ.

ಆಯಾ ಊರಿನ ದೇವತೆಗಳಾದ ಭದ್ರಕಾಳಿ,ಅಯ್ಯಪ್ಪ, ಕಮ್ಮರಟಪ್ಪ, ಬೊಟ್ಟ್‌ಲಪ್ಪ ದೇವರುಗಳ ಸಂತೃಪ್ತಿಗಾಗಿ ಆಚರಿಸಲ್ಪಡುವ 'ಬೋಡ್‌ಹಬ್ಬ' ವೇಷ ಬದಲಾವಣೆಯ ವಿನೋದದ ಹಬ್ಬವೆಂದೇ ಗುರುತಿಸಿಕೊಂಡಿದೆ. ಹಾಸ್ಯದ ನೆಪದಲ್ಲಿ ಅಶ್ಲೀಲ ಪದಗಳು ಇಣುಕು ಹಾಕಿದರೂ ಆಯಾ ಪಾತ್ರಗಳ ಗುಣ ಮನೋಧರ್ಮಕ್ಕೆ ಅನುಗುಣವಾಗಿ ಬಳಕೆಯಾಗಿದ್ದು; ಭಾಷಾ ವೈಶಿಷ್ಟ್ಯ ಮತ್ತು ಗೀತ ವೈಶಿಷ್ಟ್ಯವನ್ನು ಗಮನಿಸಬಹುದಾಗಿದೆ.

ಜನಪದ ರಂಗಭೂಮಿಯ ಉಗಮವನ್ನು, ಕೊಡವ ನಾಟಕಗಳ

ಪ್ರಾಚೀನ ರೂಪವನ್ನು 'ಬೋಡ್‌ನಮ್ಮೆರ ಆಟ್'ಗಳಲ್ಲಿ ಗುರುತಿಸುವ ಪ್ರಯತ್ನಗಳು ನಡೆದಿರುವುದು ಗಮನಾರ್ಹವಾದುದು.

ಕೊಡವ ಜನಪದ ನೃತ್ಯಗಳು ಕೊಡವ ನಾಟಕಗಳ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿವೆ. ಹಲವು ಕೊಡವ ನಾಟಕಗಳಲ್ಲಿ ಕೊಡವ ಜನಪದ ನೃತ್ಯಗಳನ್ನು ಬಳಸಿಕೊಳ್ಳಲಾಗಿದೆ.

ವಾದ್ಯ ಮತ್ತು ಗೀತ ಪ್ರಧಾನ ನೃತ್ಯವಾದ 'ತೇನಾಟ್' ವಿರಾಜಪೇಟೆ ತಾಲೂಕಿನ ೨ ನೇ ರುದ್ರುಗುಪ್ಪೆ ಗ್ರಾಮದ ಜೋಡು ಭಗವತಿ ಉತ್ಸವದಲ್ಲಿ ಮಾತ್ರ ನರ್ತಿಸಲ್ಪಡುತ್ತದೆ. ಈ ಜನಪದ ನೃತ್ಯದ ನೃತ್ಯಗೀತೆ 'ತೇನ್‌ಪಾಟ್' ಇತ್ತೀಚಿನ ದಿನಗಳಲ್ಲಿ ಹಾಡುವ ಉಮ್ಮತ್ತಾಟ್ ಗೀತೆಗಳಲ್ಲಿ ಸೇರ್ಪಡೆಗೊಂಡಿದೆ. ಒಂದೇ ಪ್ರದೇಶಕ್ಕೆ ಸೀಮಿತವಾದ ಈ ನೃತ್ಯವನ್ನು ಉಳಿಸಿ ಬೆಳೆಸುವ ಕಾರ್ಯ ಆಗಬೇಕಾಗಿದೆ.

ಕೊಡವ ಜನಪದ ನೃತ್ಯಗಳ ಇತಿಹಾಸವನ್ನು ಅವಲೋಕಿಸಿದಾಗ ಆರಂಭಿಕ ಹಂತದಲ್ಲಿ ಕೇವಲ ಮನೆಗಳಿಗೆ, ಊರಿನ ಹಬ್ಬ ಹಾಗೂ ದೇವಸ್ಥಾನಗಳಿಗೆ ಸೀಮಿತವಾಗಿರುವುದನ್ನು ಗಮನಿಸಬಹುದು. ನಂತರದ ದಿನಗಳಲ್ಲಿ ಹಿರಿಯ ಜನಪದ ಕಲಾವಿದರ, ಕಲಾ ಪ್ರೇಮಿಗಳ ಪ್ರಯತ್ನದಿಂದ ಜನಪದ ನೃತ್ಯಗಳು ಬೆಳವಣಿಗೆಯನ್ನು ಕಂಡವು. ಅನಂತರದ ದಿನಗಳಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಉಗಮದ ನಂತರ ಕೊಡವ ಜನಪದ ನೃತ್ಯಗಳು ಸಮರೋಪಾದಿಯಲ್ಲಿ ಬೆಳವಣಿಗೆಯನ್ನು ಕಂಡವು. ಇಲ್ಲಿ ಅಕಾಡೆಮಿಯ ಪ್ರಯತ್ನ ಗಮನೀಯವಾದುದು.

ಇದರೊಂದಿಗೆ ಕೊಡವ ಸಮಾಜದಂತಹ ಸಾಮಾಜಿಕ ಸಂಘ ಸಂಸ್ಥೆಗಳು, ಜನಪದ ಕಲಾವಿದರು ಕಟ್ಟಿಕೊಂಡ ಸಾಂಸ್ಕೃತಿಕ ಸಂಘಗಳು, ಸಾಹಿತ್ಯಪರ ಸಂಘ ಸಂಸ್ಥೆಗಳು ಕೈಜೋಡಿಸಿದೆ. ಅಲ್ಲಲ್ಲಿ ಆಧುನಿಕತೆಯ ಪ್ರಭಾವದಿಂದ ನೃತ್ಯ ಭಂಗಿಗಳಲ್ಲಿ, ವಿನ್ಯಾಸಗಳಲ್ಲಿ, ಹಾಡುಗಳಲ್ಲಿ, ಕೆಲವು ಬದಲಾವಣೆಗಳಿದ್ದರೂ; ಕೊಡವ ಜನಪದ ನೃತ್ಯಗಳ ಬೆಳವಣಿಗೆಯಲ್ಲಿ ಈ ಹಂತವನ್ನು ಮೈಲಿಗಲ್ಲೆಂದು ಪರಿಗಣಿಸಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಜನಪದ ಕಲಾಮೇಳಗಳಲ್ಲಿ, ದೇಶ ವಿದೇಶಗಳಲ್ಲಿ

ನಡೆಯುವ ಕಲಾ ಸಮ್ಮೇಳನಗಳಲ್ಲಿ ಕೊಡವ ಜನಪದ ನೃತ್ಯಗಳು ಪ್ರದರ್ಶನಗೊಳ್ಳುತ್ತಿವೆ. ಜಾಗತೀಕರಣ ಹಾಗೂ ಆಧುನೀಕರಣದ ಭರಾಟೆಯಲ್ಲಿ ಈ ಪ್ರಯತ್ನಗಳು ಅತ್ಯಲ್ಪವೆಂದೇ ಹೇಳಬಹುದು.

ಈ ಹಿನ್ನಲೆಯಲ್ಲಿ ಯುವಜನರಲ್ಲಿ ಜನಪದ ಸಂಸ್ಕೃತಿ ಹಾಗೂ ಕಲೆಯಲ್ಲಿ ಆಸಕ್ತಿಯನ್ನು ಬೆಳೆಸುವ, ಕೊಡವ ಸಂಸ್ಕೃತಿಯನ್ನು ಅರುಹುವ, ಪೋಷಿಸುವ ಕಾರ್ಯ ಆಗಬೇಕಾಗಿದೆ. ಜನಸಾಮಾನ್ಯರಲ್ಲಿ ಕಲಾಪ್ರೇಮವನ್ನು ಬೆಳೆಸುವ ವಾತಾವರಣವೂ ನಿರ್ಮಾಣವಾಗಬೇಕಾಗಿದೆ. ಸಮಾಜದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿಗಳಾದಿಯಾಗಿ ಸಂಘ ಸಂಸ್ಥೆಗಳು ತಮ್ಮ ಹೊಣೆಯನ್ನರಿತು ನಡೆದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಇದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡುವಲ್ಲಿ ಸಂಘ ಸಂಸ್ಥೆಗಳು, ಅಕಾಡೆಮಿಗಳು ಹಾಗೂ ಸರಕಾರ ಗುರುತರ ಪಾತ್ರವನ್ನು ವಹಿಸಬೇಕಾಗಿದೆ.

ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ನಮ್ಮ ಜನಪದ ನೃತ್ಯಗಳು ಮುಂದಿನ ಪೀಳಿಗೆಗೆ ಕಾಪಿಡುವಂತಹ ಸಂಪತ್ತಾಗಿದ್ದು; ಇವುಗಳನ್ನು ಉಳಿಸಿ, ಬೆಳೆಸಿ, ಪೋಷಿಸುವ ಕೈಂಕರ್ಯದಲ್ಲಿ ಸಮಾಜದ ಪ್ರತಿಯೊಬ್ಬ ಸದಸ್ಯನು ತೊಡಗಿಸಿಕೊಂಡಾಗ ಮಾತ್ರ ಅದು ಸಹಜವಾಗಿ ಅಭಿವೃದ್ಧಿ ಪಥದತ್ತ ಮುನ್ನಡೆಯಲು ಸಾಧ್ಯವಾಗುತ್ತದೆ.

ಪರಾಮರ್ಶನ ಗ್ರಂಥ ಸೂಚಿ

ಕನ್ನಡ ಮತ್ತು ಕೊಡವ ಭಾಷಾ ಕೃತಿಗಳು

೧.	ಅಪ್ಪಣ್ಣ ಬಾಚರಣಿಯಂಡ ಮತ್ತು ರಾಣು ಅಪ್ಪಣ್ಣ	ಕೊಡಗ್‌ರ ಆರಬೇರ,ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,ಮಡಿಕೇರಿ, ೨೦೦೧.
೨.	ಉತ್ತಪ್ಪ ಅಳಮಂಡ	ಆನೆಬೆಪ್ಪ್‌ನಾಡ್,ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,ಮಡಿಕೇರಿ, ೧೯೯೯.
೩.	ಕರುಂಬಯ್ಯ ಪುಗ್ಗೆರ	ಉಮ್ಮತಾಟ್‌ಪಾಟ್ ಪಳಂಜೊಲ್ಲ್, ದೇವಣಗೇರಿ, ೧೯೭೫.
೪.	ಕೃಷ್ಣಯ್ಯ ಡಿ.ಎನ್.	ಕೊಡಗಿನ ಇತಿಹಾಸ ಮೈಸೂರು ವಿ.ವಿ,೧೯೯೫.
೫.	ಕೇಶವಾಚಾರ್ಯ ಜಿ.ಎಸ್.	ಕೊಡಗು ಜಿಲ್ಲೆ: ದರ್ಶನ, ಐಬಿಎಚ್ ಪ್ರಕಾಶನ ಬೆಂಗಳೂರು, ೧೯೭೮.
೬.	ಗಣಪತಿ ಬಿ.ಡಿ	ಕೊಡವರು(ಜೀವನ ಮತ್ತು ಪದ್ಧತಿಗಳು) ಕೊಡಗು, ೧೯೬೭.
೭.	ಗಣಪತಿ ಬಿ.ಡಿ	ಕೊಡಗು ಮತ್ತು ಕೊಡವರು ಕೊಡಗು ಅಂಡ್ ಕಂಪೆನಿ ಮಡಿಕೇರಿ, ೧೯೬೨.
೮.	ಗಣಪತಿ ಆಪಾಡಂಡ	ಕೊಡವಡ ಆರಬೇರ ಪುರಾಣ ಕೊಡಗು, ೧೯೪೫.
೯.	ಚನ್ನಬಸಪ್ಪ ಗೊ.ರು	(ಸಂ) ಕರ್ನಾಟಕ ಜನಪದ ಕಲೆಗಳು ಬೆಂಗಳೂರು, ೧೯೭೭.
೧೦.	ಚಿಣ್ಣಪ್ಪ ನಡಿಕೇರಿಯಂಡ	(ಸಂ) ಪಟ್ಟೋಲೆ ಪಳಮೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,ಮಡಿಕೇರಿ, ೨೦೦೨. (ನಾಲ್ಕನೇ ಮುದ್ರಣ)
೧೧.	ಚಂಗಪ್ಪ ಪೇರಿಯಂಡ	ಕೊಡವಡ ಅಂದೋಳತ್ ಪಾಟ್ ನಾಡಕಲಾಭಿಮಾನಿಗಳು ಕೊಡಗು, ೧೯೬೧.

೧೨. ಚಂಗಪ್ಪ ಪರದಂಡ — ಶ್ರೀ ಇಗ್ಗುತಪ್ಪ ದೇವರು, ಕೊಡಗು ೨೦೦೦

೧೩. ಚಂಗಪ್ಪ ಪಳಂಗಂಡ — ಇಂದ್ ಕೊಡವ ಪದ್ಧತಿ, ಸಂಪಿಗೆ ಪ್ರಕಾಶನ ಕೊಡಗು, ೨೦೦೮

೧೪. ಚಂದ್ರಶೇಖರ ಕಂಬಾರ — (ಸಂ) ಕನ್ನಡ ಜಾನಪದ ವಿಶ್ವಕೋಶ, (ಸಂಪುಟ೧) ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು,೧೯೮೫

೧೫. ದೇವಯ್ಯ ಪಾಲಂದಿರ — ಕೊಡವ ಪಡಿಮ, ವಿರಾಜಪೇಟೆ ೨೦೦೬

೧೬. ನಾಗರಾಜು ಎಂ.ಜಿ. — ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೧೭. ಬಿದ್ದಪ್ಪ ಪುಗ್ಗೇರ ಪಿ. — ನೆಲ್ಲಕ್ಕಿ ನಡುಬಾಡೆ,ಅಖಿಲ ಕೊಡವ ಸಮಾಜ, ವಿರಾಜಪೇಟೆ ೧೯೯೧.

೧೮. ಬೊಳ್ಳಪ್ಪ ಪಂಜೇರಿರ — ಕೊಡವ ಪತ್ತಾಯ (ಕೊಡವ ಪದ್ಧತಿ – ಪರಂಪರೆರ ಪರಿಚಯ), ವಾರ್ತಾ ಕಮ್ಯುನಿಕೇಷನ್ಸ್ (ರಿ.), ಮಡಿಕೇರಿ ೨೦೦೯

೧೯. ಬೋಪಯ್ಯ ಪಂಜೇರಿರ — ಕೊಡವ ಪತ್ತಾಯ (ಕೊಡವ ಪದ್ಧತಿ – ಪರಂಪರೆರ ಪರಿಚಯ) ವಾರ್ತಾ ಕಮ್ಯುನಿಕೇಷನ್ (ರಿ). ಮಡಿಕೇರಿ ೨೦೦೯

೨೦. ಬೋಪಯ್ಯ ಪುಗ್ಗೇರ ಪಿ. — ಬೈತೂರಪ್ಪಂಡ ಮಹಿಮೆ, ಕೊಡವತಕ್ಕ್ ಪರಿಷತ್, ವಿರಾಜಪೇಟೆ ೨೦೦೬.

೨೧. ಬೋರಲಿಂಗಯ್ಯ ಹಿ.ಚಿ. — ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೬

೨೨. ಮಹಮದ್ ಮೀನಿಕ್ಕರ.ಎ. — ಕೊಡಗಿನ ಸಾಹಿತ್ಯ ದರ್ಶನ, ಕಾವ್ಯಾಲಯ. ಮೈಸೂರು, ೨೦೦೫.

೨೩. ಮುತ್ತಣ್ಣ ಕೆ.ಪಿ. — ಜಗತ್ತಿಗೊಂದೇ ಕೊಡಗು, ಬೆಂಗಳೂರು,೧೯೯೭.

೨೪. ಮುತ್ತಣ್ಣ ಐ.ಮಾ. — ಕೊಡವ ಕನ್ನಡ ನಿಘಂಟು

ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು, ೧೯೮೩

೨೫. ರಾಜಶೇಖರ, ಪಿ.ಕೆ. (ಸಂ) ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ, ಹೊನ್ನಾರು ಜನಪದಗಾಯಕರು ಮಾನಸ ಗಂಗೋತ್ರಿ, ಮೈಸೂರು, ೧೯೯೦.

೨೬. ರಾಮಾನುಜಂ, ಪಿ.ಎಸ್. ಕೊಡವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೨೭. ವಿಜಯ್ ಪೂಣಚ್ಚತಂಬಂಡ ಆಧುನಿಕ ಕೊಡಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೮. ಶಂಕರನಾರಾಯಣ ಭಟ್, ಎದುರ್ಕಳ. ಕೆ. ಶ್ರೀ ಇಗ್ಗುತ್ತಪ್ಪ ಮಹಾತ್ಮೆ, ಶ್ರೀ ರಾಮಕೃಷ್ಣ ಪ್ರಕಾಶನ, ಭಾಗಮಂಡಲ, ಕೊಡಗು, ೧೯೯೯

೨೯. ಶಂಭು ಸುಬ್ಬಯ್ಯ, ಮೇವಡ ಕಡೇಕಾಲ ಆಚಾರ (ಚಾವು ಪಿಞ ಮಾದ ಪದ್ಧತಿ), ಕೊಡವ ತಕ್ಕ್ ಪರಿಷತ್, ವಿರಾಜಪೇಟೆ, ೨೦೦೫.

೩೦. ಸೂರ್ಯನಾಥ, ಯು.ಕಾಮತ್ (ಮು.ಸಂ.) ಭಾರತದ ಗ್ಯಾಸೆಟಿಯರ್ ಕರ್ನಾಟಕ ರಾಜ್ಯ, ಕೊಡಗು ಜಿಲ್ಲೆ ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು, ೧೯೯೨.

ಆಂಗ್ಲ ಭಾಷಾ ಕೃತಿಗಳು

1. Ashok Alva Olasari (Tran: Thirumaleshwara Bhat. N), Regional Resources Centre for Folk Performing Arts, M.G.M. College, Udupi,2001

2. Ganapathy B.D. Kodavas, A Compreshensive Study, Jyothi Prakashana, Temple Road, Madikeri, 1980.

3. Krishna lyer L.A. The Coorg Tribes And Castes, Madras, 1948.

4. Krishnamurthy Hanur — Encyclopaedia of the Folk Culture of Karnataka, Madras, 1991.

5. Moegling H. — Coorg Memoirs; An Account of coorg, And of the Coorg Mission, Bangalore, 1855.

6. Muthanna I.M — A Tiny Model State of South India, Coorg, 1953.

7. Muthanna I.M. — Coorg Memoirs (The Story of the Kodavas), Mysore, 1971.

8. Richter G. — Gazetteer of Coorg, Delhi, 1870.

9. Srinivas M.N. — Religion and Society Among the Coorgs Of South India, Media Promoters and Publishers, Pvt Ltd., Bombay, 1989.(Re print Edn)

10. Subbayya K.K. — Archaeology of Coorg, Mysore, 1978.

11. Surendra Rao, B. & Lokesh K.M — (ed) Coorg Invented, Madikeri, 1998.

ಲೇಖನಗಳು ಮತ್ತು ಪ್ರಬಂಧಗಳು

೧. ಅನಂತ ಪದ್ಮನಾಭರಾವ್ ಎಂ.ಎಸ್. — 'ಕೊಡಗಿನ ಜನಪದ ಸಾಹಿತ್ಯ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ಸೆಪ್ಟೆ –ಡಿಸೆಂ)ಬೆಂಗಳೂರು, ೧೯೪೫

೨. ಅನಿಲ್ ಎಚ್.ಟಿ. — "ದೇವರನ್ನೇ ಬಯ್ಯುವ .ಬೋಡುಹಬ್ಬ", ಸುಧಾ ವಾರಪತ್ರಿಕೆ, ೩೦–೦೭–೧೯೯೫, ಬೆಂಗಳೂರು, ೧೯೯೫

೩. ಅಪ್ಪಣ್ಣ, ಬಾಚರಣಿಯಂಡ ಪಿ. — 'ಕೊಡವ ಜಾನಪದ ಸಾಹಿತ್ಯ ಸಿರಿ'", ತೂಕ್‌ಬೊಳಕ್ ಕೊಡವ ವಾರಪತ್ರಿಕೆ, ೧೮–೧೨–೨೦೦೮ ವಿರಾಜಪೇಟೆ, ೨೦೦೮

೪. ಅಪ್ಪಣ್ಣ ಬಾಚಮಣಿಯಂಡ ಪಿ. 'ಕೊಡಗ್‌ರ ಜಾನಪದ ನೃತ್ಯ- ಉಮ್ಮತ್ತಾಟ್', ಕೊಡವಾಮೆ(ತ್ರೈಮಾಸಿಕ ಸಂಚಿಕೆ),ಕರ್ನಾಟಕ ಕೊಡವ ಸಹಿತ್ಯ ಅಕ್ಕಾಡೆಮಿ, ಮಡಿಕೇರಿ, ೨೦೦೦

೫. ಅಪ್ಪಣ್ಣ ಬಾಚರಣಿಯಂಡ 'ಕೊಡಗ್‌ರ ವೀರ ಪರಂಪರೆ', ಕೊಡವ ಪುದುಮೆ (ರಾಷ್ಟ್ರೀಯ ಕೊಡವ ಸಾಂಸ್ಕೃತಿಕ ಮೇಳ ೧೯೯೮ ವಿಶೇಷ ಸಂಚಿಕೆ), ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೧೯೯೮

೬. ಕರುಂಬಯ್ಯ ಪುಗ್ಗೇರ. ಎಂ. 'ಕೊಡಗಿನ ಜನಪದ ನೃತ್ಯ ಕಲೆ', ವೀರರಾಜೇಂದ್ರಪೇಟೆ ಕರ್ನಾಟಕ ಸಂಘದ ಕಟ್ಟಡ ಉದ್ಘಾಟನೆ ಸ್ಮರಣ ಸಂಚಿಕೆ, ವೀರರಾಜೇಂದ್ರ ಪೇಟೆ, ೧೯೭೫-೭೭.

೭. ಕರುಂಬಯ್ಯ ಪುಗ್ಗೇರ ಎಂ. 'ಕೊಡವ ಜಾನಪದ', ಕೊಡವ ಪುದುಮೆ (ರಾಷ್ಟ್ರೀಯ ಕೊಡವ ಸಾಂಸ್ಕೃತಿಕ ಮೇಳ ೧೯೯೮ ವಿಶೇಷ ಸಂಚಿಕೆ)ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೧೯೯೮

೮. ಕರುಂಬಯ್ಯ ಪುಗ್ಗೇರ ಎಂ. 'ಕೊಡಗಿನ ಜನಪದ ಸಾಹಿತ್ಯ', ಕನ್ನಡ ಕಾವೇರಿ (ಸ್ಮರಣ ಸಂಚಿಕೆ)

೯. ಕೃಷ್ಣಯ್ಯ ಕೆ.ಆರ್. 'ನಾ ಮೆಚ್ಚ್‌ನ ಕೊಡವ ಸಾಹಿತ್ಯ', ಕೊಡವ ಪುದುಮೆ (ರಾಷ್ಟ್ರೀಯ ಕೊಡವ ಸಾಂಸ್ಕೃತಿಕ ಮೇಳ ೧೯೯೮ ವಿಶೇಷ ಸಂಚಿಕೆ) ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೧೯೯೮

೧೦.ಕೃಷ್ಣಯ್ಯ ಕೆ.ಆರ್ 'ಕೊಡವ ಜಾನಪದ ಸಾಹಿತ್ಯ', ಸ್ಪಂದನ (ಗೋಣಿಕೊಪ್ಪಲು ಸ್ಪಂದನ ನಾಟಕ ಸಂಘದ ನೆನಪಿನ ಸಂಚಿಕೆ) ಗೋಣಿಕೊಪ್ಪಲು, ೧೯೮೫

೧೧.ಗಣಪತಿ ಮೇವಡ 'ಕಾಕೋಟಚ್ಚ ನಡೆದು ಬಂದ ದಾರಿ' ಶತಮಾನೋತ್ಸವ ಸ್ಮರಣ ಸಂಚಿಕೆ (೧೮೮೪-

	೧೯೮೪) ಸರ್ಕಾರಿ ಪ್ರಾಥಮಿಕ ಶಾಲೆ ಕಾಕೋಟು ಪರಂಬು, ೧೯೮೪
೧೨.ಗಾಂಧಿ ಎಂ.ಬಿ.	'ಕೊಡಗಿನ ಜಾನಪದ ಸಂಪತ್ತು; ಸ್ವರೂಪ ಮತ್ತು ಸಂಗ್ರಹಕಾರ್ಯ', ಚಂದನ (ಕೊಡಗು ಜಿಲ್ಲಾ ೩ನೇ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ) ಸೋಮವಾರಪೇಟೆ.
೧೩.ನಂಜಣ್ಣ, ಬೆಸೂರು	'ಜಾನಪದದಲ್ಲಿ ಕೊಡಗು', ವೀರರಾಜಪೇಟೆ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸ್ಮರಣಸಂಚಿಕೆ, ವೀರಾಜಪೇಟೆ, ೧೯೮೬
೧೪.ರಾಣು ಅಪ್ಪಣ್ಣ, ಬಾಚರಣಿಯಂಡ	'ಕೊಡವ ಜಾನಪದ ವಿಶೇಷತೆ' ಕೊಡವ ಪುದುಮೆ(ರಾಷ್ಟ್ರೀಯ ಕೊಡವ ಸಾಂಸ್ಕೃತಿಕ ಮೇಳ ವಿಶೇಷ ಸಂಚಿಕೆ) ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೧೯೯೮
೧೫. ರಾಮಕೃಷ್ಣ ವಿ.ಎಸ್.	'ಕೊಡಗ್‌ರ ಪರಂಪರೆ', ಕೊಡವ ಪುದುಮೆ, (ರಾಷ್ಟ್ರೀಯ ಕೊಡವ ಸಾಮಸ್ಕೃತಿಕ ಮೇಳ ವಿಶೇಷ ಸಂಚಿಕೆ) ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ೧೯೯೮
೧೬. ರಾಮಕೃಷ್ಣ ಉಡುಪ. ಕೆ.	'ಕೊಡಗಿನ ಸಾಹಿತ್ಯ', ಮಡಿಕೇರಿ ಸಾಹಿತ್ಯ ಸಮ್ಮೇಳನ ಸಂಪುಟ ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧
೧೭.ಲಕ್ಷ್ಮಣ ತೆಲ[illegible]ಎ.	'ಕೊಡಗಿನಲ್ಲಿ ವಿಶಿಷ್ಟ ಸಂಸ್ಕೃತಿ' ಪರಿಪೂರ್ಣ (ಸ್ಮರಣ ಸಂಚಿಕೆ) ದ್ವಿಶತಮಾನೋತ್ಸವ ಸಮಿತಿ, ಸಂತ ಅನ್ನಮ್ಮ ದೇವಾಲಯ, ವೀರರಾಜೇಂದ್ರಪೇಟೆ, ೧೯೯೨
೧೮. ವಿಜಯ್ ಪೂಣಚ್ಚ, ತಂಬಂಡ.	'ಕೊಡವ ಜನಪದ ಮಹಾಕಾವ್ಯಗಳ ಅಧ್ಯಯನ', ಕರ್ನಾಟಕ ಜನಪದ ಮಹಾಕಾವ್ಯಗಳು (ಸಂ)

ಡಾ.ತೀ.ನಂ. ಶಂಕರನಾರಾಯಣ, ಕರ್ನಾಟಕ ಜಾನಪದ ಮತ್ತು ಯುಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೧೯. ವಿಜಯ್ ಪೂಣಚ್ಚ ತಂಬಂಡ — 'ವಸಾಹತುಕಾಲದ ಕೊಡಗಿನ ಸಾಂಸ್ಕೃತಿಕ ಅಭಿವ್ಯಕ್ತಿಯಾಗಿ ಪಟ್ಟೋಲೆ ಪಳಮೆ ಒಂದು ಹಿನ್ನೋಟ', ಅರಿವು ಬರಹ, ಸಂಚಿಕೆ ೮, ಮಂಗಳ ಗಂಗೋತ್ರಿ, ೧೯೯೬

೨೦. ಶಂಕರನಾರಾಯಣ ಭಟ್ ಎದುರ್ಕಳ — 'ಕೊಡಗಿನ ಸಾಂಸ್ಕೃತಿಕ ಪರಂಪರ', ಮಡಿಕೇರಿ ಸಾಹಿತ್ಯ ಸಮ್ಮೇಳನ ಸಂಪುಟ ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೨೧. ಶೋಭ ಕೆ.ಎಸ್. — 'ಕೊಡಗು ಜಾನಪದ, ಕೃಷಿ ಸಂಸ್ಕೃತಿಯ ಸಿರಿ' ಜಾನಪದ ೧೯೯೧ (ಸಂ) ಭಟ್ಟ, ಜಿ.ಎಸ್. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೩


೨೨. ಸುಬ್ಬರಾವ್ ಎ. — 'ಕೊಡಗಿನ ಜಾನಪದ ನೃತ್ಯಗಳು', ಸಾಹಿತ್ಯ ಕಾವೇರಿ (ಕೊಡಗು ಜಿಲ್ಲಾ ೨ನೇ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ) ಮಡಿಕೇರಿ, ೧೯೭೯

೨೩. ವಿಲ್ಯಂ ಮಾಡ್ತ — 'ಕನ್ನಡ ಜನಪದ ಸಾಹಿತ್ಯ, ಶೈಲಿ–ಭಾಷಾ ವೈಜ್ಞಾನಿಕ ವಿವೇಚನೆ', ಕರ್ನಾಟಕ ಜಾನಪದ, (ಪ್ರ.ಸಂ) ಡಾ. ಎಸ್. ಕರೀಂಖಾನ್, ಕರ್ನಾಟಕ ಜಾನಪದ ಮತ್ತುಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೯

ಕೊಡವ ಜನಪದ ನೃತ್ಯಗಳ ಛಾಯಾಚಿತ್ರಗಳು



ಪುತ್ತರಿ ಕೋಲಾಟ್



ಮೇದ ಪಡ್‌ಮದ ಹಿಮ್ಮೇಳದೊಂದಿಗೆ ಕೊಂಬಾಟ್



ಕೊಂಬಾಟ್‌ನಲ್ಲಿ ಸೂತ್ರ ಮಡಿಪ



ಕೊಂಬಾಟ್ ನೃತ್ಯದ ಒಂದು ನೋಟ



ಪಡ್‌ಮ ಬಾರಿಸುತಿರುವ ಮೇದ



ಕೊಂಬಾಟ್‌ನಲ್ಲಿ
ಮುಂಬಾಟ್‌ಕಾರ



ಪರೆಯಕಳಿ





ಕತ್ತಿಯಾಟ್‌ನ ಒಂದು ನೋಟ




ಕತ್ತಿಯಾಟ್‌ಗೆ ಹಿಮ್ಮೇಳ



ಉರ್‌ಟಿಕೊಟ್ಟ್ ಆಟ್‌ಗೆ ಹಿಮ್ಮೇಳ



ಉರ್‌ಟಿಕೊಟ್ಟ್ ಆಟ್‌ನ ಕಲಾವಿದರು




ಉಮ್ಮತ್ತಾಟ್‌ನ ಕಲಾವಿದರು



ಅಂಗಕಳಿ ಒಂದು ನೋಟ




ಕಪ್ಪೆಯಾಟ್‌ನ ಒಂದು ನೋಟ





ಪರೆಯಕಳಿ



ಪಾಲಗತ್ತಾಟ್‌ನ ಒಂದು ನೋಟ



ಬೋಡ್‌ಕಳಿ





ಪಾರಣ ಮಾನಿಯಲ್ಲಿ ಕುದುರೆ




ಬೋಡ್‌ಕಳಿಯಲ್ಲಿ ಪಾತ್ರಧಾರಿ



ಬೋಡ್‌ಕಳಿಯಲ್ಲಿ ಪಾತ್ರಧಾರಿಗಳು





ತೇನಾಟ್ ಕಲಾವಿದರು



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಮಡಿಕೇರಿ

2010-2011ನೇ ಕಾಲತ್‌ರ ಸಮಿತಿ ಸದಸ್ಯಂಗ

ಐಮುಡಿಯಂಡ ರಾಣಿ ಮಾಚಯ್ಯ	ಅಧ್ಯಕ್ಷೆ
ಚಿಲ್ಲಜಮ್ಮನ ನಾಣಮ್ಮಯ್ಯ ಸೋಮೇಶ್	ಸದಸ್ಯ
ಬಾಚರಣಿಯಂಡ ರಾಣು ಅಪ್ಪಣ್ಣ	ಸದಸ್ಯ
ಕೊರಕುಟ್ಟಿರ ಸರ ಚಂಗಪ್ಪ	ಸದಸ್ಯ
ಕಾಳಚಂಡ ಎ. ಪಳಂಗಪ್ಪ	ಸದಸ್ಯ
ಪೊನ್ನೀರ ಪ್ರಭು ಕಾವೇರಪ್ಪ	ಸದಸ್ಯ
ಮಂಡೇಪಂಡ ಗೀತಾ ಮಂದಣ್ಣ	ಸದಸ್ಯೆ
ವದಪಡ ಅಯ್ಯಪ್ಪ	ಸದಸ್ಯ
ಪಡಿಂಞಾರಂಡ ಎ. ಪ್ರಭುಕುಮಾರ್	ಸದಸ್ಯ
ತೇಲಪಂಡ ಕವನ್ ಕಾರ್ಯಪ್ಪ	ಸದಸ್ಯ
ಮಡೆಯಂಡ ಸಬಿತಾ ಕಾರ್ಯಪ್ಪ	ಸದಸ್ಯೆ
ಬೀನಂಡ ಎಸ್. ಪೂಣಚ್ಚ	ಸದಸ್ಯ
ವಿನೋದ್‌ಚಂದ್ರ	ರಿಜಿಸ್ಟ್ರಾರ್

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಮಡಿಕೇರಿ

2012-2013ನೇ ಕಾಲತ್'ರ ಸಮಿತಿ ಸದಸ್ಯಂಗ

ಶ್ರೀ ಅಡ್ಡಂಡ ಸಿ. ಕಾರ್ಯಪ್ಪ	ಅಧ್ಯಕ್ಷ
ಪ್ರೊ. ಇಟ್ಟೀರ ಕೆ. ಬಿದ್ದಪ್ಪ	ಸದಸ್ಯ
ಶ್ರೀಮತಿ ಚೇಂದಿರ ನಿರ್ಮಲಾ ಬೋಪಣ್ಣ	ಸದಸ್ಯೆ
ಶ್ರೀ ಮಾಳೇಟಿರ ಅಭಿಮನ್ಯುಕುಮಾರ್	ಸದಸ್ಯ
ಶ್ರೀ ಬೊಟ್ಟೋಳಂಡ ಮಿಟ್ಟು ಪೂಣಚ್ಚ	ಸದಸ್ಯ
ಶ್ರೀ ಚರ್ಮಂಡ ಪೂವಯ್ಯ (ಅಪ್ಪುಣು)	ಸದಸ್ಯ
ಶ್ರೀ ಕುಡಿಯರ ತಮ್ಮಯ್ಯ	ಸದಸ್ಯ
ಶ್ರೀಮತಿ ಬಡಕಡಮ್ಮಂಡ ಕಸ್ತೂರಿ ಗೋವಿಂದಮ್ಮಯ್ಯ	ಸದಸ್ಯೆ
ಶ್ರೀಮತಿ ಚೇಂದಂಡ ಸುಮಿ ಸುಬ್ಬಯ್ಯ	ಸದಸ್ಯೆ
ಶ್ರೀ ಮೇಲತಂಡ ಎ. ರಮೇಶ್	ಸದಸ್ಯ
ಶ್ರೀಮತಿ ನರೆಯಂಡಮ್ಮಂಡ ಉಮಾ ಪ್ರಭು	ಸದಸ್ಯೆ
ಶ್ರೀ ನಾಪಂಡ ರವಿ ಕಾಳಪ್ಪ	ಸಹ ಸದಸ್ಯ
ಶ್ರೀ ಮೋಟನಾಳಿರ ಸನ್ನಿ ಕಾರ್ಯಪ್ಪ	ಸಹ ಸದಸ್ಯ
ಶ್ರೀ ಮಂಡೇಪಂಡ ಬೋಸು ಮೊಣ್ಣಪ್ಪ	ಸಹ ಸದಸ್ಯ
ಶ್ರೀಮತಿ ಎನ್. ಶಾಂತಮ್ಮ	ರಿಜಿಸ್ಟ್ರಾರ್

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಮಡಿಕೇರಿ

2014-2015ನೇ ಕಾಲತ್‌ರ ಸಮಿತಿ ಸದಸ್ಯಂಗ

ಬಿದ್ದಾಂಟಂಡ ಎಸ್. ತಮ್ಮಯ್ಯ	ಅಧ್ಯಕ್ಷ
ಡಾ|| ಮೇಚಿರ ಸುಭಾಷ್ ನಾಣಯ್ಯ	ಸದಸ್ಯ
ಪಡಿಞಾರಂಡ ಜಿ. ಅಯ್ಯಪ್ಪ	ಸದಸ್ಯ
ಚೀರಮ್ಮನ ವಾಣಿ ಚಂಗುಮ್ಮಯ್ಯ	ಸದಸ್ಯೆ
ಮುಲ್ಲೇಂಗಡ ಬೇಬಿ ಚೋಂದಮ್ಮ	ಸದಸ್ಯೆ
ಮದ್ರೀರ ಸಂಜು ಬೆಳ್ಯಪ್ಪ	ಸದಸ್ಯ
ಐಮ[illegible] ಭಾಸ್ಕರ	ಸದಸ್ಯ
ಡಾ. ತೀತಿರ ರೇಖಾ ವಸಂತ್	ಸದಸ್ಯೆ
ಮೇದರ ರಾಣಿ	ಸದಸ್ಯ
ಆಪಾಡಂಡ ರಘು	ಸದಸ್ಯ
ಕುಡಿಯಡ ಬೋಪಯ್ಯ	ಸದಸ್ಯ
ಚೋವಂಡ ಎಸ್. ಬೋಪಯ್ಯ	ಸದಸ್ಯ
ಕಾಳಚಂಡ ಜಿ. ಕಾರ್ಯಪ್ಪ	ಸದಸ್ಯ
ಅಣ್ಣೀರ ಹರೀಶ್ ಮಾದಪ್ಪ	ಸದಸ್ಯ
ಮಂಗಲಾ ವೆಂ. ನಾಯ್ಕ	ರಿಜಿಸ್ಟ್ರಾರ್

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಮಡಿಕೇರಿ



ಮುಲ್ಲೇಂಗಡ ರೇವತಿ ಪೂವಯ್ಯ

ಶ್ರೀಮಂಗಲನಾಡು ನಾಲ್ಕೇರಿ ಗ್ರಾಮದ ಚೆಪ್ಪುಡಿರ ಮುದ್ದಪ್ಪ ನಳಿನಿ ದಂಪತಿಯರ ಪುತ್ರಿ. ಸಾಹಿತ್ಯದ ವಿದ್ಯಾರ್ಥಿನಿಯಾಗಿದ್ದು, ವಿರಾಜಪೇಟೆಯ ಕಾವೇರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಕೊಡವ ಜಾನಪದ ಮತ್ತು ಸಾಹಿತ್ಯ ಇವರ ಆಸಕ್ತಿಯ ಕ್ಷೇತ್ರ. ಕೊಡವ ಜನಪದ ನೃತ್ಯ ತರಬೇತಿ, ವಿಚಾರಗೋಷ್ಠಿ, ಕವಿಗೋಷ್ಠಿ ಹಾಗೂ ಸಂಶೋಧನೆಯಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡಿರುವ ಇವರ ಬರಹಗಳು ಹಲವು ಪತ್ರಿಕೆ, ಸಂಕಲನ ಹಾಗೂ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ತೂಕ್‌ಬೊಳಕ್ ವಾರಪತ್ರಿಕೆಯ ಉಪಸಂಪಾದಕಿಯಾಗಿರುವ ಇವರು ತಮ್ಮ ಬಾಳಸಂಗಾತಿ ಮಧೋಶ್ ಪೂವಯ್ಯ (ಪ್ರಕಾಶಕರು - ತೂಕ್‌ಬೊಳಕ್ ವಾರಪತ್ರಿಕೆ) ಮಕ್ಕಳಾದ ದರ್ಶನ್ ಸುಬ್ಬಯ್ಯ ಮತ್ತು ಮಮತ ದೇಚಕ್ಕ ಅವರೊಂದಿಗೆ ವಿರಾಜಪೇಟೆ ತಾಲೂಕು 2ನೇ ರುದ್ರುಗುಪ್ಪೆ ಗ್ರಾಮದಲ್ಲಿ ನೆಲೆಸಿದ್ದಾರೆ

ಇವರ ವಿಳಾಸ

ಮುಲ್ಲೇಂಗಡ ರೇವತಿ ಪೂವಯ್ಯ
ಇ/ಪ ಮುಲ್ಲೇಂಗಡ ಮಧೋಶ್ ಪೂವಯ್ಯ
ತೂಕ್‌ಬೊಳಕ್ ಪತ್ರಿಕೆ
ವಿರಾಜಪೇಟೆ.